ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 6 ಬುಧವಾರ 2022

ಸಂಪುಟ: 43 | ಸಂಚಿಕೆ: 346 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೆಬಿಜೆಯವರ ಭೂಮಂತ್ರ..

ಕರ್ನಾಟಕದಲ್ಲಿ ಅವಧಿಗೂ ಮುನ್ನ ವಿಧಾನಸಭಾ ಚುನಾವಣೆ: ಇದರ ಲಾಭ ಕಾಂಗ್ರೆಸ್‌ಗೋ ಇಲ್ಲ ಬಿಜೆಪಿಗೋ?

ಪುಟ-4

ಕಾರ್ಯಭಾರದ ಕೊರತೆ: 44 ಉಪನ್ಯಾಸಕರ ವರ್ಗಾವಣೆ

ಬೆಂಗಳೂರು,ಏ.5(ಕೆಎಂಶಿ)-ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಗತ್ಯ ಕಾರ್ಯಭಾರದ ಕೊರತೆ ಎದುರಿಸುತ್ತಿರುವ 44 ಉಪನ್ಯಾಸಕರನ್ನು ಕಾರ್ಯಭಾರವಿರುವ ಕಾಲೇಜುಗಳಿಗೆ ವರ್ಗಾಯಿಸಲು ತೀರ್ಮಾನಿಸಲಾಗಿದೆ ಎಂದು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ್ ತಿಳಿಸಿದ್ದಾರೆ. ಈ ಬಗ್ಗೆ ಪತ್ರಿಕಾ ● 9ನೇ ಪುಟಕ್ಕೆ

ರಾಜ್ಯ ಸರ್ಕಾರಿ ನೌಕರರಿಗೆ ಶೇ.2.75 ತುಟ್ಟಿಭತ್ಯೆ

ಬೆಂಗಳೂರು,ಏ.5(ಕೆಎಂಶಿ)-ರಾಜ್ಯ ಸರ್ಕಾರಿ ನೌಕರರಿಗೆ ಶೇ.2.75ರಷ್ಟು ತುಟ್ಟಿಭತ್ಯೆ ಹೆಚ್ಚಳ ಮಾಡಿ ಸರ್ಕಾರ ಆದೇಶಿಸಿದೆ. ಜನವರಿ 1ರಿಂದಲೇ ಪೂರ್ವಾನ್ವಯವಾಗುವಂತೆ ನೌಕರರ ತುಟ್ಟಿಭತ್ಯೆ ಹೆಚ್ಚಳವಾಗಲಿದ್ದು, ಇದಕ್ಕಾಗಿ 1447 ಕೋಟಿ ರೂ. ವಾರ್ಷಿಕ ವೆಚ್ಚ ಭರಿಸಲಿದೆ.

ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಹಂತದಲ್ಲೇ

ಸ್ಪೋಕನ್ ಇಂಗ್ಲಿಷ್

ಬೆಂಗಳೂರು, ಏ. 5- ಉದ್ದೇಶಿತ 'ಸರ್ಕಾರಿ ಮಾದರಿ ಶಾಲೆಗಳಲ್ಲಿ ಪ್ರಾಥಮಿಕ ಶಾಲಾ ಹಂತದಿಂದಲೇ 'ಸ್ಪೋಕನ್ ಇಂಗ್ಲಿಷ್' ಕಲಿಸಲಾಗುತ್ತದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದ್ದಾರೆ.



ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 'ಕನ್ನಡ ಶಾಲೆ ಉಳಿಸಿ: ಕನ್ನಡ ಬೆಳೆಸಿ' ಕುರಿತು ದುಂಡು ಮೇಜಿನ ಸಮ್ಮೇಳನವನ್ನು ಉದ್ಘಾಟಿಸಿ ಸಚಿವರು ಮಾತನಾಡಿದರು. ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಿ, ಬೆಳೆಸಲು ಕನ್ನಡ ಮಾಧ್ಯಮದ ಜೊತೆಗೆ ಸರ್ಕಾರಿ ಮಾದರಿ ಶಾಲೆಗಳಲ್ಲಿ ಸ್ಪೋಕನ್ ಇಂಗ್ಲಿಷ್ ಕಲಿಸಲಾಗುತ್ತದೆ ಎಂದರು.

ಹೋಬಳಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒಂದೊಂದು ಮಾದರಿ ಶಾಲೆಯನ್ನು ಅಭಿವೃದ್ಧಿಪಡಿಸುವ ಉದ್ದೇಶವಿದೆ. ಈ ಸಾಲಿನ ಬಜೆಟ್‌ನಲ್ಲಿ ಈ ಅಂಶವನ್ನು ಘೋಷಣೆ ಮಾಡಲಾಗಿದೆ. ಶಾಲೆಯ ಎಲ್ಲ ತರಗತಿಗಳಿಗೆ ಅಗತ್ಯ ಕೊಠಡಿಗಳು ಮತ್ತು ಎಲ್ಲ ಭಾಷೆ ಮತ್ತು ವಿಷಯಕ್ಕೆ ತಲಾ ಒಬ್ಬರು ಶಿಕ್ಷಕರು ಲಭ್ಯವಿರುವಂತಹ ವ್ಯವಸ್ಥೆ ಮಾಡಲಾಗುತ್ತದೆ. ಇಂತಹ ಶಾಲೆಗಳಲ್ಲಿ ಕನ್ನಡ ಕಲಿಕೆ ಜೊತೆಗೆ ಇಂಗ್ಲೀಷ್ ಕಲಿಕೆ ಹಾಗೂ ಶಿಕ್ಷಕರಿಂದ ಸ್ಪೋಕನ್ ಇಂಗ್ಲಿಷ್ ಕಲಿಸಿಕೊಡಲಾಗುತ್ತದೆ. ಇದೇ ಸಲಹೆಯನ್ನು ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪ ಅವರೂ ನೀಡಿದ್ದು, ಅದನ್ನು ಸ್ವೀಕರಿಸಲಾಗುತ್ತದೆ ಎಂದು ಸಚಿವ ನಾಗೇಶ್ ನುಡಿದರು.

ಖಾಸಗಿ ಶಾಲೆಗಳು ಮತ್ತು ಇಂಗ್ಲಿಷ್ ಮಾಧ್ಯಮ ಶಿಕ್ಷಣದ ವ್ಯಾಮೋಹ ಬಹಳಷ್ಟು ಜನರಲ್ಲಿದೆ. ಗುಣಮಟ್ಟ ಹೇಗಾದರೂ ಇರಲಿ ಮಕ್ಕಳಿಗೆ ಇಂಗ್ಲಿಷ್ ಕಲಿಸಬೇಕು ಎನ್ನುವ ಆಸೆ ಪಾಲಕರಲ್ಲಿ ಇದೆ. ರಾಜ್ಯದಲ್ಲಿನ ಕೆಪಿಎಸ್ ಶಾಲೆಗಳಲ್ಲೂ ಕೂಡ ಇಂಗ್ಲಿಷ್ ಮಾಧ್ಯಮಕ್ಕೆ ಮಕ್ಕಳನ್ನು ಸೇರಿಸಲು ಪಾಲಕರು ಆಸಕ್ತಿ ತೋರಿಸುತ್ತಿದ್ದಾರೆ. ಹೀಗಾಗಿ, ಮಾದರಿ ಶಾಲೆಗಳಲ್ಲಿ ಇಂಗ್ಲಿಷ್‌ನ್ನು ಸ್ಪೋಕನ್ ಇಂಗ್ಲಿಷ್ ಆಗಿ ಕಲಿಸುವ ಉದ್ದೇಶವಿದೆ ಎಂದು ಹೇಳಿದರು.

ಪ್ರಾಥಮಿಕ ಶಾಲಾ ಹಂತದಿಂದಲೇ ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳ ಪಠ್ಯ ಪುಸ್ತಕಗಳನ್ನು ದ್ವಿಭಾಷೆಯಲ್ಲಿ ಮುದ್ರಿಸಲಾಗುತ್ತಿದೆ. ಹಾಳೆಯ ಒಂದು ಬದಿ ಕನ್ನಡ ಇದ್ದರೆ,



> ಖಾಸಗಿ ಶಾಲೆಗಳು ಮತ್ತು ಇಂಗ್ಲಿಷ್ ಮಾಧ್ಯಮ ಶಿಕ್ಷಣದ ವ್ಯಾಮೋಹ ಬಹಳಷ್ಟು ಜನರಲ್ಲಿದೆ. ಗುಣಮಟ್ಟ ಹೇಗಾದರೂ ಇರಲಿ ಮಕ್ಕಳಿಗೆ ಇಂಗ್ಲಿಷ್ ಕಲಿಸಬೇಕು ಎನ್ನುವ ಆಸೆ ಪಾಲಕರಲ್ಲಿ ಇದೆ. ರಾಜ್ಯದಲ್ಲಿನ ಕೆಪಿಎಸ್ ಶಾಲೆಗಳಲ್ಲೂ ಕೂಡ ಇಂಗ್ಲಿಷ್ ಮಾಧ್ಯಮಕ್ಕೆ ಮಕ್ಕಳನ್ನು ಸೇರಿಸಲು ಪಾಲಕರು ಆಸಕ್ತಿ ತೋರಿಸುತ್ತಿದ್ದಾರೆ. ಹೀಗಾಗಿ, ಮಾದರಿ ಶಾಲೆಗಳಲ್ಲಿ ಇಂಗ್ಲಿಷ್ ಅನ್ನು ಸ್ಪೋಕನ್ ಇಂಗ್ಲಿಷ್ ಆಗಿ ಕಲಿಸುವ ಉದ್ದೇಶವಿದೆ. **-ಬಿ.ಸಿ.ನಾಗೇಶ್, ಶಿಕ್ಷಣ ಸಚಿವ**

ಮತ್ತೊಂದು ಬದಿ ಇಂಗ್ಲಿಷ್‌ನಲ್ಲಿ ಮುದ್ರಿಸಲಾಗುತ್ತಿದೆ. 1ರಿಂದ 4ನೇ ತರಗತಿವರೆಗೆ ಈ ಎರಡು ವಿಷಯಗಳನ್ನು ದ್ವಿಭಾಷೆಯಲ್ಲಿ ಮುದ್ರಿಸಲಾಗುತ್ತದೆ. 2019-20ರಿಂದ 2021-22ರವರೆಗೆ ಪ್ರತಿ ವರ್ಷ ಒಂದೊಂದು ತರಗತಿಯಂತೆ 1ರಿಂದ 3ನೇ ತರಗತಿವರೆಗೆ ದ್ವಿಭಾಷೆಯಲ್ಲಿ ಮುದ್ರಿಸಲಾಗುತ್ತಿತ್ತು. ಈ ಶೈಕ್ಷಣಿಕ ವರ್ಷದಿಂದ 1ರಿಂದ4ನೇ ತರಗತಿವರೆಗೆ ಮುದ್ರಿಸಲಾಗುತ್ತಿದೆ. ಮಕ್ಕಳಿಗೆ ಪ್ರಾಥಮಿಕ ಶಾಲಾ ಹಂತದಿಂದಲೇ ಕನ್ನಡದ ಜೊತೆಗೆ ಇಂಗ್ಲಿಷ್ ಭಾಷೆಯ ಪರಿಚಯ ಆಗಬೇಕು ಎನ್ನುವ ಉದ್ದೇಶವಿದೆ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಸ್ಪರ್ಧಾತ್ಮಕ ಲೋಕದಲ್ಲಿ ಸ್ಪರ್ಧಿಸಲಾಗದು. ಇಂಗ್ಲಿಷ್‌ನಲ್ಲೇ ಓದಬೇಕು ಎಂಬ ಮಾನಸಿಕತೆ ಜನರಲ್ಲಿ ಬಂದಿದೆ. ಇತ್ತೀಚಿನ ವರ್ಷಗಳಲ್ಲಿ ಕನ್ನಡ ಶಾಲೆಗಳು ಮುಚ್ಚಿರುವುದು ಕೂಡ ಅದಕ್ಕೆ ಸಾಕ್ಷಿಯಾಗಿದೆ. 47 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳ ಪೈಕಿ 3,800 ಶಾಲೆಗಳಲ್ಲಿ 10ಕ್ಕಿಂತ ಕಡಿಮೆ ಮಕ್ಕಳಿದ್ದಾರೆ. ಒಬ್ಬ ವಿದ್ಯಾರ್ಥಿ ● 9ನೇ ಪುಟಕ್ಕೆ

ಪರಿಶಿಷ್ಟರಿಗೆ 75 ಯೂನಿಟ್‌ವರೆಗೆ ಉಚಿತ ವಿದ್ಯುತ್, ಭೂ ಒಡೆತನ ಯೋಜನೆ ಸಹಾಯಧನ 20 ಲಕ್ಷ ರೂ.ಗೆ ಹೆಚ್ಚಳ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ

8ರಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ

ಬೆಂಗಳೂರು, ಏ.5- ಎಸ್‌ಸಿ, ಎಸ್‌ಟಿ ವರ್ಗದವರಿಗಾಗಿ ಭೂ ಒಡೆತನ ಯೋಜನೆಯಡಿ ನೀಡಲಾಗುತ್ತಿದ್ದ 15 ಲಕ್ಷ ರೂ. ಸಹಾಯಧನವನ್ನು 20 ಲಕ್ಷ ರೂ.ಗೆ ಹೆಚ್ಚಿಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಹೇಳಿದ್ದಾರೆ.



ಸಮಾಜ ಕಲ್ಯಾಣ ಇಲಾಖೆ ಆಯೋಜಿಸಿದ್ದ ಹಸಿರು ಕ್ರಾಂತಿಯ ಹರಿಕಾರ, ಭಾರತದ ಮಾಜಿ ಉಪ ಪ್ರಧಾನಿ ಡಾ: ಬಾಬು ಜಗಜೀವನ್ ರಾಮ್‌ರವರ 115ನೇ ಜನ್ಮ ದಿನಾಚರಣೆ ಹಾಗೂ ಡಾ. ಬಾಬು ಜಗಜೀವನ ರಾಂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

ಎಸ್ಸಿ, ಎಸ್ಟಿ ಸಮುದಾಯದವರ ಮನೆ ನಿರ್ಮಾಣಕ್ಕಾಗಿ ನೀಡಲಾಗುತ್ತಿದ್ದ 1,75,000 ರೂ.ಗಳ ಸಹಾಯಧನವನ್ನು 2 ಲಕ್ಷ ರೂ.ಗಳಿಗೆ ಹೆಚ್ಚಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಸ್ವಯಂ ಉದ್ಯೋಗ ಯೋಜನೆ: ಸ್ವಯಂ ಉದ್ಯೋಗ ಮಾಡುವ ಎಸ್ಸಿ, ಎಸ್ಟಿ ಸಮುದಾಯಕ್ಕೆ ಪ್ರತಿ ತಾಲೂಕಿನಲ್ಲಿ ಬಾಬು ಜಗಜೀವನರಾಂ ಸ್ವಯಂ ಉದ್ಯೋಗ ಯೋಜನೆಯನ್ನು ಜಾರಿಗೆ ತರಲು ತೀರ್ಮಾನಿಸಲಾಗಿದೆ. ಈ ಯೋಜನೆಯ ರೂಪುರೇಷೆಯನ್ನು ಸಿದ್ಧಪಡಿಸಿ ಕೂಡಲೇ ಒಂದು ತಿಂಗಳ ಯೋಜನೆಯನ್ನು ಜಾರಿಗೆ ತರಲಾಗುವುದು ಎಂದರು.

75 ಯೂನಿಟ್‌ವರೆಗೆ ಉಚಿತ ವಿದ್ಯುತ್: ಗ್ರಾಮೀಣ ಪ್ರದೇಶದಲ್ಲಿ ಕುಟೀರ ಯೋಜನೆಯಡಿ ಎಸ್ಸಿ, ಎಸ್ಟಿ ಸಮುದಾಯದವರಿಗೆ 75 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡಲು ತೀರ್ಮಾನಿಸಲಾಗಿದೆ. ಈ ಸಂಬಂಧ ಮುಂದಿನ ವಾರದೊಳಗಾಗಿ ಸರ್ಕಾರಿ ಆದೇಶವನ್ನು ಹೊರಡಿಸಲಾಗುವುದು ಎಂದು ಸಿಎಂ ತಿಳಿಸಿದರು.

ವಸತಿ ಶಾಲೆಗಳಲ್ಲಿ ವಿಶೇಷ ತರಬೇತಿ: ಎಸ್ಸಿ-ಎಸ್ಟಿ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳಲ್ಲಿ ವಿಶೇಷ ತರಬೇತಿ ನೀಡುವ ವಿನೂತನ ಯೋಜನೆಯನ್ನು ಈ ವರ್ಷ ಪ್ರಾರಂಭ ಮಾಡಲಾಗುವುದು. ಮುಖ್ಯಮಂತ್ರಿ ಮಾರ್ಗದರ್ಶಿನಿ ವೇದಿಕೆಯ ಮೂಲಕ 8ರಿಂದ 12ರವರೆಗಿನ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡುವ ವಿಶೇಷ ಕಾರ್ಯಕ್ರಮವನ್ನು ರೂಪಿಸಲಾಗುವುದು. ಎಸ್ಸಿ, ಎಸ್ಟಿ ಸಮುದಾಯಗಳಿಗಾಗಿ ಸ್ಟಾರ್ಟ್ ಅಪ್ ಯೋಜನೆಯಡಿ 50 ಲಕ್ಷ ರೂ.ಗಳ ಸಹಾಯಧನ ನೀಡುವ ಯೋಜನೆಯನ್ನು ಆಯವ್ಯಯದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಆಹಾರ ಉತ್ಪಾದನೆಯ ಮೂಲಕ ಹಸಿರು ಕ್ರಾಂತಿ: ಭಾರತ ದೇಶದ ಸಂವಿಧಾನದ ಅನುಷ್ಠಾನದಲ್ಲಿ ಬಾಬು ಜಗಜೀವನ ರಾಂ ಪಾತ್ರ ಮಹತ್ವವಾದದ್ದು. ಪ್ರಾಮಾಣಿಕತೆ, ನಿಷ್ಠೆ, ಬದ್ಧತೆಯ ಮೂರ್ತರೂಪವಾಗಿದ್ದರು. ಆಹಾರದಲ್ಲಿ ಸ್ವಾವಲಂಬನೆ ಸಾಧಿಸಿದಾಗ ಮಾತ್ರ ದೇಶ ಸ್ವಾವಲಂಬನೆಯಾಗಲು ಸಾಧ್ಯ ಎಂದು ನಂಬಿದ್ದರು. ಕೃಷಿ ಸಚಿವರಾಗಿ ● 9ನೇ ಪುಟಕ್ಕೆ

ಡಾ.ಅಶ್ವತ್ಥನಾರಾಯಣರಿಗೆ ರಾಜ್ಯ ಬಿಜೆಪಿ ಸಾರಥ್ಯ; ಮಹಾಪ್ರಧಾನ ಕಾರ್ಯದರ್ಶಿಯಾಗಿ ವಿಜಯೇಂದ್ರ?

● 2023ರ ವಿಧಾನಸಭಾ ಚುನಾವಣೆಗೆ ಬಿಜೆಪಿ ವರಿಷ್ಠರ ಮಹಾ ಯೋಜನೆ ● ಯಡಿಯೂರಪ್ಪರ ಸಂತೃಪ್ತಗೊಳಿಸಿ, ಒಕ್ಕಲಿಗ-ವೀರಶೈವ ಲಿಂಗಾಯತ ಜಾತಿ ಸಮೀಕರಣದ ಲೆಕ್ಕಾಚಾರ

ಬೆಂಗಳೂರು, ಏ.5 (ಕೆಎಂಶಿ)- ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಅವರನ್ನು ಬದಲಾಯಿಸಿ, ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ್‌ನಾರಾಯಣ್ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ತರಲು ದೆಹಲಿ ವರಿಷ್ಠರು ಮುಂದಾಗಿದ್ದಾರೆ. ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರ ಅವರನ್ನು, ಪಕ್ಷದ ಮಹಾ ಪ್ರಧಾನಕಾರ್ಯದರ್ಶಿಯನ್ನಾಗಿ ನೇಮಿಸಿ, ಒಕ್ಕಲಿಗ ಮತ್ತು ವೀರಶೈವ ಲಿಂಗಾಯಿತ ಜಾತಿ ಸಮೀಕರಣದಲ್ಲಿ ಮುಂಬರುವ ವಿಧಾನಸಭೆ ಚುನಾವಣೆ ಎದುರಿಸಲು ವರಿಷ್ಠರು ರಾಜಕೀಯ ಲೆಕ್ಕಾಚಾರ ಹಾಕಿದ್ದಾರೆ.



ಅಶ್ವತ್ಥ್‌ನಾರಾಯಣ್ ಬಿ.ವೈ.ವಿಜಯೇಂದ್ರ

ವಿಜಯೇಂದ್ರ ಪಕ್ಷದ ಉಪಾಧ್ಯಕ್ಷರಾಗಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಈ ಹುದ್ದೆಯ ಬಗ್ಗೆ ಅವರಿಗೆ ಅಷ್ಟು ಆಸಕ್ತಿ ಇಲ್ಲ. ಸಚಿವರಾಗಬೇಕೆಂಬ ಮಹದಾಸೆ ಇಟ್ಟುಕೊಂಡಿದ್ದಾರೆ. ಕರ್ನಾಟಕದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲೇಬೇಕೆಂದು ಪಣ ತೊಟ್ಟಿರುವ ಬಿಜೆಪಿ ನಾಯಕರು, ಆಡಳಿತ ಮತ್ತು ಪಕ್ಷದಲ್ಲಿ ಕೆಲವು ಮಹತ್ತರ ಬದಲಾವಣೆ ತರಲು ಹೊರಟಿದ್ದಾರೆ. ಈ ಸಂಬಂಧ ರಾಜ್ಯ ಘಟಕದ ಪ್ರಮುಖ ನಾಯಕರನ್ನು ದೆಹಲಿಗೆ ಕರೆಸಿಕೊಂಡು ಮಾಹಿತಿ ಸಂಗ್ರಹ ಆರಂಭಿಸಿದ್ದಾರೆ. ● 9ನೇ ಪುಟಕ್ಕೆ

ಧ್ವನಿವರ್ಧಕದ ಹೆಸರಲ್ಲಿ ಸಾಮರಸ್ಯ ಹಾಳು ಮಾಡುವ ಯತ್ನ

ಬೆಂಗಳೂರು,ಏ.5(ಕೆಎಂಶಿ)-ದೇವಸ್ಥಾನ, ಮಸೀದಿ, ಚರ್ಚ್ ಹೀಗೆ ಎಲ್ಲಾ ಕಡೆ ಧ್ವನಿವರ್ಧಕಗಳನ್ನು ಹಾಕುತ್ತಾರೆ, ಇದರಿಂದ ಯಾರಿಗೆ ತೊಂದರೆ ಆಗಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣಾ ವರ್ಷ ಎಂದು ಈ ರೀತಿ ಬೇಕಂತಲೇ ಬಿಜೆಪಿಯವರು ಕ್ಯಾತೆ ತೆಗೆಯುತ್ತಿದ್ದಾರೆ. ಇದನ್ನು ನಾನು ಖಂಡಿಸುತ್ತೇನೆ. ಇವೆಲ್ಲ ಸಮಾಜದ ಶಾಂತಿ, ಸಾಮರಸ್ಯ ಹಾಳುಮಾಡುವ ಪ್ರಯತ್ನಗಳು. ಇಂಥಾ ಘಟನೆಗಳಿಂದ ರಾಜ್ಯದ ಅಭಿವೃದ್ಧಿ ಸಾಧ್ಯವಾಗಲ್ಲ. ರಾಜ್ಯಕ್ಕೆ ಯಾವ ಬಂಡವಾಳ ಹೂಡಿಕೆದಾರರು ಬರಲ್ಲ, ಉದ್ಯೋಗ ಸೃಷ್ಟಿಯಾಗಲ್ಲ, ನಿರುದ್ಯೋಗ ಸಮಸ್ಯೆ ಹೋಗಲ್ಲ, ರಾಜ್ಯದ ಜಿಡಿಪಿ ಬೆಳವಣಿಗೆಯಾಗಲ್ಲ. ಎಲ್ಲಾ ಬೆಳವಣಿಗೆಗಳು ಸರ್ಕಾರದ ಕುಮ್ಮಕ್ಕಿನಿಂದಲೇ ನಡೆಯುತ್ತಿವೆ. ಮುಖ್ಯಮಂತ್ರಿಗಳು ಮೌನವಾಗಿರುವುದಲ್ಲ, ಎಲ್ಲದಕ್ಕೂ ಕುಮ್ಮಕ್ಕು ನೀಡುತ್ತಿದ್ದಾರೆ. ಆರ್.ಎಸ್.ಎಸ್ ಮತ್ತು ಭಜರಂಗದಳ ಸರ್ಕಾರಕ್ಕೆ ಗೊತ್ತಿಲ್ಲದೆ ಇಷ್ಟೆಲ್ಲಾ ಮಾಡುತ್ತಾ? ಇದನ್ನು ಸರ್ಕಾರ ಹತ್ತಿಕ್ಕಬೇಕು, ಸಮಾಜದ ಶಾಂತಿ ಕದಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಸಮಾಜದ ಕೋಮು ಸಾಮರಸ್ಯ ಹಾಳುಮಾಡುವುದನ್ನು ನಿಲ್ಲಿಸಬೇಕು, ಇಲ್ಲದಿದ್ದರೆ ಇದು ನಿಮಗೆ ಮುಂದೆ ತಿರುಗುಬಾಣವಾಗಲಿದೆ ಎಂದು ಮುಖ್ಯಮಂತ್ರಿಗಳಿಗೆ ತಿಳಿಸಲು ಬಯಸುತ್ತೇನೆ ಎಂದರು.

ಆಜಾನ್ ವಿಷಯದಲ್ಲಿ ನಾವು ಹೊಸ ಕಾನೂನು ಮಾಡಿಲ್ಲ

ಯಾರೂ ಕಾನೂನು ಉಲ್ಲಂಘಿಸಕೂಡದು: ಸಿಎಂ ಎಚ್ಚರಿಕೆ

● ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಲ್ಲ
● ಹಿಂದಿನ ಆದೇಶಗಳು, ನ್ಯಾಯಾಲಯದ ನಿರ್ದೇಶನಗಳೇ ಪಾಲನೆ ಆಗಬೇಕಿದೆ

ಬೆಂಗಳೂರು, ಏ.5 (ಕೆಎಂಶಿ)-ಯಾವುದೇ ಸಮಾಜ, ಸಂಘಟನೆಯಾಗಲಿ ಕಾನೂನನ್ನು ಕೈಗೆ ತೆಗೆದುಕೊಳ್ಳದಂತೆ ಶಾಂತಿ ಸುವ್ಯವಸ್ಥೆ ಕಾಪಾಡಲು ಎಲ್ಲ ಕ್ರಮ ತೆಗೆದುಕೊಳ್ಳಲಾಗುವುದು. ಸರ್ಕಾರದ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಯಾವುದೇ ಭೇದಭಾವವಿಲ್ಲದೆ ಕೆಲಸ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.


ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಏ.16ರಿಂದ ಪ್ರತಿಭಟನೆ ಮಾಡುವುದಾಗಿ ಹೇಳಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಅವರಿಗೆ ಪ್ರತಿಭಟಿಸುವ ಹಕ್ಕಿದೆ. ಆದರೆ ಆಧಾರರಹಿತವಾದ ಹೇಳಿಕೆಗೆ ನಾನು ಉತ್ತರಿಸುವುದಿಲ್ಲ ಎಂದರು.

ಬಿ.ಜೆ.ಪಿ ರಾಷ್ಟ್ರೀಯ ಪಕ್ಷ. ಕರ್ನಾಟಕ ಜನತೆಯ ಆಶೀರ್ವಾದ ಇದೆ. ಬರುವ ದಿನಗಳಲ್ಲಿ ಇನ್ನಷ್ಟು ಉತ್ತಮ ಆಡಳಿತ ನೀಡುವ ವಿಶ್ವಾಸವಿದೆ. ಹೇಳಿಕೆಗಳಿಂದ ಸಮಸ್ಯೆ ಇತ್ಯರ್ಥವಾಗುವುದಿಲ್ಲ. ಹಲವಾರು ವಿಚಾರಗಳು ಹಿಂದಿರುವ ವಿಚಾರ. 2001, 2002ರ ಆದೇಶಗಳು. ನಾವು ಯಾವುದೇ ಹೊಸ ಆದೇಶವನ್ನು ಹೊರಡಿಸಿಲ್ಲ. ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸುವುದಾಗಿ ತಿಳಿಸಿದರು. ಆಜಾನ್ ಬಗ್ಗೆ ಈಗಾಗಲೇ ಉಚ್ಚ ನ್ಯಾಯಾಲಯದ ಆದೇಶವಿದೆ. ಆದೇಶ ಅನುಷ್ಠಾನ ಏಕಾಗಿಲ್ಲ ಎಂದು ಮತ್ತೊಂದು ಆದೇಶವಿದೆ. ಎಷ್ಟು ಡೆಸಿಬಲ್ ಇರಬೇಕು ಎಂದು ಸೂಚಿಸಲಾಗಿದೆ. ಡೆಸಿಬಲ್ ಮೀಟರ್‌ಗಳನ್ನು ಜಿಲ್ಲಾ ಮಟ್ಟದಲ್ಲಿ ಖರೀದಿಸಲು ಆದೇಶವಿದೆ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡುವ ಕೆಲಸವಿದು. ಒತ್ತಾಯಪೂರ್ವಕವಾಗಿ ಮಾಡುವಂಥದ್ದಲ್ಲ. ಕ್ಷೇತ್ರ ಮಟ್ಟದಲ್ಲಿ ಹಲವಾರು ಸಂಘಟನೆಗಳ ● 9ನೇ ಪುಟಕ್ಕೆ



ಜೂ.21ರ ಯೋಗ ದಿನದಂದು ಮೈಸೂರಲ್ಲಿ ಲಕ್ಷಕ್ಕೂ ಅಧಿಕ ಮಂದಿ ಸಾಮೂಹಿಕ ಯೋಗ ಪ್ರದರ್ಶನ

ಪ್ರಧಾನಿ ಮೋದಿಗೆ ಸಂಸದ ಪ್ರತಾಪ್ ಸಿಂಹ ಆಹ್ವಾನ



ದೆಹಲಿಯಲ್ಲಿ ಮಂಗಳವಾರ ಪ್ರಧಾನಿ ನರೇಂದ್ರ ಮೋದಿಯವರನ್ನು ಕುಟುಂಬ ಸಮೇತರಾಗಿ ಭೇಟಿ ಮಾಡಿದ ಸಂಸದ ಪ್ರತಾಪ್ ಸಿಂಹ, ಮುಂಬರುವ ಜೂನ್ 21ರ ಅಂತಾರಾಷ್ಟ್ರೀಯ ಯೋಗ ದಿನದಂದು ಮೈಸೂರಿಗೆ ಆಗಮಿಸುವಂತೆ ಮನವಿ ಮಾಡಿದರು. ಚಿತ್ರದಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಪ್ರತಾಪ್ ಸಿಂಹ ಅವರ ಪತ್ನಿ ಅರ್ಪಿತಾ ಸಿಂಹ, ಪುತ್ರಿ ವಿಪಂಚಿ ಇದ್ದಾರೆ.

ಮೈಸೂರು,ಏ.5(ಪಿಎಂ)-ಮುಂಬರುವ ಜೂನ್ 21ರ ಅಂತಾರಾಷ್ಟ್ರೀಯ ಯೋಗ ದಿನದಂದು 1,10,000ಕ್ಕೂ ಅಧಿಕ ಮಂದಿ ಸಾಮೂಹಿಕ ಯೋಗ ಪ್ರದರ್ಶಿಸಿ ವಿಶ್ವ ದಾಖಲೆ ಬರೆಯಲು ಮೈಸೂರು ನಗರ ಸಜ್ಜಾಗುತ್ತಿದ್ದು, ಆ ಬೃಹತ್ ಯೋಗ ಪ್ರದರ್ಶನಕ್ಕೆ ಆಗಮಿಸುವಂತೆ ಪ್ರಧಾನಿ ನರೇಂದ್ರ ಮೋದಿಯವರಿಗೆ ಮೈಸೂರು-ಕೊಡಗು ಸಂಸದ ಪ್ರತಾಪ್ ಸಿಂಹ ಆಹ್ವಾನ ನೀಡಿದ್ದಾರೆ. ದೆಹಲಿಯಲ್ಲಿ ಮಂಗಳವಾರ ನರೇಂದ್ರ ಮೋದಿಯವರನ್ನು ಕುಟುಂಬ ಸಮೇತ ಭೇಟಿ ಮಾಡಿದ ಸಂಸದ ಪ್ರತಾಪ್ ಸಿಂಹ, ಸದರಿ ಸಾಮೂಹಿಕ ಯೋಗ ಪ್ರದರ್ಶನಕ್ಕೆ ಮೈಸೂರಿಗೆ ಆಗಮಿಸಬೇಕೆಂದು ಆಹ್ವಾನಿಸಿ, ಮನವಿ ಸಲ್ಲಿಸಿದರು.

ಅಷ್ಟಾಂಗ ಯೋಗದ ಜನ್ಮಸ್ಥಳವಾಗಿ ಐತಿಹಾಸಿಕ ನಗರ ಮೈಸೂರು ಖ್ಯಾತಿ ಪಡೆದಿದ್ದು, ಈ ಯೋಗಾಭ್ಯಾಸಕ್ಕೆ ಸೂಕ್ತ ಸ್ಥಳವಾಗಿದೆ ಯೋಗ ಗುರು ಪಟ್ಟಾಭಿ ಜೋಯಿಸ್ ಸೇರಿದಂತೆ ಇನ್ನಿತರ ಯೋಗ ಸಾಧಕರ ಬೋಧನೆ ಮೂಲಕ ಯೋಗ ವಿದ್ಯೆಯ ಸಂರಕ್ಷಣೆ, ಅಭಿವೃದ್ಧಿ ಮತ್ತು ಪ್ರಚಾರಕ್ಕೆ ಕೊಡುಗೆ ನೀಡಿದ ಶ್ರೀಮಂತ ಇತಿಹಾಸವನ್ನು ಮೈಸೂರು ಹೊಂದಿದೆ. ಇತ್ತೀಚಿನ ದಿನಗಳಲ್ಲಿ ಪ್ರಪಂಚದಾದ್ಯಂತ ಯೋಗಾಭ್ಯಾಸದ ಪ್ರಯೋಜನ ಮನದಟ್ಟಾಗುತ್ತಿದೆ. ಆ ಮೂಲಕ ಯೋಗ ವಿದ್ಯೆ ಪ್ರತಿದಿನ ವಿಸ್ತಾರವಾಗಿ ಬೆಳೆಯುತ್ತಿದೆ. ಹಲವು ಖ್ಯಾತ ಯೋಗ ವಿದ್ವಾಂಸರು ಮತ್ತು ಗುರುಗಳು ಮೈಸೂರಿನಲ್ಲಿ ಯೋಗ ● 9ನೇ ಪುಟಕ್ಕೆ

ಪ್ರಧಾನಿ ಮೋದಿಗೆ ಬೋಸ್ ಪ್ರತಿಮೆ ನೀಡಿದ ಮೈಸೂರು ಶಿಲ್ಪಿ ಅರುಣ್ ಯೋಗಿರಾಜ್

ಮೈಸೂರು,ಏ.5(ಪಿಎಂ)- ಪ್ರಧಾನಿ ನರೇಂದ್ರ ಮೋದಿ ಅವರನ್ನು, ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಭೇಟಿಯಾಗಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪುಟ್ಟ ಪ್ರತಿಮೆಯನ್ನು ನೀಡಿದ್ದಾರೆ.

ಸಂಸದ ಪ್ರತಾಪ್ ಸಿಂಹ ಅವರೊಂದಿಗೆ ಮಂಗಳವಾರ ಬೆಳಗ್ಗೆ ಪ್ರಧಾನಿ ಅವರನ್ನು ಭೇಟಿಯಾದ ಅರುಣ್ ಯೋಗಿರಾಜ್, ತಾವೇ ಕೆತ್ತನೆ ಮಾಡಿದ ಸುಭಾಷ್ ಚಂದ್ರಬೋಸ್ ಅವರ ಪುಟ್ಟ ಪ್ರತಿಮೆಯನ್ನು ನೀಡಿ, ತಮ್ಮ ತಾತ ಹಾಗೂ ತಂದೆಯ ಶಿಲ್ಪ ಸಾಧನೆ ಬಗ್ಗೆ ತಿಳಿಸಿದರು.

ಈ ವೇಳೆ ದೆಹಲಿಯ ಇಂಡಿಯಾ ಗೇಟ್‌ನಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆ ನಿರ್ಮಾಣದ ಜವಾಬ್ದಾರಿಯನ್ನು ಅರುಣ್ ಯೋಗಿರಾಜ್ ಅವರಿಗೇ ನೀಡುವುದಾಗಿ ಪ್ರಧಾನಿಯವರು ಭರವಸೆ ನೀಡಿದರು ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ. ಉತ್ತರಾಖಂಡದ ಕೇದಾರನಾಥದಲ್ಲಿ ಇತ್ತೀಚೆಗಷ್ಟೇ ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿರುವ ಶಂಕರಾಚಾರ್ಯರ ಸುಂದರ ಪ್ರತಿಮೆಯನ್ನು ತಂದೆ ಯೋಗಿರಾಜ್ ಅವರ ಸಹಕಾರದೊಂದಿಗೆ ಅರುಣ್ ನಿರ್ಮಿಸಿದ್ದರು. ಸ್ವತಃ ಪ್ರಧಾನಿ ಸಚಿವಾಲಯದ ಅಧಿಕಾರಿಗಳೇ ದೇಶಾದ್ಯಂತ ಶಿಲ್ಪಿಗಳಿಂದ ಮಾದರಿ ಪ್ರತಿಮೆಗಳನ್ನು ಸಂಗ್ರಹಿಸಿ, ಪರಾಮರ್ಶಿಸಿ ಅಂತಿಮವಾಗಿ ಅರುಣ್ ಯೋಗಿರಾಜ್ ಅವರಿಗೆ ಜವಾಬ್ದಾರಿ ನೀಡಿದ್ದರು. ಹೆಗ್ಗಡದೇವನಕೋಟೆಯಿಂದ ತರಿಸಿಕೊಂಡ 120 ಟನ್‌ನ ಕೃಷ್ಣಶಿಲೆ ಬಳಸಿ, ಸುಮಾರು 9 ತಿಂಗಳ ಪರಿಶ್ರಮದಿಂದ ಸಿದ್ಧವಾದ 12 ಅಡಿ ಎತ್ತರದ ಕುಳಿತ ಭಂಗಿಯಲ್ಲಿರುವ 35 ಟನ್ ಪ್ರತಿಮೆಯನ್ನು ಮೈಸೂರಿಂದ ಚಮೋಲಿ



ಪ್ರಧಾನಿ ಮೋದಿ ಟ್ವೀಟ್...

ಅರುಣ್ ಯೋಗಿರಾಜ್ ಅವರು ಭೇಟಿಯಾಗಿದ್ದನ್ನು ಮೋದಿ ಅವರೇ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. 'ಅರುಣ್ ಯೋಗಿರಾಜ್ ಅವರನ್ನು ಭೇಟಿಯಾಗಿದ್ದಕ್ಕೆ ಸಂತೋಷವಾಯಿತು. ನೇತಾಜಿ ಬೋಸ್ ಅವರ ಈ ಅಸಾಧಾರಣ ಪ್ರತಿಮೆಯನ್ನು ನೀಡಿದ್ದಕ್ಕೆ ಯೋಗಿರಾಜ್ ಅವರಿಗೆ ಕೃತಜ್ಞನಾಗಿರುತ್ತೇನೆ' ಎಂದು ಟ್ವೀಟ್ ಮಾಡಿ, ಗೌರವ ಸೂಚಿಸಿದ್ದಾರೆ.

ಏರ್‌ಬೇಸ್‌ವರೆಗೆ ರಸ್ತೆಯ ಮೂಲಕ ಸಾಗಿಸಲಾಗಿತ್ತು. ಅಲ್ಲಿಂದ ಕೇದಾರನಾಥದಲ್ಲಿರುವ ಸಮಾಧಿ ಸ್ಥಳಕ್ಕೆ ಭಾರತೀಯ ವಾಯುಪಡೆ ವಿಮಾನದ ಮೂಲಕ ಸಾಗಿಸಿ, ಶಂಕರಾಚಾರ್ಯರ ಸಮಾಧಿ ಸ್ಥಳದಲ್ಲಿ ಪ್ರತಿಷ್ಠಾಪಿಸಿದ್ದನ್ನು ಸ್ಮರಿಸಬಹುದು.

ಭೌತಿಕ ಕಟ್ಟಡಕ್ಕಿಂತ ಬೌದ್ಧಿಕ ಕಟ್ಟಡ ನಿರ್ಮಿಸಬೇಕು



ಮೈಸೂರು, ಏ. 5– ಮನುಷ್ಯ ಭೌತಿಕವಾದ ಕಟ್ಟಡಗಳನ್ನು ನಿರ್ಮಿಸುವುದಕ್ಕಿಂತ ತನ್ನೊಳಗೆ ಬೌದ್ಧಿಕವಾದ ಕಟ್ಟಡವನ್ನು ನಿರ್ಮಿಸುವ ಅವಶ್ಯಕತೆ ಇದೆ ಎಂದು ಅಖಿಲ ಕರ್ನಾಟಕ ಶ್ರೀ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು ಹೇಳಿದರು.

ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ 'ಜ್ಞಾನ ವಾರಿಧಿ– 70' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ "ಸಿದ್ಧರಾಮೇಶ್ವರರ ಸಂದೇಶ" ವಿಷಯ ಕುರಿತು ಉಪನ್ಯಾಸ ನೀಡುತ್ತಾ ಸಿದ್ಧರಾಮೇಶ್ವರರು ಧಾರ್ಮಿಕ ಜಿಜ್ಞಾಸುಗಳು, ಆಧ್ಯಾತ್ಮಿಕ ಹಸಿವಿದ್ದ ಸದ್ಭಕ್ತರು. ಜ್ಞಾನ ಮಾರ್ಗದಲ್ಲಿ ಸಾಗುವ ಆಶಯವನ್ನು ಹೊಂದಿದ್ದವರು ಎಂದರು.

ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪ ಒಂದು ಅದ್ಭುತ ಕಲ್ಪನೆ. ಅಲ್ಲಮಪ್ರಭುದೇವರು ಸಿದ್ಧರಾಮರ ಮೂಲಕ ಲೋಕಕಲ್ಯಾಣವನ್ನು ಮಾಡಿಸಿದರು. ಸಿದ್ಧರಾಮರ ವಚನಗಳಿಂದ ಮನಸ್ಸು ಪರಿವರ್ತನೆಗೆ ತೆರೆದುಕೊಳ್ಳುತ್ತದೆ. ಬಡತನದ ಬೇಗೆಯಲ್ಲಿದ್ದವರಲ್ಲಿ ಮಾತ್ರ ನಿಜವಾದ ಭಕ್ತಿ ಇರುತ್ತದೆ. ಇಂದು ದೇವರ ಜೊತೆಯೆ ಕೊಡುಕೊಳ್ಳುವಿಕೆಯ ವ್ಯವಹಾರವನ್ನು ಮಾಡಲಾಗುತ್ತಿದೆ. ಬಡವರ ಭಕ್ತಿಯನ್ನು ವೈಜ್ಞಾನಿಕತೆಗೆ ತಂದವರು ಬಸವಾದಿ ಶರಣರು ಎಂದು ಹೇಳಿದರು.

ಬಡವರ ಮುಗ್ಧತೆಯನ್ನು ಮೌಢ್ಯಕ್ಕೆ ತಳ್ಳದೆ ವೈಚಾರಿಕತೆಯ ಒರೆಗೆ ಹಚ್ಚುವ ಕೆಲಸವನ್ನು ಸಿದ್ಧರಾಮರು ಮಾಡಿದರು. ಶ್ರಮಿಕವರ್ಗದವರಿಗೂ ಜ್ಞಾನಪಡೆದುಕೊಳ್ಳುವ ಹಕ್ಕನ್ನು ಶರಣರು ನೀಡಿದರು. ಶರಣ ಸಂಕುಲ ಸ್ತ್ರೀಯರನ್ನು ಹೆಚ್ಚು ಗೌರವಿಸಿತು. ಭಕ್ತ ಭಗವಂತನಾಗಬೇಕು. ನರ ನಾರಾಯಣನಾಗಬೇಕು. **ಪಾಪ ಮಾಡಿದವನನ್ನು ಪಾಪಾತ್ಮ, ಪುಣ್ಯ ಮಾಡಿದವನನ್ನು ಪುಣ್ಯಾತ್ಮ, ಗಾಂಧೀಜಿಯಂತಹ ಕೆಲಸಗಳನ್ನು ಮಾಡಿದರೆ ಮಹಾತ್ಮ, ದೇಶಕ್ಕಾಗಿ ತ್ಯಾಗ ಬಲಿದಾನ ಮಾಡಿದವರನ್ನು ಹುತಾತ್ಮ ಎನ್ನಲಾಗುತ್ತದೆ**. ಸಕಲ ಜೀವಾತ್ಮರಿಗೂ ಲೇಸನ್ನೆ ಬಯಸಬೇಕು. ಸ್ವರ್ಗ ಮರ್ತ್ಯಗಳನ್ನು ನಾವಿರುವಲ್ಲಿಯೇ ಸೃಷ್ಟಿಸಿಕೊಳ್ಳಬಹುದು. ವೈಜ್ಞಾನಿಕ ಮತ್ತು ವೈಚಾರಿಕತೆಯ ಮೂಲಕ ನಮ್ಮನ್ನು ನಾವು ಪರಿವರ್ತನೆ ಮಾಡಿಕೊಳ್ಳಬೇಕು ಎಂದರು.

'ನಮ್ಮೂರ ಸಮುದಾಯಗಳ ಪ್ರಗತಿಯಲ್ಲಿ ನಮ್ಮ ಪಾತ್ರ'

6 ದಿನಗಳ ವಿಚಾರ ಸಂಕಿರಣ, ಮುಕ್ತ ಸಂವಾದ

ಮೈಸೂರು,ಏ.5(ಆರ್‌ಕೆಬಿ)–ಮೈಸೂರಿನ ಆದಿಕರ್ನಾಟಕ ಮಹಾಸಂಸ್ಥೆ, ಅಶೋಕಪುರಂ ವಿವಿಧ ಸಂಘಟನೆಗಳ ಒಕ್ಕೂಟದ ಆಶ್ರಯದಲ್ಲಿ 'ನಮ್ಮೂರ /ಸಮುದಾಯದ ಪ್ರಗತಿಯಲ್ಲಿ ನಮ್ಮ ಪಾತ್ರಗಳು' ಕುರಿತು ಏ. 10ರವರೆಗೆ ವಿಚಾರ ಸಂಕಿರಣ, ಮುಕ್ತ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಒಕ್ಕೂಟದ ಸಲಹೆಗಾರ, ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6ರಿಂದ 7.30ರವರೆಗೆ ಅಶೋಕಪುರಂ ಸರ್ಕಾರಿ ಶಾಲೆ ಆವರಣದಲ್ಲಿ ಸಾಮಾಜಿಕಕ್ರಾಂತಿಯ ಹರಿಕಾರ ಬಿ.ಬಸವಲಿಂಗಪ್ಪನವರ ವೇದಿಕೆಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದರು. ಪ್ರತಿದಿನ ಸಂಜೆ 5.30ಕ್ಕೆ ವಿಚಾರ ಸಂಕಿರಣದಲ್ಲಿ ನಮ್ಮೂರ ಸಮುದಾಯದ ಪ್ರಗತಿಯಲ್ಲಿ ಪದವೀಧರರ ಪಾತ್ರ, ಏ.6ರಂದು ನಮ್ಮೂರ, ಸಮುದಾಯದ ಪ್ರಗತಿಯಲ್ಲಿ ಸರ್ಕಾರಿ, ಇತರೆ ಉದ್ಯೋಗಸ್ಥರ ಪಾತ್ರ, ಯುವಜನತೆ ಹಾಗೂ ಸಂಘ ಸಂಸ್ಥೆಗಳ ಪಾತ್ರ, ಜನಪ್ರತಿನಿಧಿಗಳ ಪಾತ್ರ, ಆದಿ ಕರ್ನಾಟಕ ಮಹಾಸಂಸ್ಥೆಯ ಪಾತ್ರ, ಕುರಿತು ಚರ್ಚೆ ನಡೆಯಲಿದೆ ಎಂದು ಹೇಳಿದರು.

ಆರು ದಿನಗಳ ವಿಚಾರ ಸಂಕಿರಣ, ಮುಕ್ತ ಸಂವಾದಕ್ಕೆ ಸರ್ಕಾರಿ ಶಾಲೆಯ ಮಕ್ಕಳಿಂದ ಚಾಲನೆ ದೊರೆಯಲಿದೆ. ಏ.10ರಂದು ಸಂಸದ ವಿ.ಶ್ರೀನಿವಾಸಪ್ರಸಾದ್ ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಮಹಾಲಿಂಗು, ಚೇತನ್‌ಬಾಬು, ಸತೀಶ್, ರಾಜು ಹಾಜರಿದ್ದರು.

ಮೈಸೂರಿನ ಅಮೃತ ವಿಶ್ವ ವಿದ್ಯಾಪೀಠದಲ್ಲಿ ಏ.8, 9ರಂದು 'ಸಿನಿರಮಾ–22' ರಾಷ್ಟ್ರಮಟ್ಟದ ಕಿರುಚಿತ್ರ ಸ್ಪರ್ಧೆ

ಮೈಸೂರು, ಏ.5(ಆರ್‌ಕೆಬಿ)– ಮೈಸೂರಿನ ಬೋಗಾದಿ 2ನೇ ಹಂತದಲ್ಲಿರುವ ಅಮೃತ ವಿಶ್ವ ವಿದ್ಯಾಪೀಠದ ಕಲಾ ಮತ್ತು ವಿಜ್ಞಾನ ಶಾಲೆಯಲ್ಲಿ ಏ.8, 9ರಂದು 'ಸಿನಿರಮಾ–2022' ರಾಷ್ಟ್ರ ಮಟ್ಟದ ಕಿರು ಚಿತ್ರ ಸ್ಪರ್ಧೆ ಆಯೋಜಿಸಿದೆ ಎಂದು ವಿಭಾಗದ ಮುಖ್ಯಸ್ಥೆ ಡಾ. ಮೌಲ್ಯ ಪಾಲಹಳ್ಳಿ ತಿಳಿಸಿದರು.



ಏ.8ರಂದು ಬೆಳಗ್ಗೆ 9.30ಕ್ಕೆ ಕೇಂದ್ರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಔಟ್‌ರೀಚ್ ಬ್ಯೂರೋದ ಉಪ ನಿರ್ದೇಶಕಿ ಡಾ.ಟಿ.ಸಿ.ಪೂರ್ಣಿಮಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಲೇಖಕ, ವಿಮರ್ಶಕ ಡಾ.ನಾ.ದಾ.ಶೆಟ್ಟಿ ಮತ್ತು ಪ್ರಶಸ್ತಿ ವಿಜೇತ ಲೆನ್ಸ್ ಬೇಸ್ಡ್ ಆರ್ಟಿಸ್ಟ್, ನಟ ಸಂಗೀತಗಾರ ಹಾಗೂ ಕಲಾವಿದ ಕೆ.ಜೆ.ಪವನ್ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದರು.

ಸಿನಿರಮಾ–2022 ಪ್ರಶಸ್ತಿ ಪ್ರದಾನ ಹಾಗೂ ಸಮಾರೋಪ ಸಮಾರಂಭ ಏ.9 ರಂದು ಸಂಜೆ 4.30ಕ್ಕೆ ನಡೆಯಲಿದೆ. 'ಒಂದು ಮೊಟ್ಟೆಯ ಕಥೆ' ಹಾಗೂ 'ಗರುಡ ಗಮನ ವೃಷಭ ವಾಹನ' ಖ್ಯಾತಿಯ ಚಿತ್ರ ಕಥೆಗಾರ, ನಟ , ನಿರ್ದೇಶಕ ರಾಜ್ ಬಿ.ಶೆಟ್ಟಿ, ಮೈಸೂರಿನ ಡಿಆರ್‌ಸಿ ಮಲ್ಟಿಪ್ಲೆಕ್ಸ್ ಮಾಲೀಕರಾದ ವೈಶಾಲಿ ಹನುಮಂತ್ ಹಾಗೂ ಹನುಮಂತ್ ಭಾಗವಹಿಸುವರು ಎಂದರು. ಕಿರುಸ್ಪರ್ಧೆಯ ಜೊತೆಗೆ ಸಿನಿಮಾ ರಂಗದ ಖ್ಯಾತರೊಡನೆ ಸಿನಿಮಾ ಕುರಿತ ಕಾರ್ಯಾಗಾರ ಹಾಗೂ ಸಂವಾದ ಕಾರ್ಯಕ್ರಮ ಇದೆ. 'ಸ್ಕ್ರೀನ್ ರೈಟಿಂಗ್ ಹಾಗೂ ನಿರ್ದೇಶಕೆ' ಕುರಿತ ಗೋಷ್ಠಿ ನಡೆಸಿಕೊಡುವರು. ಫಿಲ್ಮ್ ಮೇಕರ್ ಹಾಗೂ ಸ್ಕ್ರೀನ್ ರೈಟರ್ ಅಭಯ್‌ಸಿಂಹ 'ಏಸ್ಥೆಟಿಕ್ಸ್ ಇನ್ ಫಿಲ್ಮ್‌ಮೇಕಿಂಗ್' ಕುರಿತು ಕಾರ್ಯಾಗಾರ ನಡೆಸಿಕೊಡುವರು. 'ಇಂಡಿಪೆಂಡೆಂಟ್ ಫಿಲ್ಮ್ ಮೇಕಿಂಗ್ ಕುರಿತು ತಮಿಳುನಾಡಿನ ಇಂಡಿಪೆಂಡೆಂಟ್ ಫಿಲ್ಮ್ ಮೇಕರ್ ಅರುಣ್ ಕಾರ್ತಿಕ್ ಮಾತನಾಡುವರು. ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರ ನಿರ್ದೇಶಕ ಪದ್ಮಶ್ರೀ ಗಿರೀಶ್ ಕಾಸರವಳ್ಳಿ ಅವರೊಂದಿಗೆ ಸಂವಾದ ನಡೆಸಿಕೊಡುವರು ಎಂದರು. ಕಿರುಚಿತ್ರ ಸ್ಪರ್ಧೆಯಲ್ಲಿ ವಿಜೇತರಿಗೆ ಕ್ರಮವಾಗಿ 10 ಸಾವಿರ, 7 ಸಾವಿರ ಮತ್ತು 5 ಸಾವಿರ ರೂ ನಗದು ಪ್ರಶಸ್ತಿ ನೀಡಲಾಗುವುದು. ಇದರೊಂದಿಗೆ ಅತ್ಯುತ್ತಮ ನಿರ್ದೇಶನ, ಅತ್ಯುತ್ತಮ ನಟನೆ, ಛಾಯಾಗ್ರಹಣ, ಅತ್ಯುತ್ತಮ ಸಂಕಲನಕ್ಕಾಗಿ ವಿಶೇಷ ವಿಭಾಗ ಪ್ರಶಸ್ತಿಯೂ ಇರಲಿದೆ. ಈ ಬಾರಿ ದೇಶದಾದ್ಯಂತ 75ಕ್ಕೂ ಹೆಚ್ಚು ಕಿರುಚಿತ್ರಗಳು ಸ್ಪರ್ಧೆಯಲ್ಲಿದ್ದು, ಆಸಕ್ತರು ಮಾಹಿತಿಗೆ ಮೊ.91644 61193, 9590248222 ಸಂಪರ್ಕಿಸುವಂತೆ ತಿಳಿಸಿದರು. ಗೋಷ್ಠಿಯಲ್ಲಿ ಡಾ.ಸುನೀಜಸ್‌ನಾಯರ್, ಸೂರಜ್ ಶಂಕರ್, ದರ್ಶನ್ ಇದ್ದರು.

ಇಂದು ಕೃಷಿ ಸಾಧಕ ರೈತರಿಗೆ ಸನ್ಮಾನ



ಮೈಸೂರು,ಏ.5(ಆರ್‌ಕೆಬಿ)–ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಹೋರಾಟ ಹಿತ ರಕ್ಷಣಾ ಸಮಿತಿಯು ಕೃಷಿಯಲ್ಲಿ ಸಾಧನೆ ಮಾಡಿದ ತಿ.ನರಸೀಪುರ ತಾಲೂಕಿನ ವಾಟಾಳ್ ಪುರದ ಶೇಖರಪ್ಪ, ನಂಜನಗೂಡು ತಾಲೂಕಿನ ನಂದಿಗುಂಡದ ನಾಗರತ್ನಮ್ಮ, ಹೆಚ್.ಜಿ.ಸುಬ್ಬಪ್ಪ, ಹದಿನಾರು ಹೆಚ್.ಕೆ.ಗುರುಸ್ವಾಮಿ, ಮೈಸೂರು ತಾಲೂಕಿನ ಕೆ.ಎಸ್. ಸ್ವಾಮಿ ಅವರನ್ನು ಅಭಿನಂದಿಸಲಿದೆ ಎಂದು ಕಣೇನೂರು ನಾಗರಾಜಪ್ಪ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿಯಲ್ಲಿ ತೊಡಗಿಸಿಕೊಂಡು ಶ್ರಮದ ದುಡಿಮೆ ಮತ್ತು ಉತ್ತಮ ಇಳುವರಿಯಲ್ಲಿ ಸಾಧನೆ ಮಾಡಿದ ಪ್ರಗತಿಪರ ರೈತರನ್ನು ಗುರ್ತಿಸಿ ಸನ್ಮಾನಿಸುವ ಕೆಲಸವನ್ನು ನಡೆಸಿಕೊಂಡು ಬರುತ್ತಿರುವ ಸಮಿತಿಯು ಈ ಬಾರಿ ಈ ಐವರು ರೈತರನ್ನು ಗುರ್ತಿಸಿದೆ. ಏ.6ರಂದು ಬೆಳಗ್ಗೆ 11 ಗಂಟೆಗೆ ನಂಜನಗೂಡು ತಾಲೂಕಿನ ಚಿಕ್ಕಯ್ಯನಛತ್ರ ಹೋಬಳಿ ಹದಿನಾರು ಗ್ರಾಮದ ಗುರುಸ್ವಾಮಿ ಅವರ ತೋಟದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಧನಗಳ್ಳಿ ಬಿ.ಕೆಂಡಗಣ್ಣಸ್ವಾಮಿ, ನಂದಿಗುಂದ ನಂಜುಂಡಸ್ವಾಮಿ, ಜೀಮಾರಳ್ಳಿ ಶಿವಕುಮಾರ್, ಹದಿನಾರು ಗುರುಸ್ವಾಮಿ ಉಪಸ್ಥಿತರಿದ್ದರು.

ನಿಮ್ಮ ಮನೆ ಬಾಗಿಲಲ್ಲೇ ಸಾಂಪ್ರದಾಯಿಕ ಅರಣ್ಯ ಉತ್ಪನ್ನಗಳು ಈಗ ಲಭ್ಯವಿದೆ!

● ಜೇನುತುಪ್ಪ, ಸೀಗೆಪುಡಿ, ಸುಜ್ಜಲುಪುಡಿ, ಅಂಟುವಾಳು ಕಾಯಿ, ಮರುಗನಹುಳಿ, ಕೋಕಂ, ರಾಮಪತ್ರೆ, ಧೂಪದ ಕಾಯಿ, ಸಾಂಬ್ರಾಣಿ ಪುಡಿ, ಬೆಟ್ಟದ ನೆಲ್ಲಿಕಾಯಿಯಂತಹ ಅರಣ್ಯ ಉತ್ಪನ್ನಗಳು ಕೈಗೆಟಕುವ ಬೆಲೆಯಲ್ಲಿ ಲ್ಯಾಂಪ್ಸ್ ಮಹಾಮಂಡಲದಿಂದ ಮಾರಾಟ ● ಈ ಉದ್ದೇಶಕ್ಕೆ ವಾಹನ ವ್ಯವಸ್ಥೆ: ಜನಸಂದಣಿವುಳ್ಳ ಸ್ಥಳಗಳಲ್ಲಿ ಆದಿವಾಸಿಗಳ ವಿವಿಧೋದ್ದೇಶ ಸಹಕಾರ ಮಹಾ ಮಂಡಲದಿಂದ ಮಾರಾಟ ವ್ಯವಸ್ಥೆ



ಮೈಸೂರು, ಏ.5(ಆರ್‌ಕೆ)– ಕಾಡಿನ ಸಾಂಪ್ರದಾಯಿಕ ಉತ್ಪನ್ನಗಳನ್ನು ನಗರ ಪ್ರದೇಶದವರ ಮನೆ ಬಾಗಿಲಿಗೇ ತಲುಪಿಸುವ ಕಾರ್ಯವನ್ನು ಲ್ಯಾಂಪ್ಸ್ ಮಹಾ ಮಂಡಲ ಸೋಮವಾರದಿಂದ ಆರಂಭಿಸಿದೆ.

ಆದಿವಾಸಿ ಬುಡಕಟ್ಟು ಜನರು ಅರಣ್ಯದಲ್ಲಿ ಸಂಗ್ರಹಿಸಿದ ಉತ್ಪನ್ನಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸಲು ಆದಿವಾಸಿಗಳ ವಿವಿಧೋದ್ದೇಶ ಸಹಕಾರ ಮಹಾ ಮಂಡಲ(ಲ್ಯಾಂಪ್ಸ್) ಪ್ರತ್ಯೇಕ ವಾಹನ ವ್ಯವಸ್ಥೆ ಮಾಡಿದೆ.

ಆದಿವಾಸಿಗಳಿಂದ ಖರೀದಿಸಿದ ಜೇನು ತುಪ್ಪ, ಅಂಟುವಾಳು ಕಾಯಿ, ಅಂಟುವಾಳು ಪುಡಿ, ಮರುಗನಹುಳಿ, ಕೋಕಂ, ಸೀಗೆಪುಡಿ, ಸುಜ್ಜಲು ಪುಡಿ, ರಾಮಪತ್ರೆ, ಬಿಲ್ವಪತ್ರೆ, ಹುಣಸೇಹಣ್ಣು, ಬೆಟ್ಟದ ನೆಲ್ಲಿ ಕಾಯಿ, ಧೂಪದ ಕಾಯಿ, ಸಾಂಬ್ರಾಣಿ, ಸಾಂಬ್ರಾಣಿ ಪುಡಿ ಹಾಗೂ ಸುಮಾರು 17 ಬಗೆಯ ಅರಣ್ಯ ಉತ್ಪನ್ನಗಳನ್ನು ವಾಹನದಲ್ಲಿ ನಿತ್ಯವೂ ಜನಸಂದಣಿ ಉಳ್ಳ ಸ್ಥಳಗಳಲ್ಲಿ ಮಾರಾಟ ಮಾಡುವ ಕಾರ್ಯ ಏ.4ರಿಂದ ಆರಂಭವಾಗಿದೆ.

ಮೈಸೂರಿನ ಕುವೆಂಪುನಗರದ ಶಾಂತಿ ಸಾಗರ ಸರ್ಕಲ್, ವಿವೇಕಾನಂದ ಸರ್ಕಲ್ ಸೇರಿದಂತೆ ವಿವಿಧೆಡೆ ಈ ವಾಹನವು ಸಂಚರಿಸುತ್ತಿದ್ದು, ಬರೀ ಎರಡು ದಿನದಲ್ಲಿ ನಿರೀಕ್ಷೆಗೂ ಮೀರಿ ಅಪಾರ ಪ್ರಮಾಣದಲ್ಲಿ ಅರಣ್ಯ ಉತ್ಪನ್ನಗಳು ಮಾರಾಟವಾಗಿವೆ ಎಂದು ಲ್ಯಾಂಪ್ಸ್ ಮಹಾಮಂಡಲದ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ವಿಜಯಕುಮಾರ್ ತಿಳಿಸಿದ್ದಾರೆ.

ಮೈಸೂರು ಅರಮನೆ, ಚಾಮುಂಡಿ ಬೆಟ್ಟ, ಮೃಗಾಲಯ, ರೈಲು ನಿಲ್ದಾಣದಂತಹ ಜನಸಂದಣಿ ಸ್ಥಳ, ಮಾರುಕಟ್ಟೆ, ಜಾತ್ರೆ, ಸಂತೆ ಮುಂತಾದ ಕಡೆಯಲ್ಲಿ ಈ ವಾಹನವನ್ನು ನಿಲ್ಲಿಸಿಕೊಂಡು ಸಾಂಪ್ರದಾಯಿಕ ಅರಣ್ಯ ಉತ್ಪನ್ನಗಳನ್ನು ಮಾರಾಟ ಮಾಡಲು ತಯಾರಿ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.



ಈವರೆಗೆ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಸಿಪೆಟ್ ಎದುರಿನ ಮಹಾಮಂಡಲದ ಕಚೇರಿಯಲ್ಲಿ ಉತ್ಪನ್ನಗಳನ್ನು ಶೇಖರಿಸಿಟ್ಟು ಮಾರಾಟ ಮಾಡುತ್ತಿದ್ದೆವು. ಆದಿವಾಸಿಗಳು ಸಂಗ್ರಹಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಿ ಸಾಂಪ್ರದಾಯಿಕ ಪದಾರ್ಥಗಳನ್ನು ಬಳಸುವಂತೆ ಸಾರ್ವಜನಿಕರಿಗೆ ಉತ್ತೇಜನ ನೀಡುವ ಸಲುವಾಗಿ ಈಗ ಜನರ ಬಳಿಗೇ ಕೊಂಡೊಯ್ದು ಮಾರಾಟ ಮಾಡಲು ಆರಂಭಿಸಿದ್ದೇವೆ ಎಂದರು.

ವಾಹನದಲ್ಲಿ ಚಾಲಕ ಮತ್ತು ಓರ್ವ ಸೇಲ್ಸ್‌ಮನ್ ಇರುತ್ತಾರೆ. ಒಂದೊಂದು ಸ್ಥಳದಲ್ಲಿ ಕನಿಷ್ಠ 2–3 ತಾಸು ಇದ್ದು, ಅರಣ್ಯ ಉತ್ಪನ್ನಗಳ ಮಾರಾಟ ಮಾಡುತ್ತಾರೆ. ನಗರ ಪ್ರದೇಶದ ಜನರಿಗೆ ಅರಣ್ಯ ಕಿರು ಉತ್ಪನ್ನಗಳನ್ನು ಪರಿಚಯಿಸಬೇಕೆಂಬುದು ನಮ್ಮ ಆದ್ಯತೆಯಾಗಿದ್ದು, ಈ ನಡುವೆ ಗ್ರಾಮೀಣ ಭಾಗಕ್ಕೂ ಕೊಂಡೊಯ್ಯುತ್ತೇವೆ ಎಂದು ತಿಳಿಸಿದರು.

> "ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಚಿಕ್ಕಮಗಳೂರು, ಮಂಡ್ಯ ಸೇರಿ 8 ಜಿಲ್ಲೆಗಳು ಮಹಾಮಂಡಲದ ವ್ಯಾಪ್ತಿಗೆ ಬರಲಿದ್ದು ಈ ಎಲ್ಲಾ ಜಿಲ್ಲೆಗಳಿಗೂ ನಮ್ಮ ವಾಹನ ತೆರಳಲಿದೆ. ಹೆಚ್‌ಡಿ ಕೋಟೆ, ಬಿಳಿಗಿರಿರಂಗನಬೆಟ್ಟ, ತಿತಿಮತಿ, ಕೊಪ್ಪ, ದಾಂಡೇಲಿ, ಉತ್ತರಕನ್ನಡ ಜಿಲ್ಲೆಗಳ ಅರಣ್ಯದಿಂದ ನಮಗೆ ಆದಿವಾಸಿಗಳು ಉತ್ಪನ್ನಗಳನ್ನು ಪೂರೈಸುತ್ತಿದ್ದಾರೆ. ನಾವು ಅವುಗಳನ್ನು ಪ್ಯಾಕ್ ಮಾಡಿ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುತ್ತೇವೆ.
>
> **–ವಿಜಯಕುಮಾರ್, ಲ್ಯಾಂಪ್ಸ್ ಮಹಾ ಮಂಡಲದ ವ್ಯವಸ್ಥಾಪಕ ನಿರ್ದೇಶಕ**

ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರಿನಲ್ಲಿ ಮಹಾಮಂಡಲದ ಔಟ್‌ಲೆಟ್‌ಗಳನ್ನು ತೆರೆಯುವ ಚಿಂತನೆ ಇದೆ. ಜನರ ಪ್ರತಿಕ್ರಿಯೆ ನೋಡಿಕೊಂಡು ಬೇಡಿಕೆಗೆ ತಕ್ಕಂತೆ ವ್ಯವಸ್ಥೆ ಮಾಡುತ್ತೇವೆ ಎಂದರು.

ಗ್ರಾಮೀಣ ಪ್ರದೇಶದ ಜನರಿಗೆ ನಿರಂತರ ಉದ್ಯೋಗ ನೀಡುವ 'ದುಡಿಯೋಣ ಬಾ ಅಭಿಯಾನ'

ಜಿಪಂ ಸಿಇಓ ಬಿ.ಆರ್.ಪೂರ್ಣಿಮಾರಿಂದ ಪ್ರಚಾರ ವಾಹನಕ್ಕೆ ಚಾಲನೆ



ಮೈಸೂರು,ಏ.5(ಎಂಟಿವೈ)– ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ನಿರಂತರವಾಗಿ ಕೆಲಸ ನೀಡುವ ಉದ್ದೇಶದಿಂದ 'ದುಡಿಯೋಣ ಬಾ ಅಭಿಯಾನ' ಹಮ್ಮಿಕೊಳ್ಳಲಾಗಿದೆ ಎಂದು ಜಿ.ಪಂ ಸಿಇಓ ಬಿ.ಆರ್.ಪೂರ್ಣಿಮಾ ತಿಳಿಸಿದ್ದಾರೆ.

ಮೈಸೂರಿನ ಜಿ.ಪಂ ಕಚೇರಿ ಆವರಣದಲ್ಲಿ ಆಯೋಜಿಸಿದ್ದ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ದುಡಿಯೋಣ ಬಾ ಅಭಿಯಾನ ಪ್ರಚಾರ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಜನರಿಗೆ ನಿರಂತರವಾಗಿ ಕೆಲಸ ನೀಡುವ ಉದ್ದೇಶದಿಂದ ಮಾ.15 ರಿಂದ ಜೂನ್ ಅಂತ್ಯದವರೆಗೆ 'ದುಡಿಯೋಣ ಬಾ' ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ಈ ಅಭಿಯಾನದ ಮೂಲಕ ಬೇಸಿಗೆ ಕಾಲದಲ್ಲಿ ಗ್ರಾಮೀಣ ಭಾಗದ ಜನರು ವಲಸೆ ಹೋಗುವುದನ್ನು ತಪ್ಪಿಸಲು ಒಂದು ಕುಟುಂಬಕ್ಕೆ 100 ದಿನಗಳ ಕಾಲ ಉದ್ಯೋಗ ಕಲ್ಪಿಸಲಾಗುತ್ತಿದೆ. ನರೇಗಾ ಯೋಜನೆಯಡಿ ಸತತ 3 ತಿಂಗಳ ಕಾಲ ಕೆಲಸ ಪಡೆಯಲು ಅವಕಾಶವಿದೆ. ದುಡಿಯೋಣ ಬಾ ಅಭಿಯಾನದಲ್ಲಿ ಉದ್ಯೋಗ ಕೈಗೊಂಡು ಕೃಷಿ ಚಟುವಟಿಕೆಗೆ ಅಗತ್ಯವಿರುವ ಬೀಜ, ರಸಗೊಬ್ಬರ ಖರೀದಿ ಹಾಗೂ ಮಕ್ಕಳ ಶಾಲೆ–ಕಾಲೇಜು ಶುಲ್ಕ ಭರಿಸಲು ಸಹಕಾರಿಯಾಗಲಿದೆ. ಗ್ರಾಮೀಣ ಜನರು ಯೋಜನೆ ಸದುಪಯೋಗ ಮಾಡಿಕೊಳ್ಳುವ ಮೂಲಕ ಆರ್ಥಿಕ ಪರಿಸ್ಥಿತಿ ಸುಧಾರಿಸಿಕೊಳ್ಳಬಹುದು. ಅಲ್ಲದೇ ಪ್ರಸ್ತುತ ಕೂಲಿಯು 309 ರೂ.ಗೆ ಹೆಚ್ಚಳವಾಗಿದೆ. ಈ ಸೌಲಭ್ಯ ಪಡೆಯಲು ಹತ್ತಿರದ ಗ್ರಾಪಂಗೆ ಭೇಟಿ ನೀಡಿ ಅರ್ಜಿ ಸಲ್ಲಿಸಿ ಉದ್ಯೋಗ ಪಡೆಯಿರಿ ಎಂದರು.

ಉಪ ಕಾರ್ಯದರ್ಶಿ (ಅಭಿವೃದ್ಧಿ) ಕೆ.ಸಿ.ದೇವರಾಜೇಗೌಡ ಮಾತನಾಡಿ, ಬೇಸಿಗೆ ಸಮಯದಲ್ಲಿ ಕೃಷಿ ಚಟುವಟಿಕೆಗಳು ಕಡಿಮೆ ಇರಲಿದ್ದು, ಕೂಲಿ ಕೆಲಸವೂ ಸಿಗುವುದಿಲ್ಲ. ಈ ವೇಳೆಯಲ್ಲಿ ಗ್ರಾಮೀಣರಿಗೆ ಜೀವನ ನಿರ್ವಹಣೆಯೂ ಕಷ್ಟ, ಇಂತಹ ಸಮಯದಲ್ಲಿ ನರೇಗಾ ಯೋಜನೆಯಡಿ ದುಡಿಯೋಣ ಬಾ ಅಭಿಯಾನದ ಮೂಲಕ ಗ್ರಾಮೀಣರಿಗೆ 3 ತಿಂಗಳ ಕಾಲ ನಿರಂತರವಾಗಿ ಕೆಲಸ ಒದಗಿಸುವ ಉದ್ದೇಶ ಹೊಂದಲಾಗಿದೆ. ನರೇಗಾ ಯೋಜನೆಯ ಸೌಲಭ್ಯಗಳ ಮಾಹಿತಿಯೂ ಗ್ರಾಮೀಣ ಭಾಗದ ಪ್ರತಿಯೊಬ್ಬರಿಗೂ ತಿಳಿಯಬೇಕು. ಜಿಲ್ಲೆಯ ಎಲ್ಲಾ ತಾಲ್ಲೂಕಿನ ಜನರು ಈ ಯೋಜನೆಯನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಉಪಕಾರ್ಯದರ್ಶಿ (ಆಡಳಿತ) ಡಾ. ಎಸ್.ಪ್ರೇಮ್‌ಕುಮಾರ್, ಡಿಆರ್‌ಡಿಎ ವಿಭಾಗದ ಅಧೀಕ್ಷಕ ರಾಜೇಂದ್ರ ಪ್ರಸಾದ್, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಎಂ.ಎಸ್. ರಮೇಶ್, ಮಹಾತ್ಮಗಾಂಧಿ ನರೇಗಾ ಯೋಜನೆ ಸಹಾಯಕ ನಿರ್ದೇಶಕ ಕೆ.ಎಂ.ರಘುನಾಥ್, ಎಡಿಪಿಸಿ ಸುಪ್ರಿಯಾ, ಜಿಲ್ಲಾ ಎಂಐಎಸ್ ಸಂಯೋಜಕಿ ಭವ್ಯ, ಜಿಲ್ಲಾ ಐಇಸಿ ಸಂಯೋಜಕಿ ರಮ್ಯಾ, ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕಿ ರೂಪಾ, ವಿಷಯ ನಿರ್ವಾಹಕಿ ಮಂಜುಳಾ, ಮೈಸೂರು ಹಾಗೂ ಹೆಚ್.ಡಿ. ಕೋಟೆ ತಾಲ್ಲೂಕು ಐ.ಇ.ಸಿ ಸಂಯೋಜಕರು, ಇತರರು ಉಪಸ್ಥಿತರಿದ್ದರು.



ಬೆಂಗಳೂರಿನ ಲಲಿತ ಅಶೋಕ ಹೋಟೆಲ್‌ನಲ್ಲಿ ನಡೆದ ಐಆರ್‌ಐಎ ರಾಷ್ಟ್ರೀಯ ಸಮ್ಮೇಳನದಲ್ಲಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ರೇಡಿಯಾಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಸಂಜಯ್ ಅವರಿಗೆ ಪ್ರೆಸಿಡೆಂಟ್ ಶ್ಲಾಘನೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು ರೈಲು ನಿಲ್ದಾಣದಲ್ಲಿ ಶ್ರೀಗಂಧದ ಉತ್ಪನ್ನ ಮಾರಾಟ

ಮೈಸೂರು, ಏ.5(ಆರ್‌ಕೆ)–ಮೈಸೂರು ರೈಲು ನಿಲ್ದಾಣದಲ್ಲಿ ಏ.8ರಿಂದ 15ರವರೆಗೆ ಶ್ರೀಗಂಧದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ವಿಭಾಗೀಯ ರೈಲ್ವೇ ವ್ಯವಸ್ಥಾಪಕ ಡಾ. ಮಂಜುನಾಥ ಕನಮಡಿ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು 'ಒಂದು ನಿಲ್ದಾಣ ಒಂದು ಉತ್ಪನ್ನ' ಯೋಜನೆಯಡಿ ರೈಲ್ವೇ ನಿಲ್ದಾಣಗಳಲ್ಲಿ ಸ್ಥಳೀಯ ಉತ್ಪನ್ನಗಳ ಪ್ರಚಾರ ಮತ್ತು ಮಾರಾಟದ ಸ್ಥಳವನ್ನಾಗಿ ಮಾಡಲು ಮೈಸೂರು ವಿಭಾಗವು ಶ್ರೀಗಂಧದ ಉತ್ಪನ್ನಗಳಾದ ಗಂಧದ ಕಲಾಕೃತಿ, ಸಾಬೂನು, ಸುಗಂಧದ್ರವ್ಯ, ಗಂಧದಕಡ್ಡಿ, ಧೂಪದ್ರವ್ಯಗಳನ್ನು ಮಾರಾಟ ಮಾಡಲು ವಿವಿಧ ಸಂಸ್ಥೆ, ಏಜೆನ್ಸಿಗಳಿಂದ ಅರ್ಜಿ ಆಹ್ವಾನಿಸಿದೆ ಎಂದು ತಿಳಿಸಿದ್ದಾರೆ.

ರೈಲು ನಿಲ್ದಾಣ ಮತ್ತು ಪ್ಲಾಟ್‌ಫಾರಂಗಳಲ್ಲಿ ಒಂದು ಮಾರಾಟ ಮಳಿಗೆಗೆ ಮಾತ್ರ ಅನುಮತಿ ನೀಡಲಿದ್ದು, ಒಂದಕ್ಕಿಂತ ಹೆಚ್ಚು ಅರ್ಜಿಗಳು ಬಂದರೆ ಚೀಟಿ ಎತ್ತುವ ಮೂಲಕ ಆಯ್ಕೆ ಮಾಡಲಾಗುವುದು. ಆಸಕ್ತರು ಏ.7ರ ಸಂಜೆ 4ರೊಳಗೆ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ನೈಋತ್ಯ ರೈಲ್ವೆ, ಮೈಸೂರು ಇವರಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ 9731667950ಗೆ ಸಂಪರ್ಕಿಸುವಂತೆ ತಿಳಿಸಲಾಗಿದೆ.


ನಾಳೆ ಮುಕ್ತ ವಿವಿ ಆವರಣದಲ್ಲಿ ಬೃಹತ್ ಉದ್ಯೋಗ ಮೇಳ

ಮೈಸೂರು, ಏ.5– ಮೈಸೂರು ಜಿಲ್ಲಾಡಳಿತ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ಬೆಂಗಳೂರು ಮತ್ತು ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಗಳ ಸಂಯುಕ್ತಾಶ್ರಯದಲ್ಲಿ ಏ.7ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆವರೆಗೆ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಕೌಶಲ್ಯಾಭಿವೃದ್ಧಿ ಮತ್ತು ವಿಜ್ಞಾನ ತಂತ್ರಜ್ಞಾನ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉಪಸ್ಥಿತರಿದ್ದರು. ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್ ಹಾಗೂ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವೇಶ್ಯಾವಾಟಿಕೆ: ಓರ್ವನ ಸೆರೆ

ಮೈಸೂರು,ಏ.5(ಆರ್‌ಕೆ)–ಯುವತಿ ಇರಿಸಿಕೊಂಡು ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಅಡ್ಡೆ ಮೇಲೆ ದಾಳಿ ನಡೆಸಿದ ವಿಜಯನಗರ ಠಾಣೆ ಪೊಲೀಸರು ಓರ್ವನನ್ನು ಬಂಧಿಸಿದ್ದಾರೆ. ಮೈಸೂರಿನ ವಿಜಯನಗರ 2ನೇ ಹಂತದ ವಾಟರ್ ಟ್ಯಾಂಕ್ ಬಳಿ ಲಾಡ್ಜ್‌ವೊಂದರ ಮೇಲೆ ಸೋಮವಾರ ಸಂಜೆ ದಾಳಿ ನಡೆಸಿದ ಪೊಲೀಸರು ಸುನೀಲ್ ಎಂಬಾತನನ್ನು ಬಂಧಿಸಿ ನಾಲ್ವರು ಯುವತಿಯರನ್ನು ರಕ್ಷಿಸಿದ್ದಾರೆ. ವೇಶ್ಯಾವಾಟಿಕೆ ನಡೆಸುತ್ತಿದ್ದ ಓರ್ವ ಮಹಿಳೆ ಸೇರಿ ಇಬ್ಬರು ತಲೆ ಮರೆಸಿಕೊಂಡಿದ್ದಾರೆ. ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ವಿಜಯಕುಮಾರ್, ಸಬ್ ಇನ್ಸ್‌ಪೆಕ್ಟರ್ ಶಬರೀಶ್ ಹಾಗೂ ಸಿಬ್ಬಂದಿ ದಾಳಿಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.04.2022 ಬುಧವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ಪಂಚಮಿ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 9 ರಿಂದ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್**: ಶ್ರೀರಾಮನವಮಿ ಸಂಗೀತ ಕಾರ್ಯಕ್ರಮ, ಸಂಜೆ 5.15ಕ್ಕೆ ವಿದುಷಿ ಜಿ.ಆರ್. ಅನನ್ಯ ಅವರಿಂದ ಗಾಯನ, ಅಮೋಘ್ – ಪಿಟೀಲು, ಶುಭಾಂಗ್– ಮೃದಂಗ, ಸಂಜೆ 6.15ಕ್ಕೆ ವಿದ್ವಾನ್ ಕುನ್ನುಕುಡಿ ಎನ್. ಬಾಲಮುರಳಿ ಕೃಷ್ಣನ್ ಅವರಿಂದ ಗಾಯನ, ಮತ್ತೂರು ಶ್ರೀನಿಧಿ–ಪಿಟೀಲು, ಬಿ.ಸಿ. ಮಂಜುನಾಥ್ – ಮೃದಂಗ, ವ್ಯಾಸ ವಿಠ್ಠಲ ಸಿ.ಪಿ. – ಖಂಜಿರ, ಸ್ಥಳ : ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್** : ರಾಮೋತ್ಸವ ಕಾರ್ಯಕ್ರಮಗಳು, ಡಾ. ತುಳಸಿ ರಾಮಚಂದ್ರ ತಂಡದಿಂದ ಭಜನೆ; ಗಮಕ–ಮುದ್ದಣನ ಶ್ರೀರಾಮ ಪಟ್ಟಾಭಿಷೇಕ; ವಾಚನ–ಗಮಕಿ ಹೆಚ್. ಯಜ್ಞೇಶ್ ಆಚಾರ್, ಸುರತ್ಕಲ್; ವ್ಯಾಖ್ಯಾನ–ವಿದ್ವಾನ್ ಸರ್ಪಂಗಳ ಈಶ್ವರ ಭಟ್, ಮಂಗಳೂರು; ಸ್ಥಳ : ಗಣಪತಿ ದೇವಸ್ಥಾನ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6.30ಕ್ಕೆ

■ **ಶ್ರೀ ಮಹಾಜನ ಸಭಾ, ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ** : 93ನೇ ವರ್ಷದ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ 10ಕ್ಕೆ ಯೋಗಾನರಸಿಂಹಸ್ವಾಮಿ ಗಾನಶಾಲೆ ಇವರಿಂದ ಭಜನೆ, ಸಂಜೆ 6 ರಿಂದ ವಿದುಷಿ ಶ್ಯಾಮಲಾ ಪ್ರಕಾಶ್ ಅವರಿಂದ ವ್ಯಾಖ್ಯಾನ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್** : 13ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಲಲಿತೋಪಾಖ್ಯಾನ ಪಾರಾಯಣ, ಲಲಿತಾ ಸಹಸ್ರನಾಮ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ದಶಮಹಾವಿದ್ಯಾ ಆವರಣ ಪೂಜೆ, ಸಂಜೆ 5.30 ರಿಂದ ಶ್ರೀ ಲಲಿತಾ ಪಂಚಮಿ ಪ್ರಯುಕ್ತ ಶ್ರೀ ದಶಮಹಾವಿದ್ಯಾ ಹೋಮ, ಶ್ರೀ ಲಲಿತಾ ಮಹಾಯಾಗ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಸ್ನೇಹ ಸಿಂಚನ ಟ್ರಸ್ಟ್, ಹಿಮಾಲಯ ಪ್ರತಿಷ್ಠಾನ** : ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ, ಅಭಿನಂದಿಸುವವರು : ಹಿರಿಯ ವಿದ್ವಾಂಸ ಡಾ. ಪ್ರಧಾನ ಗುರುದತ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಸಂಸ್ಕೃತ ವಿದ್ವಾಂಸ ಡಾ. ಕೆ. ಲೀಲಾಪ್ರಕಾಶ್, ಯೂನಿವರ್ಸಲ್ ಅಕಾಡೆಮಿ ಅಧ್ಯಕ್ಷ ಪ್ರಕಾಶ್ ಜಿ.ಎಸ್. ಹಳ್ಳಿ, ಆಶಯ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

ನಗರ್ಲೆಯಲ್ಲಿಂದು

■ **ನಗರ್ಲೆ ಶ್ರೀ ಬಸವೇಶ್ವರ ಯುವಕರ ಸಂಘ**: ನಗರ್ಲೆ ಶಿವಕುಮಾರ ಅವರ 'ಹಳ್ಳಿಪಥ' ಕೃತಿ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ದೇವೀರಮ್ಮನಹಳ್ಳಿ ಶ್ರೀ ಶರಣ ಸಂಗಮ ಮಠದ ಶ್ರೀ ನಾಗರಾಜೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು.ಸದಾನಂದಯ್ಯ, ಕೃತಿ ಪರಿಚಯ: ನಿವೃತ್ತ ಪ್ರಾಧ್ಯಾಪಕ ಪ್ರೊ.ಡಿ.ಎಸ್.ಸದಾಶಿವಮೂರ್ತಿ, ಅತಿಥಿಗಳು: ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷ ಕಾನ್ಯ ಶಿವಮೂರ್ತಿ, ಲೇಖಕ ನಗರ್ಲೆ ಶಿವಕುಮಾರ, ಸ್ಥಳ: ಮನೆಯಮ್ಮನ ದೇಗುಲ, ಬಸದಿ ಹತ್ತಿರ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು– ಬಾನುಲಿ ಸರಣಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಎಂ.ಎ. ಶೋಭ, ವ್ಯಾಖ್ಯಾನ– ಡಾ.ಜಿ.ಆರ್. ತಿಪ್ಪೇಸ್ವಾಮಿ, 7.15 ಪ್ರಾಯೋಜಿತ ಕಾರ್ಯಕ್ರಮ 'ಕೌಶಲ್ಯ ಕರ್ನಾಟಕ'. ಪ್ರಾಯೋಜಕರು ರಾಜ್ಯ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, 9.00 ಮನೋನಂದನ– ಮಾನಸಿಕ ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ ಹೊಸ ಸಾಮಾಜಿಕ ವಾಸ್ತವಗಳು ಮತ್ತು ಮಾನಸಿಕ ಆರೋಗ್ಯ ಕುರಿತು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಡಾ.ಹೆಚ್.ಆರ್. ಅಭಿಜಿತ್, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ– ಬಾನುಲಿ ಸರಣಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ– ಎನ್. ಶ್ರೀನಾಥ್, 12.45 ಜನಪದ ಸಂಗೀತ –ಶಿವಮ್ಮ ಮತ್ತು ತಂಡ, 1.20 ಭಾವಗೀತೆ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ– ಸ್ತ್ರೀ ಚೇತನ–ನ್ಯಾಯವಾದಿ ಹಾಗೂ ಸಮಾಜ ಸೇವಕಿ ಎಂ.ಎನ್. ಸುಮನಾ ಅವರ ಜೊತೆ ಮಾತುಕತೆ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ. ಮಳಿಮಠ್ ಮತ್ತು ಕೆ.ಬಿ.ಮೀನಾ, 4.45 ಹಿಂದಿ ಪಾಠ, ಪ್ರಸ್ತುತಿ– ಕಿಶೋರ್ ಎಂ. ಕಾಕಡೆ, 6.50 ಕೃಷಿರಂಗ–ಕಿಸಾನ್ ವಾಣಿ, ಕೃಷಿ ವಿಜ್ಞಾನ ಅಧ್ಯಯನಕ್ಕೆ ಅವಕಾಶಗಳು ಕುರಿತು ಡಾ. ಎಂ.ಪಿ. ರಾಜಣ್ಣ ಅವರೊಂದಿಗೆ ಸಂದರ್ಶನ, 9.05 ಕ್ಷಿತಿಜ-Literacy ಗುರು– ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.05 ಹಿಂದೂಸ್ಥಾನಿ ಸಂಗೀತ – ಬಡೇಗುಲಾಂ ಆಲಿಖಾನ್ – ಗಾಯನ, 10.30 ಸವಿನೆನಪು

ಮೈಸೂರು ಮಿತ್ರ

ಉಡುಪಿ ಪೊಲೀಸರಿಂದ ಎಟಿಎಂಗಳಿಗೆ ಸ್ಕಿಮ್ಮರ್ ಅಳವಡಿಸಿ ಹಣ ದೋಚುತ್ತಿದ್ದ ಖದೀಮರ ಸೆರೆ

ಮೈಸೂರಲ್ಲೂ ಎರಡು ಕಡೆ ವಂಚನೆ: ಪೊಲೀಸರಿಂದ ಮಹಜರ್

ಮೈಸೂರು, ಏ.5(ಜಿಎ)– ಮೈಸೂರಿನಲ್ಲಿ ಸ್ಕಿಮ್ಮರ್ ಸಾಧನ ಬಳಸಿ ಹಣ ದೋಚುತ್ತಿದ್ದ ಖದೀಮರನ್ನು ಉಡುಪಿ ಪೊಲೀಸರು ಸೆರೆ ಹಿಡಿದಿದ್ದು, ಇಂದು ಮೈಸೂರಿಗೆ ಕರೆ ತಂದು ಸ್ಥಳ ಮಹಜರು ನಡೆಸಿದ್ದಾರೆ. ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ತಮಿಳುನಾಡು ಮರ್ಕೆಂಟೈಲ್ ಬ್ಯಾಂಕ್ ಸೇರಿದಂತೆ ನಗರದ ಮತ್ತೊಂದು ಬ್ಯಾಂಕ್‌ಗೆ ಆರೋಪಿಗಳನ್ನು ಕರೆತಂದ ಉಡುಪಿ ಸೈಬರ್ ಕ್ರೈಂ ವಿಭಾಗದ ಪೊಲೀಸ್ ತಂಡ, ಸ್ಥಳ ಮಹಜರು ನಡೆಸಿದ್ದಾರೆ.



❝ ಈ ರೀತಿ ಪ್ರಕರಣ ನಮ್ಮ ಬ್ಯಾಂಕ್ ಅಥವಾ ಎಟಿಎಂನಲ್ಲಿ ಎಂದೂ ಕಂಡು ಬಂದಿಲ್ಲ. ಇದೇ ಮೊದಲ ಬಾರಿಗೆ ಈ ರೀತಿಯಾಗಿದೆ. ಉಡುಪಿಯಿಂದ ಬಂದಿರುವ ಪೊಲೀಸರಿಗೆ ಬ್ಯಾಂಕ್‌ನಿಂದ ಎಲ್ಲಾ ರೀತಿ ಸಹಕಾರ ನೀಡಲಾಗಿದೆ.

–ಶಿವು, ಮ್ಯಾನೇಜರ್, ತಮಿಳುನಾಡು ಮರ್ಕೆಂಟೈಲ್ ಬ್ಯಾಂಕ್

ಮಾ.21ರಂದು ಮೈಸೂರಿಗೆ ಬಂದಿದ್ದ, ಉಡುಪಿ ಮೂಲದ ವ್ಯಕ್ತಿಯೊಬ್ಬರು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ತಮಿಳುನಾಡು ಮರ್ಕೆಂಟೈಲ್ ಬ್ಯಾಂಕ್‌ನ ಪಕ್ಕದ ಎಟಿಎಂ ಯಂತ್ರದಲ್ಲಿ ಹಣ ಡ್ರಾ ಮಾಡಿದ್ದಾರೆ. ನಂತರ ಅವರು ಉಡುಪಿಗೆ ತೆರಳಿದ ವೇಳೆಯಲ್ಲಿ ಅವರ ಖಾತೆಯಿಂದ ಯಾರೋ ಹಣ ಡ್ರಾ ಮಾಡಿದ್ದು ಗಮನಕ್ಕೆ ಬಂದು, ಉಡುಪಿ ಪೊಲೀಸರಿಗೆ ದೂರು ನೀಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಕಾಸರಗೋಡಿನಲ್ಲಿ ಮೂವರನ್ನು ಸೆರೆಹಿಡಿದಿದ್ದಾರೆ. ಅವರ ವಿಚಾರಣೆ ನಡೆಸುತ್ತಿದ್ದು, ಈ ಸಂಬಂಧ ಮೈಸೂರಿಗೂ ಆ ಮೂವರು ಆರೋಪಿಗಳನ್ನು ಕರೆತಂದು ಎರಡು ಎಟಿಎಂಗಳಲ್ಲಿ ಮಹಜರು ನಡೆಸಿದ್ದಾರೆ. ಖದೀಮರು ಮಂಗಳೂರು ಮತ್ತು ಕಾಸರಗೋಡಿನಲ್ಲಿ ಸ್ಕಿಮ್ಮರ್ ಸಾಧನಗಳ ತಯಾರಿಸಿ ನಂತರ ಅದನ್ನು ಮೈಸೂರು, ಬೆಂಗಳೂರು, ಮಡಿಕೇರಿ, ಉಡುಪಿ, ಮಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಎಟಿಎಂಗಳಲ್ಲಿ ಅಳವಡಿಸುತ್ತಿದ್ದರು. ನಂತರ ಕಾಸರಗೋಡಿನಲ್ಲಿ ಕುಳಿತು ಎಟಿಎಂಗೆ ಹಣ ತೆಗೆಯಲು ಬರುವ ಗ್ರಾಹಕರ ಕಾರ್ಡ್‌ಗಳ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸುತ್ತಿದ್ದ ಖದೀಮರು ಅದರ ಆಧಾರದ ಮೇಲೆ ಮತ್ತೊಂದು ನಕಲಿ ಎಟಿಎಂ ಕಾರ್ಡ್ ಸಿದ್ಧಮಾಡಿಕೊಂಡು ಹಣ ದೋಚುತ್ತಿದ್ದರು ಎನ್ನಲಾಗಿದೆ.

ಯುಗಾದಿಯಂದು ದಲಿತರ ಮನೆಯಲ್ಲಿ ಭೋಜನ ಸವಿದು ಸಾಮರಸ್ಯ ಸಂದೇಶ ಸಾರಿದ ಬಿಜೆಪಿ ಮುಖಂಡ

ಮೈಸೂರು, ಏ.5(ಆರ್‌ಕೆಬಿ)– ದಲಿತ ಕಾರ್ಯಕರ್ತರ ಮನೆಯಲ್ಲಿ ಯುಗಾದಿ ಹಬ್ಬದ ಭೋಜನ ಸವಿಯುವ ಮೂಲಕ ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ, ಕಲ್ಯಾಣ ಲಕ್ಷ್ಮೀ ವೆಂಕಟ ರಮಣ ಸ್ವಾಮಿ ದೇವಸ್ಥಾನದ ಸಂಸ್ಥಾಪಕ ಎಚ್.ಜಿ.ಗಿರಿಧರ್, ಸಾಮರಸ್ಯ ಸಂದೇಶ ಸಾರಿದರು.



ಮೈಸೂರಿನ ಗಾಂಧಿ ನಗರದ 12ನೇ ಕ್ರಾಸ್ ನಿವಾಸಿ ದಲಿತ ವರ್ಗದ ಮುಖಂಡ, ಬಿಜೆಪಿ ಕಾರ್ಯಕರ್ತ ಕರ್ಣ ಎಂಬುವರ ಮನೆಯಲ್ಲಿ ಗಿರಿಧರ್ ಯುಗಾದಿಯಂದು ಸಾಮರಸ್ಯ ಭೋಜನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಎನ್.ಆರ್.ಕ್ಷೇತ್ರ ಅಧ್ಯಕ್ಷ ಭಾನುಪ್ರಕಾಶ್, ಪಾಲಿಕೆ ಸದಸ್ಯೆ ಅಶ್ವಿನಿ ಶರತ್, ಮುಖಂಡ ಶರತ್‌ಕುಮಾರ್, ಮೋರ್ಚಾದ ಪ್ರಧಾನ ಕಾರ್ಯದರ್ಶಿ ಅನಿಲ್ ಥಾಮಸ್, ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯ ಸಂಚಾಲಕ ಮುರುಳೀಧರ, ಮೋರ್ಚಾ ಪ್ರಧಾನ ಕಾರ್ಯದರ್ಶಿ ರೇಣುಕಾ ರಾಜು, ಮಣಿರತ್ನಂ, ವೇಲು, ಎನ್.ಆರ್.ಕ್ಷೇತ್ರ ಯುವ ಮೋರ್ಚಾ ಅಧ್ಯಕ್ಷ ಲೋಹಿತ್, ರೈತ ಮೋರ್ಚಾ ಅಧ್ಯಕ್ಷ ಶಶಿಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಏ.16ರ ಹನುಮ ಜಯಂತಿಯಂದು ಜೆಡಿಎಸ್ 'ಜನತಾ ಜಲಧಾರೆ'ಗೆ ಚಾಲನೆ

● ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಘೋಷಣೆ ● ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆ ಸಂಬಂಧ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸಭೆ

ಮೈಸೂರು,ಏ.5(ಎಸ್‌ಬಿಡಿ)–ಹನುಮ ಜಯಂತಿಯ ದಿನ ಜೆಡಿಎಸ್‌ನ 'ಜನತಾ ಜಲಧಾರೆ' ಮಹತ್ವದ ಕಾರ್ಯಕ್ರಮಕ್ಕೆ ಚಾಲನೆ ದೊರಕಲಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಪಕ್ಷದ ನಾಯಕರು ಹಾಗೂ ಮುಖಂಡರೊಂದಿಗೆ ಮಂಗಳವಾರ ಸಭೆ ನಡೆಸಿದ ಅವರು, ಏ.16 ಹನುಮ ಜಯಂತಿ ದಿನದಂದು 'ಜನತಾ ಜಲಧಾರೆ' ಆರಂಭವಾಗಲಿದ್ದು, ಇದಕ್ಕಾಗಿ 15 ವಾಹನಗಳನ್ನು ಸಜ್ಜುಗೊಳಿಸಲಾಗಿದೆ. ಮೈಸೂರು ಭಾಗದ ಕೆಆರ್‌ಎಸ್, ತಲಕಾವೇರಿ ಹಾಗೂ ಕಬಿನಿ ಸೇರಿದಂತೆ ರಾಜ್ಯದ 15 ಪ್ರದೇಶಗಳಿಂದ ನದಿ ನೀರನ್ನು ಕಳಶದಲ್ಲಿ ತುಂಬಿಕೊಂಡು ನಿಗದಿತ ಮಾರ್ಗದಲ್ಲಿ ಮೆರವಣಿಗೆ ಮೂಲಕ ಬೆಂಗಳೂರಿಗೆ ತರಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ನದಿ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ಈ ವಿಚಾರದಲ್ಲಿ ರಾಜ್ಯಕ್ಕೆ ನಿರಂತರವಾಗಿ ಅನ್ಯಾಯವಾಗಿದೆ. ಇದನ್ನು ಸರಿಪಡಿಸುವ ಉದ್ದೇಶದೊಂದಿಗೆ ವರಿಷ್ಠರಾದ ಹೆಚ್.ಡಿ.ದೇವೇಗೌಡರ ಮಾರ್ಗದರ್ಶನದಲ್ಲಿ 'ಜನತಾ ಜಲಧಾರೆ' ಕಾರ್ಯಕ್ರಮದ ಮೂಲಕ ಜನರಿಗೆ ತಿಳುವಳಿಕೆ ಮೂಡಿಸುವ ಪ್ರಯತ್ನವಾಗಿದೆ. ಈ ಕಾರ್ಯಕ್ರಮದ ಯಶಸ್ಸಿಗೆ ತಮ್ಮೆಲ್ಲರ ಸಹಕಾರ ಬಹಳ ಮುಖ್ಯ. ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ 123 ಸ್ಥಾನದಲ್ಲಿ ಗೆದ್ದು ಅಧಿಕಾರ ಪಡೆದು 5 ವರ್ಷಗಳ ಜನಪರ ಕಾರ್ಯಕ್ರಮಗಳನ್ನು ನೀಡಬೇಕೆಂಬ ಆಶಯಕ್ಕೆ ಒತ್ತಾಸೆಯಾಗಬೇಕೆಂದು ಮನವಿ ಮಾಡಿದರು.

ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಸಿ.ಎನ್.ಮಂಜೇಗೌಡರ ಗೆಲುವಿಗೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಎಲ್ಲಾ ಮುಖಂಡರು ಹಾಗೂ ಕಾರ್ಯಕರ್ತರು ಹಗಲಿರುಳು ಶ್ರಮಿಸಿದ್ದೀರಿ. ತಾವೇ ಅಭ್ಯರ್ಥಿ ಎನ್ನುವಂತೆ ಅತ್ಯಂತ ಪ್ರಾಮಾಣಿಕತೆಯಿಂದ ಕೆಲಸ ಮಾಡಿದ ಎಲ್ಲರಿಗೂ ಅಭಿನಂದನೆ ತಿಳಿಸುತ್ತೇನೆ. ಹೀಗೆಯೇ ಇನ್ನೆರಡು ತಿಂಗಳಲ್ಲಿ ಎದುರಾಗುವ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸುವುದು ಅನಿವಾರ್ಯವಾಗಿದೆ. ಈ ಚುನಾವಣೆ ಬಳಿಕ ವಿಧಾನಸಭಾ ಚುನಾವಣೆ ಎದುರಿಸಬೇಕಿರುವ ಹಿನ್ನೆಲೆಯಲ್ಲಿ ಜನರಲ್ಲಿ ಪಕ್ಷದ ಬಗ್ಗೆ ವಿಶ್ವಾಸ ಗಟ್ಟಿಗೊಳಿಸಬೇಕಿದೆ ಎಂದು ಹೇಳಿದರು.



ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಮಂಗಳವಾರ ರಾತ್ರಿ ಸಭೆ ನಡೆಸಿದರು.

ಜನರ ಹಣವನ್ನು ಲೂಟಿ ಹೊಡೆಯುತ್ತಿರುವ ಬಿಜೆಪಿ ಸರ್ಕಾರ ಧರ್ಮ ಸಂಘರ್ಷವನ್ನು ಪ್ರೋತ್ಸಾಹಿಸುತ್ತಿದೆ. ಉಡುಪಿಯ ಕಾಲೇಜಿನಲ್ಲಿ ಸೃಷ್ಟಿ ಮಾಡಿದ ವಿವಾದ ವಿಭಿನ್ನ ರೂಪದಲ್ಲಿ ಎಲ್ಲೆಡೆ ಹರಡುತ್ತಿದೆ. ಹಿಜಾಬ್, ವ್ಯಾಪಾರ ನಿರ್ಬಂಧ, ಹಲಾಲ್, ಆಜಾನ್ ಹೀಗೆ ಒಂದಿಲ್ಲೊಂದು ವಿವಾದದ ಮೂಲಕ ಸರ್ವ ಜನಾಂಗದ ಶಾಂತಿಯ ತೋಟದಲ್ಲಿ ಕೋಮು ಸಂಘರ್ಷದ ಕಿಡಿ ಹೊತ್ತಿಸುವ ಪ್ರಯತ್ನ ನಡೆದಿದೆ. ಈ ಬಗ್ಗೆ ಮಾತನಾಡಿದರೆ ಹಿಂದೂಗಳ ಮತ ಸಿಗುವುದಿಲ್ಲ ಎಂಬ ಭಯದಲ್ಲಿ ಕಾಂಗ್ರೆಸ್ ನಾಯಕರು ಮೌನವಾಗಿದ್ದಾರೆ. ಮುಸಲ್ಮಾನರ ಬೆಂಬಲ ಪಡೆದಿರುವ ಕಾಂಗ್ರೆಸ್, ಇಂತಹ ಸಂದರ್ಭದಲ್ಲೂ ಧ್ವನಿ ಎತ್ತುತ್ತಿಲ್ಲ ಎಂದು ಆರೋಪಿಸಿದರು.

ಆದರೆ ನನಗೆ ಮತ ಬ್ಯಾಂಕ್ ಅಲ್ಲ, ನಾಡಿನ ಸಾಮರಸ್ಯ ಮುಖ್ಯ. ಈ ಕಾರಣದಿಂದಲೇ ನಾನು ನೇರವಾಗಿ ಮಾತನಾಡಿದ್ದೇನೆ. ಬೆಳಗ್ಗೆ ಹಾಗೂ ಸಂಜೆ ದೇವರ ಭಜನೆ ಮಾಡುವಂತೆ ಹೇಳಿ, ಅದನ್ನು ಬಿಟ್ಟು ಮತ್ತೊಂದು ಸಮುದಾಯದ ಪ್ರಾರ್ಥನೆಗೆ ಅಡ್ಡಿ ಮಾಡಬೇಡಿ. ರೈತರು ಹಾಗೂ ಮುಸ್ಲಿಂ ವ್ಯಾಪಾರಿಗಳ ಸಂಪರ್ಕ ಕಡಿದು, ರೈತ ಬಾಂಧವರಿಗೆ ತೊಂದರೆ ಮಾಡುತ್ತಿದ್ದೀರಿ ಎಂದು ನೇರ ನುಡಿಗಳಿಂದ ಹೇಳಿದ್ದೇನೆ. ರಾಜ್ಯದ ಸಾಮರಸ್ಯಕ್ಕಾಗಿ ಕುಮಾರಸ್ವಾಮಿ ಒಬ್ಬನಾದರೂ ಧೈರ್ಯವಾಗಿ ಮಾತನಾಡುತ್ತಿದ್ದಾನೆ ಎಂದು ಜನರೇ ಹೇಳುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಚಿತಾವಣೆಯಿಂದ ಮುಸ್ಲಿಂ ಬಾಂಧವರು ನಮ್ಮ ಪಕ್ಷದ ಬಗ್ಗೆ ತಪ್ಪು ತಿಳಿದಿದ್ದರು. ಆದರೆ ಈಗ ಅಂತಹ ತಂತ್ರಗಳು ಫಲಿಸುವುದಿಲ್ಲ. ಕಲಾಮಂದಿರದಲ್ಲಿ ನಾಳೆ(ಏ.6) ಬೆಳಗ್ಗೆ ವಿಶೇಷ ಕಾರ್ಯಕ್ರಮದ ಮೂಲಕ ನಾಡಿನ ಜನರಿಗೆ ಸಾಮರಸ್ಯದ ಸಂದೇಶ ಸಾರಲಾಗುತ್ತಿದ್ದು, ಎಲ್ಲರೂ ಪಾಲ್ಗೊಳ್ಳಬೇಕೆಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮನವಿ ಮಾಡಿದರು.

ಶಾಸಕರಾದ ಸಾ.ರಾ.ಮಹೇಶ್, ಸಿ.ಎಸ್.ಪುಟ್ಟರಾಜು, ಕೆ.ಮಹದೇವು, ಅಶ್ವಿನ್‌ಕುಮಾರ್, ಡಿ.ಸಿ.ತಮ್ಮಣ್ಣ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಸೇರಿದಂತೆ ಮೈಸೂರು ನಗರ ಪಾಲಿಕೆಯ ಜೆಡಿಎಸ್ ಸದಸ್ಯರು ಹಾಗೂ ಮುಖಂಡರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ದಲಿತರ ಮುಖ್ಯಮಂತ್ರಿ ಮಾಡಲು ಜೆಡಿಎಸ್ ಸಿದ್ಧ

ಬೆಂಗಳೂರು, ಏ. 5– ಅದ್ಯಾವ ಸ್ವಾಮಿಯೋ ಗೊತ್ತಿಲ್ಲ. ದಲಿತರೊಬ್ಬರನ್ನು ನಿಮ್ಮ ಪಕ್ಷದಿಂದ ಮುಖ್ಯಮಂತ್ರಿ ಮಾಡುತ್ತೀರಾ ಮುಸ್ಲಿಂ ಸಮುದಾಯಕ್ಕೆ ಸೇರಿದವರನ್ನು ಉಪಮುಖ್ಯಮಂತ್ರಿ ಮಾಡುತ್ತೀರಾ ಎಂದು ಸವಾಲು ಹಾಕಿದ್ದಾರೆ. ಕಾಲ ಕೂಡಿ ಬಂದರೆ ಮುಂದಿನ ಬಾರಿ ದಲಿತರನ್ನೇ ಮುಖ್ಯಮಂತ್ರಿ ಮಾಡಲು ತಯಾರಿದ್ದೇವೆ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಉಳುವ ಯೋಗಿಯ ನೋಡಲ್ಲಿ ಕೃಷಿಕರ ಕಷ್ಟ ಮತ್ತು ಪರಿಹಾರಗಳು ಕುರಿತು ಹಸಿರು ಸೇನೆ ಹಮ್ಮಿಕೊಂಡಿದ್ದ ರೈತ ಮುಖಂಡರೊಂದಿಗಿನ ಸಂವಾದದಲ್ಲಿ ಮಂಗಳವಾರ ಮಾತನಾಡಿದರು.

ನಾನು ಎರಡು ಬಾರಿ ಮುಖ್ಯಮಂತ್ರಿಯಾಗಿದ್ದೇನೆ. ಬದುಕು ಕಟ್ಟಿಕೊಳ್ಳಲು ಆಗದ ಅದೆಷ್ಟೋ ಮಂದಿ ಈಗಲೂ ಸಹಾಯ ಬಯಸಿ ಮನೆ ಮುಂದೆ ನಿಲ್ಲುತ್ತಾರೆ. ಅವರಿಗೆ ಹಂಚಲು ನಿತ್ಯ ರೂ. 10 ಲಕ್ಷದಿಂದ ರೂ. 20 ಲಕ್ಷ ಎಲ್ಲಿಂದ ತರಲಿ. ಮುಖ್ಯಮಂತ್ರಿ ಆಗಿದ್ದಾಗ ಬೇರೆಯವರಂತೆ ನಾನೇನು ಹಣ, ಆಸ್ತಿ ಮಾಡಲಿಲ್ಲ ಎಂದರು.

ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗೋದಾಮು ಹಾಗೂ 30 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಕಟ್ಟುವ, ಎಲ್‌ಕೆಜಿಯಿಂದ 12ನೇ ತರಗತಿವರೆಗೆ ಗುಣಮಟ್ಟದ ಶಿಕ್ಷಣವನ್ನು ಉಚಿತವಾಗಿ ನೀಡುವ ಆಲೋಚನೆ ಇದೆ. ಅದಕ್ಕೆ ನೀವು ನಮ್ಮ ಕೈಬಲಪಡಿಸಬೇಕು. ಶ್ರೀಲಂಕಾದಲ್ಲಿ ಆಹಾರಕ್ಕಾಗಿ ಹಾಹಾಕಾರ ಎದ್ದಿದೆ. ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ನಮಗೂ ಅದೇ ಪರಿಸ್ಥಿತಿ ಎದುರಾಗಲಿದೆ ಎಂದು ಟೀಕಿಸಿದರು.

ಹತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ರೈತ ಮುಖಂಡರನ್ನೇ ಪಕ್ಷದ ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸಲು ತಯಾರಿದ್ದೇನೆ. ರೈತ ಪರವಾಗಿ, ಪ್ರಾಮಾಣಿಕವಾಗಿ ಕೆಲಸ ಮಾಡುವ ಛಲ ಇರುವವರು ಈಗಿನಿಂದಲೇ ಸಿದ್ಧರಾಗಿ ಎಂದು ಕರೆ ನೀಡಿದರು.

ಶ್ರೀರಾಮನ ಹೆಸರಿಟ್ಟುಕೊಂಡು ಅಶಾಂತಿ ಉಂಟುಮಾಡುವ ನೀವು ರಾವಣನ ಹೆಸರಿಟ್ಟುಕೊಳ್ಳಿ

ಬೆಂಗಳೂರು,ಏ.5(ಕೆಎಂಶಿ)–ಶ್ರೀರಾಮನ ಹೆಸರು ಇಟ್ಟುಕೊಂಡು ಶಾಂತಿ ಹಾಳು ಮಾಡುವ ಕೆಲಸ ಮಾಡದಿರಿ. ಅಂಥ ಕೃತ್ಯಗಳನ್ನು ಎಸಗಲು ರಾವಣನ ಹೆಸರಿಟ್ಟುಕೊಳ್ಳಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಕೆಲ ಸಂಘಟನೆಗಳ ಮೇಲೆ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವರು ರಾಮಸೇನೆ, ಮತ್ಯಾವುದೋ ಸೇನೆ ಅಂತ ಹೆಸರು ಇಟ್ಟುಕೊಂಡಿದ್ದಾರೆ. ರಾಮನ ಹೆಸರಿಟ್ಟುಕೊಂಡು ಹಿಂಸೆಯನ್ನು ಪ್ರಚೋದಿಸುತ್ತಿದ್ದಾರೆ. ಅಂಥವರು ರಾವಣಸೇನೆ ಎಂದು ಹೆಸರಿಟ್ಟುಕೊಂಡರೆ ಉತ್ತಮ. ಇವರು ರಾಮನ ಹೆಸರಿಗೆ ಯಾಕೆ ಕಳಂಕ ತರುತ್ತಿದ್ದಾರೆ. ದಯಮಾಡಿ ಮರ್ಯಾದಾ ಪುರುಷೋತ್ತಮನ ಹೆಸರಿಗೆ ಕಳಂಕ ತರಬೇಡಿ ಎಂದು ಕುಮಾರಸ್ವಾಮಿ ಕಿಡಿಕಾರಿದರು. ಪದೇ ಪದೆ ಬಿಜೆಪಿ ಸಹ ಸಂಸ್ಥೆಗಳು ಈ ರೀತಿ ಸಾಮರಸ್ಯ ಹಾಳು ಮಾಡುತ್ತಿವೆ. ನಿಜಕ್ಕೂ ನಮ್ಮ ಸಂಸ್ಕೃತಿಗೆ ಅಗೌರವ ತೋರಿಸುತ್ತಿದ್ದಾರೆ. ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟ ನಂತರವೂ ಈ ವಿಚಾರವನ್ನು ಲಘುವಾಗಿ ಪರಿಗಣಿಸಲಾಗುತ್ತಿದೆ. ದಿನಕ್ಕೆ ಒಂದು ವಿಚಾರ ಪ್ರಾರಂಭ ಮಾಡುತ್ತಿದ್ದಾರೆ. ನಿಜವಾಗಿಯೂ ಅವರು ರಾಮಭಕ್ತರೇ ಆಗಿದ್ದರೆ, ದಿನನಿತ್ಯದಲ್ಲಿ ನಮ್ಮ ಪರಂಪರಾಗತ ಸಂಪ್ರದಾಯ ಆಚರಣೆಗೆ ಒತ್ತು ಕೊಟ್ಟರೆ ಹಿಂದು ಧರ್ಮ ಕಾಪಾಡಿದಂತೆ ಆಗುತ್ತದೆ ಎಂದರು.

ತಮ್ಮ ಬಾಲ್ಯದ ದಿನಗಳನ್ನು ಮೆಲುಕು ಹಾಕಿದ ಅವರು, ಹೊಳೆನರಸೀಪುರದಲ್ಲಿ ದೀಪದ ಸ್ತಂಭ ಕೈಯ್ಯಲ್ಲಿ ಇಟ್ಟುಕೊಂಡು ಪ್ರಮುಖ ಬೀದಿಗಳಲ್ಲಿ ಹೋಗ್ತಾ ಇದ್ದೆವು. ದೇವರ ಭಜನೆ ಮಾಡುತ್ತಿದ್ದೆವು. ಬೆಳಗ್ಗೆ ದೇವಸ್ಥಾನದಲ್ಲಿ ಸುಪ್ರಭಾತ ಕೇಳಿಸುತ್ತಿತ್ತು. ಘಂಟೆನಾದ ಮೊಳಗುತ್ತಿತ್ತು. ಆ ಗಂಟೆನಾದ ಕೇಳಿದರೆ ನಮ್ಮ ಮೈ ನವಿರೇಳುತ್ತಿತ್ತು. ಈ ಮಹಾನುಭಾವರಿಗೆ ಏನಾಗುತ್ತಿದೆಯೋ ಎಂದು ಗೊತ್ತಿಲ್ಲ ಎಂದರು. ಮತ್ತೊಂದು ಧರ್ಮ ಅಥವಾ ಜಾತಿಯನ್ನು ನಿಂದಿಸುವುದು ಅಥವಾ ಅವಹೇಳನ ಮಾಡುವುದು ಬೇಡ. ಅವರ ನಂಬಿಕೆಗಳಿಗೆ ನೋವುಂಟು ಮಾಡುವುದು ಬೇಡ. ನನ್ನ ಪ್ರಕಾರ ಶಾಲೆಗಳಲ್ಲಿ ಭಗವದ್ಗೀತೆ ಓದಿಸಿದರೆ ಪ್ರಯೋಜನ ಇಲ್ಲ. ಆದರೆ ಅದನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ನಕ್ಕರೆ ಅದೇ ಸ್ವರ್ಗ

ಗಿರಾಕಿ : "ಸೀಡ್‌ಲೆಸ್ ಪಪ್ಪಾಯಿ ಕೊಡಿ"
ಮಾಲೀಕ : "ಆಯ್ತು ಇನ್ನೇನು ಬೇಕು?"
ಗಿರಾಕಿ : "ಸೀಡ್‌ಲೆಸ್ ಕಡ್ಲೆಕಾಯಿ ಇದೆಯಾ!?"

ಮೈಸೂರು ಮಿತ್ರ

ಬುಧವಾರ, 6 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ದುಡುಕುವುದು ಅವಿವೇಕ. ಅದು ಆಪತ್ತಿಗೆ ದಾರಿ.
ಅವಿವೇಕ ಕತ್ತಲಿನಂತಾದರೆ ವಿವೇಕ ಬೆಳಕಿನಂತೆ – ಭಾರವಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಸೌಟು ಬಲ್ಲದೆ ಸಾರಿನ ರುಚಿ?

ನಿಮ್ಮ ಪತ್ರಗಳು

ಗಿಡ–ಮರ ಉಳಿಸಿ, ಪರಿಸರ ಸಂರಕ್ಷಿಸಿ

ಮಾನ್ಯರೆ,

ಕೆಲವು ಸ್ವಾರ್ಥಿಗಳು ತಮ್ಮ ಬಂಡವಾಳಕ್ಕಾಗಿ ಮತ್ತು ಸ್ವಾರ್ಥಕ್ಕಾಗಿ ಹಿಂದೆ ಬೆಳೆಸಿದ್ದ ಮರಗಿಡಗಳನ್ನು ನಾಶಮಾಡಿ ಆರೋಗ್ಯವಾಗಿದ್ದವರನ್ನು ಅನಾರೋಗ್ಯ ಪೀಡಿತರನ್ನಾಗಿ ಮಾಡುತ್ತಿದ್ದಾರೆ. ಹಿಂದೆ ಒಳ್ಳೆಯ ಗಾಳಿ ಸಿಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಶುದ್ಧ ಗಾಳಿ ಇಲ್ಲದಂತಾಗಿದೆ. ಬೇಸಿಗೆ ಬಂದರೆ ಮಾತ್ರ ನಮಗೆಲ್ಲರಿಗೂ ಗಿಡ –ಮರಗಳ ಜ್ಞಾನ ಉದಯಿಸುತ್ತದೆ. ಏಕೆಂದರೆ ಬೇಸಿಗೆ ಧಗೆ ಪ್ರಾರಂಭವಾದಾಗ ಮನುಷ್ಯರಿಗೆ ಗಿಡ–ಮರಗಳು ನೆನಪಾಗುತ್ತವೆ. ಅಲ್ಲಿಯವರೆಗೆ ಅವುಗಳ ಮಹತ್ವ ಗೊತ್ತಿದ್ದರೂ ಅದನ್ನು ನಾಶ ಮಾಡುತ್ತಾರೆ. ಮರಗಳಿಂದ ಶುದ್ಧ ಗಾಳಿ ಮಾತ್ರವಲ್ಲ ಹಲವು ರೀತಿಯ ಪ್ರಯೋಜನಗಳನ್ನು (ಔಷಧ, ಆಹಾರಕ್ಕಾಗಿ, ಹಣ್ಣುಗಳು) ಪಡೆಯುತ್ತೇವೆ. ಪ್ರತಿಯೊಬ್ಬರೂ ಯಾವುದಾದರೂ ಒಂದು ಗಿಡವನ್ನು ನೆಟ್ಟು ಅದನ್ನು ಕಾಪಾಡಿದರೆ ಅನೇಕರಿಗೆ ಅದು ಗೊತ್ತಿಲ್ಲದೆ ಉಪಯೋಗಕ್ಕೆ ಬರುತ್ತದೆ. ಪ್ರಕೃತಿ ಸಂಪತ್ತು ಇದ್ದರೆ ಮಾತ್ರ ನಮ್ಮ ಸಂಪತ್ತೆಂದು ಭಾವಿಸಬೇಕು. ಈಗಾಗಲೇ ಪರಿಸರ ನಾಶದಿಂದ ಹವಾಮಾನ ಸಾಕಷ್ಟು ಏರುಪೇರು ಆಗಿರುವುದನ್ನು ನೋಡುತ್ತಿದ್ದೇವೆ. ಮರಗಿಡಗಳ ನಾಶದಿಂದ ಸರಿಯಾಗಿ ಮಳೆಯಾಗದೆ ಬಹುತೇಕ ಭಾಗಗಳಲ್ಲಿ ಬರ ಆವರಿಸುತ್ತಿದೆ. ಮುಂದಿನ ದಿನಗಳಲ್ಲಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಬೇಕು. ಇತ್ತೀಚಿನ ದಿನಗಳಲ್ಲಿ ಮಾನವರು ವಿದ್ಯುತ್ ಉಪಕರಣಗಳ ಮೇಲೆ ಅವಲಂಬಿತವಾಗಿ ಫ್ಯಾನ್, ಎಸಿ, ಬಳಸುತ್ತಿದ್ದಾರೆ. ಇವುಗಳಿಂದ ಬರುವ ಗಾಳಿ ಹೊರಗೆ ಹೋಗದೆ ಒಂದೆ ಕಡೆ ಇರುತ್ತದೆ ಮತ್ತು ಅದೇ ಗಾಳಿಯನ್ನು ಮತ್ತೆ– ಮತ್ತೆ ಸೇವಿಸುವುದರಿಂದ "ಉಸಿರಾಟ ಸಮಸ್ಯೆ ಉಂಟಾಗುತ್ತಿದೆ. ಇದರ ಬದಲು ಮನೆಯ ಮುಂದೆ ಅಥವಾ ಖಾಲಿ ಸ್ಥಳಗಳಲ್ಲಿ ಸಸಿಗಳ ನೆಡಬೇಕು. ನಮಗೆ ಮತ್ತು ನಮ್ಮ ಮುಂದಿನ ಪೀಳಿಗೆಯ ಉತ್ತಮ ಆರೋಗ್ಯ ಸಂರಕ್ಷಣೆ ಮಾಡಬೇಕು. ಈಗಾಗಲೇ ನಾವೆಲ್ಲರೂ ನೋಡುತ್ತಿರುವಂತೆ ಪ್ರಕೃತಿಯ ವಿಕೋಪದಿಂದ ಆಗಿರುವ ಸಾವು–ನೋವುಗಳನ್ನು ನೋಡಿದ್ದೇವೆ. ಮುಂದಿನ ದಿನಗಳಲ್ಲಿ ಎಚ್ಚೆತ್ತುಕೊಂಡು ಪ್ರತಿಯೊಬ್ಬರೂ ಒಂದು ಗಿಡ ನೆಟ್ಟು, ನಮ್ಮ ಮಕ್ಕಳಂತೆ ಪೋಷಿಸಿ, ಪರಿಸರ ಸಂರಕ್ಷಣೆ ಮಾಡಿ ನಾವೆಲ್ಲರೂ ಆರೋಗ್ಯವಂತರಾಗೋಣ.

– ನಾಗೇಶ್ ಕೆ, ಮಾನಸಗಂಗೋತ್ರಿ

ಇಪಿಎಫ್ ಮೇಲಿನ ಬಡ್ಡಿದರ ಇಳಿಕೆ ಸೂಕ್ತವಲ್ಲ!!

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರ್ಕಾರವು ಇಪಿಎಫ್ ಬಡ್ಡಿ ದರವನ್ನು ಶೇ.8.5 ರಿಂದ ಶೇ 8.1 ಇಳಿಸಿರುವುದರಿಂದ ಆರು ಕೋಟಿ ಮಧ್ಯಮ ವರ್ಗದ ನೌಕರರಿಗೆ ತುಂಬಾ ನಷ್ಟವಾಗಿದೆ. ಈ ನೌಕರರು ಲಾಕ್‌ಡೌನ್‌ನಿಂದ ಕೆಲಸ ಕಳೆದುಕೊಂಡವರಾಗಿದ್ದು, ಬೆಲೆ ಏರಿಕೆಯಿಂದ ಹೈರಾಣಾಗಿ ಇತ್ತೀಚೆಗಷ್ಟೇ ತಮ್ಮ ವೃತ್ತಿ ಜೀವನ ಶೈಲಿಗೆ ಮರಳುತ್ತಿರುವಾಗಲೇ ಶಾಕ್ ನೀಡಿದೆ. ನೌಕರರು ತಮ್ಮ ಜೀವಿತಾವಧಿಯಲ್ಲಿ ಇದನ್ನೇ ನಂಬಿಕೊಂಡು ನಿವೃತ್ತಿ ನಂತರದ ಭವಿಷ್ಯದ ಬದುಕಿಗಾಗಿ ಉಳಿತಾಯವೆಂದು ನೆಚ್ಚಿಕೊಂಡಿರುತ್ತಾರೆ. ಇದರಿಂದ ನೌಕರರು ಇನ್ಯಾವುದೇ ಹೂಡಿಕೆ ಅಥವಾ ಉಳಿತಾಯ ಕೂಡ ಮಾಡಿರುವುದಿಲ್ಲ. ಸಾಮಾನ್ಯ ಮತ್ತು ಮಧ್ಯಮ ವರ್ಗದ ಸಂಬಳದಾರರಿಗೆ ಇದನ್ನು ಹೊರತುಪಡಿಸಿ ಬೇರೆ ಉಳಿತಾಯ ಮಾಡುವುದು ಕೂಡ ಇತ್ತೀಚಿನ ಬೆಲೆ ಏರಿಕೆಯ ದಿನಗಳಲ್ಲಿ ಸಾಧ್ಯವೇ ಆಗುವುದಿಲ್ಲ. ಆದ್ದರಿಂದ ರಿಸ್ಕ್ ಇಲ್ಲದ ಕಡ್ಡಾಯ ಉಳಿತಾಯ ವಿಧಾನವಾದ, ಇದು ಸರ್ಕಾರದ ಒಂದು ಅತಿದೊಡ್ಡ ಸಾಮಾಜಿಕ ಸುರಕ್ಷತೆಯ ಉಳಿತಾಯದ ಹೊಣೆಗಾರಿಕೆಯಾಗಿರುತ್ತದೆ. ಇಪಿಎಫ್‌ನ ಬಡ್ಡಿದರವನ್ನು ಇಷ್ಟೊಂದು ಇಳಿಸಿರುವುದು ನೌಕರರ ವೈಯಕ್ತಿಕ ಹಣಕಾಸಿನ ಹಾಗೂ ಸಾರ್ವಜನಿಕ ನಿಧಿಯ ದೃಷ್ಟಿಯಿಂದಲೂ ಸೂಕ್ತವಲ್ಲ. ಸರ್ಕಾರ ಲಾಭ ಮಾಡಿಕೊಳ್ಳುವ ಸಂಸ್ಥೆಯಾಗಬಾರದು. ಇಂತಹ ಸಣ್ಣ ಉಳಿತಾಯ ಮಧ್ಯಮ ವರ್ಗದ ನೌಕರರ ಹಣಕ್ಕೆ ಕೈ ಹಾಕಬಾರದು. ಇಂದಿನ ದುಬಾರಿ ದಿನಗಳಲ್ಲಿ ಸಾಮಾಜಿಕ ಭದ್ರತೆ ತುಂಬಾ ಅಗತ್ಯವಾಗಿರುತ್ತದೆ. ಅದರಲ್ಲೂ ಹಿರಿಯ ನಾಗರಿಕರಿಗೆ ಮತ್ತಷ್ಟು ಅನುಕೂಲವಾಗುತ್ತದೆ ಎಂದು ಸರ್ಕಾರ ಚಿಂತಿಸಬೇಕು.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಮಾದಹಳ್ಳಿ ಶಾಲೆಗೆ ಕೊಠಡಿ, ಆಟದ ಮೈದಾನ ಕಲ್ಪಿಸಿ

ಮಾನ್ಯರೆ,

ದೊಡ್ಡಮಾರೇಗೌಡನಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಮಾದಹಳ್ಳಿ ಗ್ರಾಮದಲ್ಲಿ ಇರುವ ಶಾಲೆಯಲ್ಲಿ ಕೊಠಡಿಗಳು ಆಟದ ಮೈದಾನ ಮತ್ತು ಕಟ್ಟಡ ಸೌಲಭ್ಯ ಇಲ್ಲವಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ತೊಂದರೆ ಆಗುತ್ತಿದೆ. ಎಲ್ಲಾ ತರಗತಿಯ ವಿದ್ಯಾರ್ಥಿಗಳನ್ನು ಒಂದೇ ಕೊಠಡಿಯಲ್ಲಿ ಸಂಬಾಳಿಸುವುದು ಶಿಕ್ಷಕರಿಗೆ ಕಷ್ಟವಾಗುತ್ತಿದೆ. ಅಲ್ಲದೆ ಮಕ್ಕಳಿಗೆ ಆಟದ ಮೈದಾನ ಇಲ್ಲದಿರುವುದರಿಂದ ಆಟವಾಡಲು ಸಮಸ್ಯೆ ಆಗುತ್ತಿದೆ. ಮತ್ತೊಂದೆಡೆ ಕಟ್ಟಡ ಇಲ್ಲದಿರುವುದರಿಂದ ಶಿಕ್ಷಕರಿಗೆ ಹಾಗೂ ಮಕ್ಕಳಿಗೆ ಅಡಚಣೆಯಾಗುತ್ತಿದೆ ಹಾಗಾಗಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಶಿಕ್ಷಣ ಸಚಿವರು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲು ಮನವಿ.

–ತ್ರಿವೇಣಿ ಎಂ ಎನ್, ಮಹಾರಾಣಿ ಕಾಲೇಜು, ಮೈಸೂರು

ಹೆಣ್ಣು ಸಂತತಿಗೆ ಮಾರಕ 'ಭ್ರೂಣ ಹತ್ಯೆ'


ಮಾನ್ಯರೆ,

ಭ್ರೂಣ ಹತ್ಯೆಯಿಂದಾಗಿ ಕಳೆದ 10 ವರ್ಷಗಳಲ್ಲಿ 10 ಕೋಟಿ ಹೆಣ್ಣು ಮಕ್ಕಳನ್ನು ಕಳೆದುಕೊಂಡಿದ್ದೇವೆ. "ಹೆಣ್ಣು ಭ್ರೂಣ ಹತ್ಯೆ ಎಂಬುದು ಬ್ರಹ್ಮಾಂಡದ ಪಾಪ" ಎಂದು ಲೇಖಕಿ ಡಾ.ವಿಜಯ ಲಕ್ಷ್ಮಿ ಬಾಳೆಕುಂದ್ರಿ ಇತ್ತೀಚೆಗೆ ಮೈಸೂರಿನ ಸಮಾರಂಭವೊಂದರಲ್ಲಿ ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಹೌದು, ವರ್ಷದಿಂದ ವರ್ಷಕ್ಕೆ ಸಮಾಜದಲ್ಲಿ ಹೆಣ್ಣು ಭ್ರೂಣ ಹತ್ಯೆ ಎಗ್ಗಿಲ್ಲದೇ ನಡೆಯುತ್ತಿರುವುದು ಅತ್ಯಂತ ಅಮಾನವೀಯವಾದ ಕೃತ್ಯವಾಗಿದ್ದು, ಅತ್ಯಂತ ಖಂಡನೀಯವಾದುದು. ನಮ್ಮ ಸಂವಿಧಾನದಲ್ಲಿ ಮಹಿಳೆಯರಿಗೂ ಸಹ ಪುರುಷರಷ್ಟೇ ಸಮಾನ ಅವಕಾಶ ನೀಡಿದ್ದರೂ, ಸಮಾಜದ ದೃಷ್ಟಿ ಬದಲಾಗಿಲ್ಲ. ಹೆಣ್ಣು ಒಂದು ಶಾಪ ಎಂಬ ಭಾವನೆ ನಮ್ಮ ಸಮಾಜದಿಂದ ಅಳಿಸಿಹೋಗಿಲ್ಲ. ಲಿಂಗ ತಾರತಮ್ಯ ನೀತಿ ಸಮಾಜದ ಹಲವಾರು ಸ್ತರಗಳಲ್ಲಿ ಕಂಡೂ ಕಾಣದಂತೆ ಅವಿತು ಕುಳಿತಿದೆ. ತಂದೆಯ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಸರಿಸಮಾನವಾದ ಹಕ್ಕು ಇದೆ. ಇದು ಅವರ ಜನ್ಮಸಿದ್ಧ ಹಕ್ಕಾಗಿದೆ ಎಂದು ಸರ್ವೋಚ್ಚ ನ್ಯಾಯಾಲಯ ಇತ್ತೀಚಿನ ತೀರ್ಪಿನಲ್ಲಿ ಹೇಳುವ ಮೂಲಕ ಮಹಿಳಾ ಸಬಲೀಕರಣಕ್ಕೆ ಪುಷ್ಟಿ ತುಂಬಿದ್ದರೂ ಸಹ, ಮಹಿಳೆಯರ ಸ್ಥಿತಿ ಗತಿಗಳು ಬದಲಾಗಿಲ್ಲ. ಹೆಣ್ಣಿನ ಮೇಲಿನ ದೌರ್ಜನ್ಯ ಎಲ್ಲೆ ಮೀರುತ್ತಿದೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಶೋಷಣೆಯ ಕೇಂದ್ರ ಬಿಂದುವಾಗಿದ್ದಾಳೆ.

ಕಳೆದ ಕೆಲ ವರ್ಷಗಳಲ್ಲಿ ಪುರುಷ ಮತ್ತು ಮಹಿಳೆಯರ ಅನುಪಾತ ಕಡಿಮೆಯಾಗುತ್ತಿದೆ. ಪಂಜಾಬ್, ಹರಿಯಾಣ ಮುಂತಾದ ರಾಜ್ಯಗಳಲ್ಲಿ ಮದುವೆಗೆ ಹುಡುಗಿಯರೇ ಸಿಗುತ್ತಿಲ್ಲ. ಇದು ಇತರ ಎಲ್ಲಾ ರಾಜ್ಯಗಳಿಗೂ ಹಬ್ಬುವ ದಿನ ದೂರವಿಲ್ಲ. ಇದಕ್ಕೆ ಮೊಟ್ಟ ಮೊದಲನೆಯದಾಗಿ ಹೆಣ್ಣು ಭ್ರೂಣ ಹತ್ಯೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಬೇಕು. ಹೆಣ್ಣು ಭ್ರೂಣ ಹತ್ಯೆ ಮಾಡುವಂತಹವರಿಗೆ ಅಥವಾ ಇದಕ್ಕೆ ಕುಮ್ಮಕ್ಕು ನೀಡುವವರಿಗೆ ಉಗ್ರ ಶಿಕ್ಷೆ ವಿಧಿಸಬೇಕು. ಇದಕ್ಕೆ ಸಹಕರಿಸುವ ವೈದ್ಯರ ಪರವಾನಗಿಯನ್ನು ರದ್ದುಗೊಳಿಸಬೇಕು. ಇಲ್ಲವಾದಲ್ಲಿ ಮಹಿಳಾ ಸಂತತಿ ಹಂತ ಹಂತವಾಗಿ ಕೊನೆಗೊಳ್ಳುವ ಅಪಾಯವಿದೆ.


–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.




ಕೆಬಿಜೆಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...


ಕರ್ನಾಟಕದಲ್ಲಿ ಅವಧಿಗೂ ಮುನ್ನ ವಿಧಾನಸಭಾ ಚುನಾವಣೆ: ಇದರ ಲಾಭ ಕಾಂಗ್ರೆಸ್‌ಗೋ ಇಲ್ಲ ಬಿಜೆಪಿಗೋ?




ಬಸವರಾಜ ಬೊಮ್ಮಾಯಿ




ಅಮಿತ್ ಶಾ



ಎಸ್.ಎಂ.ಕೃಷ್ಣ



ವಾಜಪೇಯಿ



ಡಿ.ಕೆ. ಶಿವಕುಮಾರ್

"ನನಗೆ ದೃಢ ವಿಶ್ವಾಸವಿದೆ, ಅದೇನೆಂದರೆ, ಚುನಾವಣೆಯನ್ನು ನಿಗದಿತ ಅವಧಿಗಿಂತ ಮುಂಚಿತವಾಗಿ ನಡೆಸಿದರೆ, ಕಾಂಗ್ರೆಸ್ ಪಕ್ಷಕ್ಕೆ ಅನುಕೂಲಕಾರಿಯಾಗುತ್ತದೆ (ಸಿದ್ದರಾಮಯ್ಯ ಅಥವಾ ಡಿ.ಕೆ.ಶಿವಕುಮಾರ್ ಇಬ್ಬರಲ್ಲಿ ಯಾರಾದರೂ ಮುಖ್ಯಮಂತ್ರಿಯಾಗಲಿ, ಆ ವಿಚಾರ ಬೇರೆ). ಕಾಂಗ್ರೆಸ್‌ನಲ್ಲಿದ್ದ ನಂಬರ್ ಒನ್ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರನ್ನು ಭಾರತದ ಅತ್ಯುತ್ತಮ ಮುಖ್ಯಮಂತ್ರಿ ಎಂದು ಪರಿಗಣಿಸಲಾಗಿತ್ತು. ಅತಿಯಾದ ಅತ್ಮವಿಶ್ವಾಸ ಮತ್ತು ನಂಬಿಕೆಯಿಂದ ಅವಧಿಪೂರ್ವ ಚುನಾವಣೆಗೆ ಮುಂದಾಗಿ ಕೃಷ್ಣ ಸೋಲುಂಡರು. ಇದು ಮೈತ್ರಿಗೆ, ನಂಬಿಕೆದ್ರೋಹ, ರಾಜಕೀಯ ಗೊಂದಲ ಸೇರಿದಂತೆ 2007–2008ರಲ್ಲಿ ರಾಷ್ಟ್ರಪತಿ ಆಡಳಿತಕ್ಕೂ ಕಾರಣವಾಯಿತು. ಇದಾದ ನಂತರ ಮೇ 2008ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂತು.

ಈಗ ಕರ್ನಾಟಕದಲ್ಲಿ ರಾಷ್ಟ್ರ ಮಟ್ಟದ ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷದ ಹಿರಿಯ ಹಾಗೂ ಪ್ರಭಾವಶಾಲಿ ನಾಯಕರು ಇದ್ದಾರೆ. ಪ್ರಾಯಶಃ ಅವರು ರಾಜ್ಯ ವಿಧಾನಸಭೆಗೆ ಅವಧಿಗೆ ಮುನ್ನ ಚುನಾವಣೆ ನಡೆಯಬಹುದು ಎಂದು ಭಾವಿಸಿದಂತಿದೆ ಈ ವಿಚಾರದಲ್ಲಿ ನನ್ನ ಕೆಲವು ಆಲೋಚನೆಗಳನ್ನು ಹೇಳಲೇಬೇಕೆಂಬ ನಿರ್ಧಾರಕ್ಕೆ ಬಂದೆ. ಏಕೆಂದರೆ, ಆಡಳಿತಾರೂಢ ಭಾರತೀಯ ಜನತಾ ಪಕ್ಷವು ಅವಧಿಗೆ ಮುನ್ನ ಚುನಾವಣೆ ನಡೆಯುವುದರಿಂದ ತಾನು ಜಯಭೇರಿ ಬಾರಿಸಬಹುದು ಎಂದು ಭಾವಿಸಿರುವಂತಿದೆ. ವಿರೋಧಾಭಾಸ ಎನ್ನುವ ರೀತಿಯಲ್ಲಿ ವಿರೋಧ ಪಕ್ಷವಾದ ಕಾಂಗ್ರೆಸ್, ಅಷ್ಟೇ ಏಕೆ ಜೆಡಿ(ಎಸ್) ಪಕ್ಷಗಳ ಆಶಾ ಭಾವನೆಯೂ ಇದೇ ಆಗಿದೆ.

ಆಡಳಿತಾರೂಢ ಭಾರತೀಯ ಜನತಾ ಪಕ್ಷವು ಮುಂದಿನ 2023ನೇ ವರ್ಷದ ಏಪ್ರಿಲ್– ಮೇ ತಿಂಗಳಲ್ಲಿ ನಡೆಯಬೇಕಾಗಿರುವ ರಾಜ್ಯ ವಿಧಾನಸಭೆ ಚುನಾವಣೆಯನ್ನು, ಈ ವರ್ಷದ ನವಂಬರ್‌ನಲ್ಲಿ ಅಂದರೆ ಅವಧಿಗಿಂತ ಮುಂಚಿತವಾಗಿ ನಡೆಸುವ ಸಾಧ್ಯತೆಯ ಬಗ್ಗೆ ನಮಗೆ ಮೊದಲು ಹೇಳಿದವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಲ್ಲದೇ ಬೇರ್‍ಯಾರೂ ಅಲ್ಲ. ಬಹುಶಃ, ಅವರು ಕತ್ತಲೆಯಲ್ಲಿ ಗುಂಡು ಹಾರಿಸುವ ಹಾಗೆ, ಇಂತಹುದೊಂದು ಆಲೋಚನೆ ಬಿಜೆಪಿಯಲ್ಲಿ ಇದೆ ಎಂದು ಹೇಳಿರಬಹುದು. ಇನ್ನೊಬ್ಬರ ಮನಸ್ಸಿನಲ್ಲಿರುವುದನ್ನು ಹೇಳುವ ಕಾಲಜ್ಞಾನಿಯಂತೆ!.

ಬರುವ ನವೆಂಬರ್‌ನಲ್ಲಿ ಗುಜರಾತ್ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಒಂದು ವೇಳೆ ಅದರೊಟ್ಟಿಗೆ ಕರ್ನಾಟಕದಲ್ಲೂ ಚುನಾವಣೆಗೆ ಹೋದರೆ ಹೇಗೆ ಎಂಬುದು ಬಿಜೆಪಿ ವರಿಷ್ಠ ಮಂಡಳಿಯ ಲೆಕ್ಕಾಚಾರ ಇರಬಹುದು ಎಂಬುದು ಡಿ.ಕೆ. ಶಿವಕುಮಾರ್‌ರ ಊಹೆಯೂ ಆಗಿರಬಹುದು.

ಒಳ್ಳೆಯದು, ಬಿಜೆಪಿ ಮತ್ತು ಕಾಂಗ್ರೆಸ್‌ನ ಇಬ್ಬರು ಹಿರಿಯ ನಾಯಕರ ಇತ್ತೀಚೆಗಿನ ರಾಜ್ಯ ಭೇಟಿಯನ್ನು ಅವಲೋಕಿಸಿದರೆ, ಇವರೇನು ಸಾಧಾರಣ ನಾಯಕರಲ್ಲ ಕಾಂಗ್ರೆಸ್‌ನ ರಾಹುಲ್ ಗಾಂಧಿ ಮತ್ತು ಬಿಜೆಪಿಯ ಅಮಿತ್ ಶಾ ಅವರು ಲಿಂಗಾಯಿತರ ಶ್ರೇಷ್ಠ ಮಠವಾದ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿರುವುದು, ಮುಂಬರುವ ರಾಜ್ಯ ವಿಧಾನಸಭೆಯ ಚುನಾವಣೆಯ ಮೇಲೆ ಕಣ್ಣಿಟ್ಟಿರುವ ಹಾಗೆ ತೋರುತ್ತದೆ. ಈ ' ಹೌದು'.....' ಇಲ್ಲ'..... 'ಹೌದು.'.... 'ಇಲ್ಲ'.... ಎಂಬ ಆಟದಲ್ಲಿ ಯಾರು ಯಾರನ್ನು ಮೂರ್ಖರನ್ನಾಗಿಸಲು ಹೊರಟಿದ್ದಾರೆ ಎಂದು ಯಾರೊಬ್ಬರಿಗಾದರೂ ಅಚ್ಚರಿಯೆನಿಸಬಹುದು. ನಿಜವಾಗಿಯೂ, ಬಿಜೆಪಿ ಶೀಘ್ರ ಚುನಾವಣೆಯ (ನವೆಂಬರ್) ಕೈಗವಸು ಎಸೆಯುತ್ತಿದ್ದರೆ, ಕಾಂಗ್ರೆಸ್ ಸಹ ಅದನ್ನು ಎತ್ತಿಕೊಳ್ಳಲು ಸಿದ್ಧವಾಗಿಯೇ ಇದೆ. ಈಗ ಈ ನೆರಳಿನ ಆಟ ಯಾವುದಾದರೂ ಒಂದರ ಬಗ್ಗೆ ಖಚಿತವಾಗಿ ನಾವು ತಿಳಿಯುವವರೆಗೂ ಮುಂದುವರೆಯಲಿ. ಆದ್ದರಿಂದ, ಕೆಲವು ತಿಂಗಳ ಕಾಲ ಕಾಯಿರಿ.

ಡಿ.ಕೆ.ಶಿವಕುಮಾರ್ ಅವರ ಅವಧಿಪೂರ್ವ ಚುನಾವಣೆಯ ಪ್ರಚೋದನಾಕಾರಿ ಆಲೋಚನೆಗೆ ಫೆಬ್ರವರಿ–ಮಾರ್ಚ್ 2022 ರಲ್ಲಿ ನಡೆದ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳ ಪೈಕಿ ನಾಲ್ಕರಲ್ಲಿ ಬಿಜೆಪಿ ಜಯಭೇರಿ ಬಾರಿಸಿರುವುದು ಒಂದು ಕಾರಣವಾಗಿರಬಹುದು. ಉತ್ತರದ ರಾಜ್ಯಗಳಲ್ಲಿನ ಅಭೂತಪೂರ್ವ ಜಯಭೇರಿಯಿಂದಾಗಿ ಕರ್ನಾಟಕದಲ್ಲೂ ಇಂತಹುದೇ ವಿಜಯವನ್ನು ಬಿಜೆಪಿ ಎದುರು ನೋಡುತ್ತಿರಬಹುದೆಂದು ಡಿ.ಕೆ.ಶಿವಕುಮಾರ್ ಯೋಚಿಸುತ್ತಾರೆ. ಆದರೆ, ಅಲ್ಲಿ ಯಾವುದೇ ಚುನಾವಣೆಗಳು ಅವಧಿಗಿಂತ ಮುಂಚೆ ನಡೆದಿರಲಿಲ್ಲ ಹಾಗೂ ಸಂವಿಧಾನದ ರೀತಿ ನೀತಿಗಳಿಗೆ ಅನುಗುಣವಾಗಿಯೇ ಅಂದರೆ ಐದು ವರ್ಷ ಪೂರ್ಣಗೊಂಡ ನಂತರವೇ ಚುನಾವಣೆ ನಡೆಯಿತು ಎಂಬುದನ್ನು ಅವರು ಮರೆತಂತಿದೆ. ಏನೇ ಆಗಲಿ, ಈ ಚುನಾವಣೆಗಳನ್ನು ಸಹ ಅವಧಿಗೆ ಮುಂಚಿತವಾಗಿ ನಡೆಸಿದ್ದರೂ, ಈಗ ನಿಚ್ಚಳ ಬಹುಮತ ಸಾಧಿಸಿದ ವಿಜಯಿಗಳನ್ನು ನೋಡಿದರೆ ಆಗಲೂ ಸಹ ವಿರೋಧ ಪಕ್ಷಗಳು ಸೋಲುತ್ತಿದ್ದವು ಎಂಬುದು ಸ್ಪಷ್ಟವಾಗಿದೆ.

ಅದಾಗ್ಯೂ, ಡಿ.ಕೆ.ಶಿವಕುಮಾರ್ ಬೀಸಿರುವ ಬಲೆಗೆ ಬಿಜೆಪಿ ಏಕೆ ಬೀಳಬೇಕು? ಇಲ್ಲಿ ಪ್ರಶ್ನೆಯೆಂದರೆ; ಒಂದು ವೇಳೆ ಅವಧಿಗೂ ಮುಂಚಿತವಾಗಿ ಚುನಾವಣೆ ನಡೆದರೆ ಯಾರಿಗೆ ಅನುಕೂಲವಾಗುತ್ತದೆ? ಬಿಜೆಪಿ, ತಾನು ಹೆಚ್ಚು ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದು, ಜನರಿಗೆ ಅವುಗಳನ್ನು ತೋರಿಸುವ ಮೂಲಕ ಮತದಾರರ ತನ್ನತ್ತ ಸೆಳೆಯಬಹುದೆಂದು ಭಾವಿಸಿರಬಹುದು. ನಿಜವಾ? ಹೇಳಿ– ಕೇಳಿ ಯಾವ ಅಭಿವೃದ್ಧಿ?

ಮೇಕೆದಾಟು ಕುಡಿಯುವ ನೀರಿನ ಯೋಜನೆಗಾಗಿ ಮಾಡಿದಂತಹ ಹೋರಾಟ ಸೇರಿದಂತೆ, ತಾನು ಹಲವಾರು ಜನಪರ ಪ್ರತಿಭಟನೆಗಳನ್ನು ನಡೆಸುವ ಮೂಲಕ ಹಾಗೂ ಜೊತೆ ಜೊತೆಗೆ ಆಗಿಂದಾಗ್ಗೆ ಬಿಜೆಪಿಯನ್ನು ಒಂದು ಕೋಮುವಾದಿ ಪಕ್ಷ ಎಂದು ಟೀಕಿಸುತ್ತಿರುವುದರಿಂದ, ಬೆಲೆ ಏರಿಕೆ, ಹಿಜಾಬ್, ಹಲಾಲ್ ಕಟ್ ಮಾಂಸ, ಹಿಂದೂ ಧಾರ್ಮಿಕ ಆಚರಣೆಗಳಲ್ಲಿ ಮುಸ್ಲಿಮರ ವ್ಯಾಪಾರ–ವಹಿವಾಟು ನಿರ್ಬಂಧ, ಮತ್ತೀಗ ಆಜಾನ್ ಮುಂತಾದವುಗಳ ವಿರುದ್ಧ ಹೋರಾಟ ನಡೆಸುತ್ತಿರುವುದರಿಂದ, ತನಗೆ ಚುನಾವಣೆಯಲ್ಲಿ ಲಾಭವಾಗಬಹುದು ಎಂದು ಕಾಂಗ್ರೆಸ್ ಯೋಚಿಸುತ್ತಿರಬಹುದು.

ನನಗೆ ದೃಢ ವಿಶ್ವಾಸವಿದೆ, ಅದೇನೆಂದರೆ, ಚುನಾವಣೆಯನ್ನು ನಿಗದಿತ ಅವಧಿಗಿಂತ ಮುಂಚಿತವಾಗಿ ನಡೆಸಿದರೆ, ಕಾಂಗ್ರೆಸ್ ಪಕ್ಷಕ್ಕೆ ಅನುಕೂಲಕಾರಿಯಾಗುತ್ತದೆ (ಸಿದ್ದರಾಮಯ್ಯ ಅಥವಾ ಡಿ.ಕೆ.ಶಿವಕುಮಾರ್ ಇಬ್ಬರಲ್ಲಿ ಯಾರಾದರೂ ಮುಖ್ಯಮಂತ್ರಿಯಾಗಲಿ, ಆ ವಿಚಾರ ಬೇರೆ). ಕಾಂಗ್ರೆಸ್‌ನಲ್ಲಿದ್ದ ನಂಬರ್ ಒನ್ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರನ್ನು ಭಾರತದ ಅತ್ಯುತ್ತಮ ಮುಖ್ಯಮಂತ್ರಿ ಎಂದು ಪರಿಗಣಿಸಲಾಗಿತ್ತು. ಅತಿಯಾದ ಅತ್ಮವಿಶ್ವಾಸ ಮತ್ತು ನಂಬಿಕೆಯಿಂದ ಅವಧಿಪೂರ್ವ ಚುನಾವಣೆಗೆ ಮುಂದಾಗಿ ಕೃಷ್ಣ ಸೋಲುಂಡರು. ಇದು ಮೈತ್ರಿಗೆ, ನಂಬಿಕೆದ್ರೋಹ, ರಾಜಕೀಯ ಗೊಂದಲ ಸೇರಿದಂತೆ 2007–2008ರಲ್ಲಿ ರಾಷ್ಟ್ರಪತಿ ಆಡಳಿತಕ್ಕೂ ಕಾರಣವಾಯಿತು. ಇದಾದ ನಂತರ ಮೇ 2008ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂತು.

ನಂತರ, 2013ರ ವಿಧಾನಸಭಾ ಚುನಾವಣೆಯಲ್ಲಿ, ಕಾಂಗ್ರೆಸ್ ಬಹುಮತ ಪಡೆದು ಸಿದ್ದರಾಮಯ್ಯ ಮುಖ್ಯಮಂತ್ರಿಗಳಾಗಿ ಐದು ವರ್ಷಗಳ ಸುಭದ್ರ ಅಧಿಕಾರ ನಡೆಸಿದರು. ಅವರು ದಿಟ್ಟ ಆಡಳಿತ ನಡೆಸಿದರೂ ಅವರ ತಾರತಮ್ಯ ಧೋರಣೆ, ಅಹಂ ಅವರನ್ನು ದುಸ್ಥಿತಿಗೆ ದೂಡಿತು. ಮತ್ತೆ ಕಾಂಗ್ರೆಸ್ ಅಧಿಕಾರದ ಗದ್ದುಗೆ ಹಿಡಿಯಲು ಕೇವಲ ಕೆಲವು ಸೀಟುಗಳ ಕೊರತೆ ಉಂಟಾಯಿತು. ಉಳಿದಿದ್ದೆಲ್ಲವೂ ಎಲ್ಲರಿಗೂ ಗೊತ್ತಿರುವ ಚರಿತ್ರೆಯ ಭಾಗವಾಗಿದೆ.

ಕಾಡುಗಳ್ಳ ವೀರಪ್ಪನ್‌ನಿಂದ ಡಾ. ರಾಜ ಕುಮಾರ್ ಅಪಹರಣ, ತೀವ್ರ ಬರ ಪರಿಸ್ಥಿತಿ, ಕಾವೇರಿ ನೀರಿನ ವ್ಯಾಜ್ಯ ಮುಂತಾದ ಹಲವಾರು ಕಂಟಕಗಳ ನಡುವೆಯೂ ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ, ಓರ್ವ ಉತ್ತಮ ಆಡಳಿತಗಾರರಾಗಿ, ಬೆಂಗಳೂರು ಮಹಾನಗರವನ್ನು ದೇಶದಲ್ಲೇ "ಎಲೆಕ್ಟ್ರಾನಿಕ್ ಸಿಟಿ"ಯನ್ನಾಗಿ ಮಾಡಿದರು. ಆ ಮೂಲಕ ಬೆಂಗಳೂರಿಗೆ ದೇಶದ ಸಿಲಿಕಾನ್ ವ್ಯಾಲಿ ಎಂಬ ಖ್ಯಾತಿಯನ್ನು ತಂದುಕೊಟ್ಟರು.

ಅವರು, ಎಲ್ಲರನ್ನೂ ಜೊತೆಯಲ್ಲಿ ಕರೆ ದೊಯ್ದರು. ಆದರೆ **ಕೆಲ ಆಪ್ತ ಸಲಹೆಗಾರರು ಕೃಷ್ಣರ ತಲೆಯಲ್ಲಿ ಅತಿಯಾದ ಆತ್ಮವಿಶ್ವಾಸದ ಭರವಸೆ ತುಂಬಿ, ಅವಧಿಗಿಂತ ಮುಂಚಿತವಾಗಿ ಚುನಾವಣೆಗೆ ಹೋಗುವಂತೆ ಮಾಡಿದರು. ಆ ಒಂದು ತಪ್ಪಿನಿಂದ ಅವರು ಸೋತರು.**

ನನಗೆ ಗೊತ್ತಿರುವಂತೆ ಅವಧಿಗೆ ಮುಂಚೆ ಚುನಾವಣೆಗಳನ್ನು, ತಮ್ಮ ಅಧಿಕಾರದ ಜನಪ್ರಿಯತೆ ಹಾಗೂ ಪ್ರತಿಷ್ಠೆಯ ತುತ್ತ ತುದಿಯ ಕಾಲದಲ್ಲಿ ನಡೆಸಿ ಕೈಸುಟ್ಟುಕೊಂಡವರು ಇನ್ನೂ ಅನೇಕರಿದ್ದಾರೆ.

ಆದ್ದರಿಂದ, ಈ ಎಲ್ಲಾ ವಿಚಾರಗಳನ್ನು ಪರಿಗಣಿಸಿದರೆ, ಭಾರತೀಯ ಜನತಾ ಪಕ್ಷವು ಬರುವ ನವೆಂಬರ್ ತಿಂಗಳಲ್ಲಿ ಅಥವಾ ಬೇರೆ ಯಾವುದೇ ತಿಂಗಳಲ್ಲಿ ಅವಧಿ ಪೂರ್ವ ಚುನಾವಣೆಗೆ ಹೋಗುವುದು ಒಳ್ಳೆಯದ್ದಲ್ಲ. ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ, ಕಳೆದ ಎಂಟು ತಿಂಗಳಲ್ಲಿ ಬಿಜೆಪಿಯ ಸಾಧನೆ; ಕೇವಲ ಮತಾಂತರ, ಹಿಜಾಬ್, ಕೇಸರಿ ಧ್ವಜದ ವಿವಾದ, ಹಾಗೂ ತೀರಾ ಇತ್ತೀಚಿನ ಹಲಾಲ್ ಮಾಂಸ ಮತ್ತೀಗ ಆಜಾನ್ ಹೀಗೆ ವಿವಾದಗಳ ಸರಮಾಲೆಯೇ ಇದೆ. ಕಾಂಗ್ರೆಸ್ ನವರು ಇಂತಹ ವಿವಾದಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವುದರಲ್ಲಿ ನಿಸ್ಸೀಮರಾಗಿದ್ದಾರೆ. ಇದರ ಜೊತೆಗೆ ಏರುತ್ತಿರುವ ಪೆಟ್ರೋಲ್, ಡೀಸೆಲ್ ಬೆಲೆ ಹಾಗೂ ನಿರಂತರವಾಗಿ ಕಾಡುತ್ತಿರುವ ಕೊರೊನಾ ಸೋಂಕು ಬಿಜೆಪಿಗೆ ಅಡ್ಡಗಾಲಾಗಬಹುದು.

ಕಾಂಗ್ರೆಸ್ ಬಗ್ಗೆ ಹೇಳುವುದಾದರೆ, ಪ್ರಸ್ತುತ ದೇಶದಲ್ಲಿ ವಿಶೇಷವಾಗಿ ದಕ್ಷಿಣದಲ್ಲಿ ಕರ್ನಾಟಕವನ್ನು ಹೊರತುಪಡಿಸಿ ಪುನಃ ಅಧಿಕಾರಕ್ಕೆ ಬರಲು ಯಾವುದೇ ರಾಜ್ಯವಿಲ್ಲ. ಆದರೆ, ಇದು ಚುನಾವಣೆ ಘೋಷಣೆಯಾದಾಗ, ಬಿಜೆಪಿ ಯಾವ ರೀತಿ ರಾಜಕೀಯ ದಾಳವನ್ನು ಉರುಳಿಸುತ್ತದೆ ಎಂಬುದರ ಮೇಲೆ ಅವಲಂಬಿತವಾಗಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರನ್ನು ಮುಂದಿಟ್ಟುಕೊಂಡು ಈಗ ಇರುವ ಹೆಚ್ಚು ಕಡಿಮೆ 69 ಸೀಟುಗಳಿಂದ ಅಧಿಕಾರ ಹಿಡಿಯಲು ಬೇಕಾದ 113 ಸೀಟು ಗಳಿಗೆ ಜಿಗಿಯಲು (ಹೆಚ್ಚಿಸಿಕೊಳ್ಳಲು) ಸಾಧ್ಯವಾಗುವುದೇ? ಸಮಯವೊಂದೇ ಇದನ್ನು ನಿರ್ಧರಿಸಬಲ್ಲದು. ಆದರೆ ಬಿಜೆಪಿಗೆ ನವಂಬರ್ ಸೂಕ್ತ ಸಮಯವಲ್ಲ.

ಮಾಜಿ ಪ್ರಧಾನಮಂತ್ರಿ ದಿವಂಗತ ಅಟಲ ಬಿಹಾರಿ ವಾಜಪೇಯಿಯವರಿಗೆ 2004ರಲ್ಲಿ ಅವಧಿಗೆ ಮುನ್ನ ಲೋಕಸಭೆಗೆ ಚುನಾವಣೆ ನಡೆಸುವ ಮನಸ್ಸಿರಲಿಲ್ಲ. ಏಕೆಂದರೆ ಸೋಲಬಹುದೆಂಬ ಭಯ ಅವರನ್ನು ಕಾಡುತ್ತಿತ್ತು. ಆದರೆ, ಅತಿಯಾದ ಆತ್ಮವಿಶ್ವಾಸದಿಂದ ಬೀಗುತ್ತಿದ್ದ ಭಾರತೀಯ ಜನತಾ ಪಕ್ಷ ಅವಧಿಗೆ ಮುಂಚಿತವಾಗಿಯೇ ಚುನಾವಣೆಗೆ ಹೋಗಲು ನಿರ್ಧರಿಸಿತ್ತು. ಇದನ್ನು ರಾಜ್ಯ ಬಿಜೆಪಿ ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು.

ವಾಜಪೇಯಿಯವರ ಅಡಿಯಲ್ಲಿದ್ದ ಅಂದಿನ ಬಿಜೆಪಿ ಕಾರ್ಯಕರ್ತರಲ್ಲಿ ಸಮನ್ವಯತೆ ಇರಲಿಲ್ಲ ಎಂಬುದು ಬಿಜೆಪಿಯ ಸೋಲಿಗೆ ಒಂದು ಕಾರಣವಾಗಿರಲೂಬಹುದು. ಕರ್ನಾಟಕ ಬಿಜೆಪಿಯಲ್ಲಿ ಅಂತಹುದೇ ಸಮನ್ವಯತೆಯನ್ನು ಈಗ ನಾವು ಪತ್ತೆ ಮಾಡಬಹುದೇ? ಬಿಜೆಪಿ ಆತ್ಮ ಶೋಧನೆ ಮಾಡಿಕೊಳ್ಳಲಿ.

2004ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಸೋಲಿಗೆ ಎರಡು ಪ್ರಮುಖ ಕಾರಣಗಳನ್ನು ನೀಡಲಾಗುತ್ತದೆ.

ಮೊದಲನೆಯದಾಗಿ **"ಭಾರತ ಪ್ರಕಾಶಿಸುತ್ತಿದೆ"** (India Shining) ಎಂಬ ಘೋಷಣೆ ಬಿಜೆಪಿಗೆ ತಿರುಗುಬಾಣವಾಯಿತು. ಏಕೆಂದರೆ ವಿರೋಧ ಪಕ್ಷಗಳು ದೇಶದಲ್ಲಿ ಏನೂ ಪ್ರಕಾಶಿಸುತ್ತಿಲ್ಲ, ಬರೀ ಅಂಧಕಾರ ಎಂದು ಒತ್ತಿ... ಒತ್ತಿ... ಒತ್ತಿ... ಹೇಳುತ್ತಾ ಹೋದವು. **2004ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಸೋಲಿಗೆ ಎರಡನೆಯ ಪ್ರಮುಖ ಕಾರಣವೆಂದರೆ ಮುಂಚಿತವಾಗಿ ಚುನಾವಣೆ ನಡೆಸಬೇಕೆಂಬ ನಿರ್ಧಾರ.** ಅಂದಿನ ಪ್ರಧಾನಿ ಅಟಲ ಬಿಹಾರಿ ವಾಜಪೇಯಿಯವರು ಶೀಘ್ರ ಚುನಾವಣೆಗೆ ಒಲವು ಹೊಂದಿರಲಿಲ್ಲ.

ಆದರೆ ಪ್ರಧಾನಮಂತ್ರಿ ಸ್ಥಾನಕ್ಕೆ ಕಾದು ಕುಳಿತಿದ್ದ ಪ್ರಧಾನಿ ಅಭ್ಯರ್ಥಿ ಲಾಲ್‌ಕೃಷ್ಣ ಅದ್ವಾನಿ ಸೇರಿದಂತೆ, ಇತರರು "ಭಾರತ ಪ್ರಕಾಶಿಸುತ್ತಿದೆ" ಎಂಬ ಹುರುಳಿಲ್ಲದ ಮತ್ತು ಆಡಂಬರದ ಘೋಷಣೆ ಮಾಡಿ ಶೀಘ್ರ ಚುನಾವಣೆ ನಡೆಸಲು ಒತ್ತಾಯ ಮಾಡಿದ್ದರಿಂದ ಆಗಲೂ ಅವಧಿಗೆ ಮುಂಚಿತವಾಗಿ ಚುನಾವಣೆ ನಡೆಯಿತು. ನಮ್ಮೆಲ್ಲರಿಗೂ ತಿಳಿದ ಹಾಗೆ ಅಟಲ್ ಬಿಹಾರಿ ವಾಜಪೇಯಿಯವರು ಸೌಮ್ಯ ಸ್ವಭಾವದ ಪ್ರಧಾನಮಂತ್ರಿಯಾಗಿದ್ದರು ಮತ್ತು ಯಾವಾಗಲೂ ಹೊಂದಾಣಿಕೆಯಲ್ಲಿ (ಇದನ್ನು ಅವರು ಜಾಣತನದಿಂದ 'ಸಮ್ಮಿಶ್ರ ಸರ್ಕಾರದ ಅನಿವಾರ್ಯತೆ' ಎಂದು ಕರೆಯುತ್ತಿದ್ದರು.) ವಿಶ್ವಾಸ ಇಟ್ಟಿದ್ದರು.

ಆದ್ದರಿಂದ, ವಾಜಪೇಯಿ ಮತ್ತು ಕೃಷ್ಣ ಅವರ ಹಾಗೆ ಕರ್ನಾಟಕದಲ್ಲಿ ಅವಧಿಗೆ ಮುಂಚಿತವಾಗಿ ಚುನಾವಣೆ ನಡೆಸಲು ಬಿಜೆಪಿ ಅವಸರಪಡಬಾರದು. ಅರಿವಿರಲಿ!, ಹಳೆಯ ತಪ್ಪುಗಳಿಂದ ಪಾಠ ಕಲಿಯದವರು, ಸೋಲನ್ನು ಅನುಭವಿಸುವುದು ಅನಿವಾರ್ಯ.

email: voice @ starofmysore.com

ಸಂಗೀತ ನಿರ್ದೇಶಕ ರಿಕಿ ಕೇಜ್‌ಗೆ ಎರಡನೇ ಬಾರಿ ಪ್ರತಿಷ್ಠಿತ ಗ್ರ್ಯಾಮಿ ಪ್ರಶಸ್ತಿ

ಲಾಸ್ ಎಂಜೆಲೀಸ್, ಏ. 5– ಬೆಂಗಳೂರು ಮೂಲದ ಸಂಗೀತ ನಿರ್ದೇಶಕ ರಿಕಿ ಕೇಜ್ ಅವರು 2022ನೇ ಸಾಲಿನ ಪ್ರತಿಷ್ಠಿತ ಅಂತಾರಾಷ್ಟ್ರೀಯ ಪ್ರಶಸ್ತಿಯಾದ ಗ್ರ್ಯಾಮಿಯನ್ನು ಗೆದ್ದುಕೊಂಡಿದ್ದಾರೆ. ಇದು ಅವರ ಎರಡನೇ ಗೆಲುವಾಗಿದೆ. ಈ ಹಿಂದೆ 'ವಿಂಡ್ಸ್ ಆಫ್ ಸಂಸಾರ' ಎನ್ನುವ ಆಲ್ಬಂಗೆ ಗ್ರ್ಯಾಮಿ ಗೆದ್ದುಕೊಂಡಿದ್ದರು.

ರಿಕಿ ಕೇಜ್ ಅವರ 'ಡಿವೈನ್ ಟೈಡ್ಸ್' ಎನ್ನುವ ಸಂಗೀತ ಆಲ್ಬಂಗೆ ಈ ಬಾರಿ ಪ್ರಶಸ್ತಿ ದೊರಕಿದೆ. ಈ ಪ್ರಶಸ್ತಿಯನ್ನು ರಿಕಿ ಕೇಜ್ ಅವರು ಸಂಗೀತಗಾರ ಸ್ಟುವರ್ಟ್ ಕೋಪ್ ಲೆಂಡ್ ಅವರೊಂದಿಗೆ ಹಂಚಿಕೊಳ್ಳಲಿದ್ದಾರೆ.

ಭಾರತೀಯ ಮೂಲದ ಗಾಯಕಿ ಫಾಲು ಶಾ ಅವರು ತಮ್ಮ 'ಎ ಕಲರ್ ಫುಲ್ ವರ್ಲ್ಡ್' ಸಂಗೀತ ಆಲ್ಬಂಗೆ ಗ್ರ್ಯಾಮಿ ಪಡೆದಿದ್ದಾರೆ. ಇದರೊಂದಿಗೆ ಈ ವರ್ಷ ಇಬ್ಬರು ಭಾರತೀಯರು ಗ್ರ್ಯಾಮಿ ಪ್ರಶಸ್ತಿ ಗೆದ್ದಂತಾಗಿದೆ.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನಿರ್ವಹಿಸಿದ ಹುದ್ದೆಗಳಿಗೆ ಗೌರವ ತಂದ ಬಾಬೂಜಿ

ಬಾಬು ಜಗಜೀವನರಾಂ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯ

ಮೈಸೂರು, ಏ.5(ಆರ್‌ಕೆಬಿ)– ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಂ ಅವರು ತಾವು ನಿರ್ವಹಿಸಿದ ಹುದ್ದೆಗಳಿಗೆ ಅಪಾರ ಗೌರವ ತಂದ ರಾಜಕೀಯ ಮುತ್ಸದ್ದಿ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಡಾ.ಬಾಬು ಜಗಜೀವನ ರಾಂ ಅವರ 115ನೇ ಜಯಂತಿಯ ವೇದಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಬಾಬು ಜಗಜೀವನರಾಂ ಅವರು ದೇಶಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅಸ್ಪೃಶ್ಯತೆ ನಿವಾರಣೆಗಾಗಿ ಹೋರಾಡಿದ ಮಹಾನಾಯಕ. ಕಾರ್ಮಿಕ ಸಚಿವರಾಗಿ ಮಾಲೀಕರು ಮತ್ತು ಕಾರ್ಮಿಕರ ಮಧ್ಯೆ ವಿಶ್ವಾಸ ತುಂಬುವ ಕೆಲಸ ಮಾಡಿದವರು. ಕಾರ್ಮಿಕರ ಕಲ್ಯಾಣಕ್ಕೆ ಹಲವಾರು ಕಾಯಿದೆಗಳನ್ನು ತಂದು, ಕಾರ್ಮಿಕ ವರ್ಗದ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿದವರು ಎಂದು ಸ್ಮರಿಸಿದರು.

1971ರಲ್ಲಿ ಭಾರತ–ಪಾಕಿಸ್ತಾನ ಯುದ್ಧ ಸಂದರ್ಭದಲ್ಲಿ ರಕ್ಷಣಾ ಸಚಿವರಾಗಿ ಗುರುತರ



ಸೇವೆ ಸಲ್ಲಿಸಿ, ವಿಶ್ವದ ಗಮನ ಸೆಳೆದರು. ರೈತರು, ಯೋಧರು, ಕಾರ್ಮಿಕರಿಗೆ ಅವರು ನೀಡಿದ ಕಾರ್ಯಕ್ರಮಗಳು ಇಂದಿಗೂ ಜನಪ್ರಿಯವಾಗಿವೆ. ಸ್ವಂತ ಶಕ್ತಿಯ ಮೇಲೆ ನಿಂತು ದೇಶಕ್ಕಾಗಿ ಎಲ್ಲರೂ ಪ್ರಾಮಾಣಿಕ ಸೇವೆ ಸಲ್ಲಿಸಬೇಕೆಂಬ ಅವರ ಕಳಕಳಿಯ ಪ್ರಯತ್ನ ಇಂದು ನಮ್ಮೆಲ್ಲರಿಗೂ ಮಾದರಿಯಾಗಿದೆ ಎಂದು ಹೇಳಿದರು.

ಈ ನಿಟ್ಟಿನಲ್ಲಿ ನಾವೆಲ್ಲರೂ ಅವರ ಆದರ್ಶ, ತತ್ವ, ಸಿದ್ಧಾಂತಗಳನ್ನು ಅಳವಡಿಸಿಕೊಂಡು, ಪಕ್ಷಭೇದ ತೊರೆದು ಒಗ್ಗಟ್ಟಿನಿಂದ ಪ್ರಾಮಾಣಿಕವಾಗಿ ಸಾಮಾಜಿಕ ಕಾರ್ಯ, ದೇಶದ ಅಭಿವೃದ್ಧಿಗೆ ಶ್ರಮಿಸಿದರೆ ಅವರು ನೀಡಿದ ಕೊಡುಗೆಯನ್ನು ಗೌರವಿಸಿದಂತಾಗುತ್ತದೆ ಎಂದು ತಿಳಿಸಿದರು.

ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಪ್ರಾಧ್ಯಾಪಕ ಕೆ.ಆರ್.ದುರ್ಗಾದಾಸ್ ಮುಖ್ಯ ಭಾಷಣ ಮಾಡಿದರು. ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೇಯರ್ ಸುನಂದಾ ಪಾಲನೇತ್ರ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷ ಎನ್.ವಿ.ಫಣೀಶ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್‌ಗೌಡ, ಜಿಪಂ ಸಿಇಓ ಪೂರ್ಣಿಮಾ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಬಿ.ಮಾಲತಿ ಇನ್ನಿತರರು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಗಾಯಕ ರಮೇಶ್ ತಾಯೂರು ಮತ್ತು ತಂಡದಿಂದ ಗೀತ ಗಾಯನ ಕಾರ್ಯಕ್ರಮ ನಡೆಯಿತು.

> ಏಪ್ರಿಲ್ ತಿಂಗಳು ದಲಿತರಿಗೆ ಉತ್ಸಾಹ, ಅಭಿಮಾನ ಉಕ್ಕಿಸುವ ತಿಂಗಳು. ಬಾಬು ಜಗಜೀವನರಾಂ ಅವರು, ದಲಿತರು ರಾಜಕಾರಣದಲ್ಲಿ ಮತ್ತು ವಿವಿಧ ಜವಾಬ್ದಾರಿಗಳನ್ನು ಹೇಗೆ ನಿರ್ವಹಿಸಬಲ್ಲರು ಎಂಬುದಕ್ಕೆ ದೊಡ್ಡ ಉದಾಹರಣೆಯಾಗಿದ್ದಾರೆ. ಜಯಂತಿ ಸಂದರ್ಭದಲ್ಲಿ ಅವರ ಸಾಧನೆ, ಅವರ ಬದುಕನ್ನು ನಾವು ಮೆಲಕು ಹಾಕಿಕೊಳ್ಳಬೇಕು. ಅದುವೇ ಅವರಿಗೆ ನಾವು ನೀಡುವ ಗೌರವ.
>
> **ಕೆ.ಆರ್.ದುರ್ಗಾದಾಸ್,**
> ನಿವೃತ್ತ ಪ್ರಾಧ್ಯಾಪಕ

ಹಸಿರು ಕ್ರಾಂತಿಯ ಹರಿಕಾರನ ಜಯಂತಿ ಆಚರಣೆ
ಪ್ರತಿಮೆಗೆ ಮಾಲಾರ್ಪಣೆ, ರಥದ ಮೆರವಣಿಗೆಗೆ ಚಾಲನೆ

ಮೈಸೂರು, ಏ.5(ಆರ್‌ಕೆಬಿ)– ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ ಹಾಗೂ ಭಾರತದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್‌ರಾಮ್ ಅವರ 115ನೇ ಜನ್ಮಜಯಂತಿ ಅಂಗವಾಗಿ ಮೈಸೂರು ಜಿಲ್ಲಾಡಳಿತದ ವತಿಯಿಂದ ಬಾಬು ಜಗಜೀವನರಾಂ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಅವರನ್ನು ಗೌರವಿಸಲಾಯಿತು.

ಮೈಸೂರು ರೈಲ್ವೆ ನಿಲ್ದಾಣದ ಬಳಿಯ ಬಾಬು ಜಗಜೀವನರಾಂ ಅವರ ಪ್ರತಿಮೆಗೆ ಮೇಯರ್ ಸುನಂದಾ ಪಾಲನೇತ್ರ ಮಾಲಾರ್ಪಣೆ ಮಾಡಿದರು. ಬಳಿಕ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರು ಬಾಬು ಜಗಜೀವನರಾಂ ಅವರ ಭಾವಚಿತ್ರ ಇರಿಸಲಾಗಿದ್ದ ಅಲಂಕೃತ ರಥದ ಮೆರವಣಿಗೆಗೆ ಚಾಲನೆ ನೀಡಿದರು.

ಕಲಾಮಂದಿರದವರೆಗೆ ನಡೆದ ಮೆರವಣಿಗೆಯಲ್ಲಿ ಗಾರುಡಿ ಗೊಂಬೆ, ಪೂಜಾ ಕುಣಿತ, ಡೊಳ್ಳು ಕುಣಿತ, ಕಂಸಾಳೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳ ನೃತ್ಯ ಮೆರವಣಿಗೆಗೆ ಕಳೆ ಕಟ್ಟಿದವು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಕರ್ನಾಟಕ ರಾಜ್ಯ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಎಂ. ಎನ್.ನಂದೀಶ್ ಹಂಚೆ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ಮಾಜಿ ಮೇಯರ್ ಪುರುಷೋತ್ತಮ್, ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಚೇತನ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಬಿ. ಮಾಲತಿ ಇನ್ನಿತರರು ಉಪಸ್ಥಿತರಿದ್ದರು.



ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕೆ ಸ್ವಯಂ ಉದ್ಯೋಗ ಸ್ವ–ಸಹಾಯ ಸಂಘದ ವತಿಯಿಂದ ಡಾ. ಬಾಬೂಜಿ ಜಯಂತಿ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಚಿತ್ರದಲ್ಲಿ ಸಂಘದ ಗೌರವಾಧ್ಯಕ್ಷ ಹೆಚ್.ಸಿ.ಶಿವಣ್ಣ, ಅಧ್ಯಕ್ಷ ಕುಮಾರ, ಉಪಾಧ್ಯಕ್ಷ ಕಿಶೋರ್ ಕುಮಾರ್, ಕಾರ್ಯದರ್ಶಿ ಬಿ.ಪ್ರಕಾಶ್, ಸಹಕಾರ್ಯದರ್ಶಿ ಸಿದ್ದರಾಜು, ಖಜಾಂಚಿ ರಾಮಚಂದ್ರು, ಸಂಚಾಲಕ ರವೀಂದ್ರ ಇತರರಿದ್ದಾರೆ.



ಹಸಿರು ಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನ ರಾಂ ಜಯಂತಿ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಚಿತ್ರದಲ್ಲಿ ಟಿ.ಎನ್.ಎನ್ ಆದರ್ಶ ವಿದ್ಯಾರ್ಥಿ ನಿಲಯದ ಕಾರ್ಯದರ್ಶಿ ಎಂ. ಪಾಟೀಲ್, ಕಾಂಗ್ರೆಸ್ ಮುಖಂಡ ಸುಭಾಷ್, ಹೆಚ್.ಎಂ.ಅಂಕಯ್ಯ, ನರಸಿಂಹ, ಅನಿಲ್ ಕುಮಾರ್, ರವಿ, ಇತರರನ್ನು ಕಾಣಬಹುದು



ಡಾ. ಬಾಬು ಜಗಜೀವನ ರಾಂ ಜಯಂತಿ ಅಂಗವಾಗಿ ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಜಾತಿ ವಿಭಾಗದ ವತಿಯಿಂದ ಮೈಸೂರಿನ ರೈಲ್ವೆ ನಿಲ್ದಾಣ ವೃತ್ತದಲ್ಲಿರುವ ಬಾಬೂಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಚಿತ್ರದಲ್ಲಿ ಮುಖಂಡರಾದ ಕೆ.ರಮೇಶ್, ಹೆಚ್.ಎಂ. ಅಂಕಯ್ಯ ರವಿ ಇದ್ದಾರೆ.



ಡಾ. ಬಾಬು ಜಗಜೀವನ ರಾಂ ಜಯಂತಿ ಅಂಗವಾಗಿ ಮೈಸೂರಿನ ರೈಲ್ವೆ ನಿಲ್ದಾಣ ವೃತ್ತದಲ್ಲಿರುವ ಬಾಬೂಜಿ ಪ್ರತಿಮೆಗೆ ಡಾ. ಬಿ.ಆರ್. ಅಂಬೇಡ್ಕರ್ ಸ್ವ–ಸಹಾಯ ಸಂಘದ ವತಿಯಿಂದ ಮಾಲಾರ್ಪಣೆ ಮಾಡಲಾಯಿತು. ಚಿತ್ರದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ಮಾಣಿಕ್ಯಂ, ಉಪಾಧ್ಯಕ್ಷ ಸಿ.ಶ್ರೀನಿವಾಸ್, ಖಜಾಂಚಿ ಕೆ.ಸುರೇಶ್ ಹಾಜರಿದ್ದರು.




ಡಾ. ಬಾಬು ಜಗಜೀವನ ರಾಂ ಜಯಂತಿ ಅಂಗವಾಗಿ ಮೈಸೂರಿನ ರೈಲ್ವೆ ನಿಲ್ದಾಣ ವೃತ್ತದಲ್ಲಿರುವ ಬಾಬೂಜಿ ಪ್ರತಿಮೆಗೆ ಡಾ. ಬಾಬು ಜಗಜೀವನ್ ರಾಂ ವಿಚಾರ ವೇದಿಕೆ ವತಿಯಿಂದ ಮಾಲಾರ್ಪಣೆ ಮಾಡಲಾಯಿತು. ಚಿತ್ರದಲ್ಲಿ ಮಣಿಕಂಠ ಹೆಚ್.ಶಿವಕುಮಾರ್ ಸಿ. ಹಾಗೂ ಇತರರಿದ್ದಾರೆ.



ಬಾಬು ಜಗಜೀವನರಾಂ ಅವರ ಭಾವಚಿತ್ರ ಇರಿಸಲಾಗಿದ್ದ ಅಲಂಕೃತ ರಥದ ಮೆರವಣಿಗೆಗೆ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು. ನಂತರ ಕಲಾಮಂದಿರದವರೆಗೆ ನಡೆದ ಮೆರವಣಿಗೆಯಲ್ಲಿ ಗಾರುಡಿ ಗೊಂಬೆ, ಪೂಜಾ ಕುಣಿತ, ಡೊಳ್ಳು ಕುಣಿತ, ಕಂಸಾಳೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳ ನೃತ್ಯ ಮೆರವಣಿಗೆಗೆ ಕಳೆ ಕಟ್ಟಿದವು.



ಬಾಬು ಜಗಜೀವನ ರಾಂ ಜಯಂತಿ ಅಂಗವಾಗಿ ಮೈಸೂರಿನ ರೈಲ್ವೆ ನಿಲ್ದಾಣದ ಬಳಿ ಇರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ಎಸ್.ಸೋಮಣ್ಣ, ಉಪಾಧ್ಯಕ್ಷ ಯೋಗೇಶ್, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಿ.ರೇವಣ್ಣ, ಎಸ್.ಕೃಷ್ಣಕುಮಾರ್, ಬಿ.ಕುಮಾರ್ ಇದ್ದರು.



ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ವತಿಯಿಂದ ಹಸಿರು ಕ್ರಾಂತಿಯ ಮೂಲಕ ಬಡ ಜನರ ಹಸಿವು ನೀಗಿಸಿದ ಮುತ್ಸದ್ದಿ ನಾಯಕ, ಶೋಷಿತ ವರ್ಗಗಳಿಗೆ ಧ್ವನಿಯಾದ ಡಾ. ಬಾಬು ಜಗಜೀವನ್ ರಾಮ್ ಅವರ 115 ನೇ ಜಯಂತಿಯ ಅಂಗವಾಗಿ ವೇದಿಕೆಯ ರಾಜ್ಯಾಧ್ಯಕ್ಷ ಕೆ. ಎಸ್. ಶಿವರಾಮು ಇಂದು ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ಡಿ. ದೇವರಾಜ ಅರಸು ವೇದಿಕೆ ಅಧ್ಯಕ್ಷರಾದ ಕೃಷ್ಣ, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೀಶ್ ಉಪ್ಪಾರ್, ವಿದ್ಯಾರ್ಥಿ ಮುಖಂಡ ಮಹೇಶ್ ಸೋಸಲೆ, ಲೇಖಕ ಪುನೀತ್, ಲೋಕೇಶ್ ಕುಮಾರ್ ಮಾದಾಪುರ ಇದ್ದರು.



ಡಾ. ಬಾಬು ಜಗಜೀವನ ರಾಂ ಜಯಂತಿ ಅಂಗವಾಗಿ ಡಾ. ಬಾಬು ಜಗಜೀವನ ರಾಂ ಅಭಿವೃದ್ಧಿ ಸೇವಾ ಸಂಘ(ಲಿಡ್ಕರ್ ಕಾಲೋನಿ, ಸಾತಗಳ್ಳಿ) ವತಿಯಿಂದ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಚಿತ್ರದಲ್ಲಿ ಸಂಘದ ಗೌರವಾಧ್ಯಕ್ಷ ಎಸ್. ಮಂಟೇಸ್ವಾಮಿ, ಅಧ್ಯಕ್ಷ ಬಿ.ಪ್ರಕಾಶ್, ಉಪಾಧ್ಯಕ್ಷ ಕಿಶೋರ್ ಕುಮಾರ್, ಕಾರ್ಯದರ್ಶಿ ನಾಗೇಶ್ ಇತರರಿದ್ದಾರೆ.


ಕಾಂಗ್ರೆಸ್ ಕಚೇರಿಯಲ್ಲಿ ಬಾಬೂಜಿ ಜಯಂತಿ ಆಚರಣೆ

ಬಾಬೂಜಿ ತಮ್ಮದೇ ಆದ ಚಿಂತನೆಗಳಿಂದ ಹೊಸ ಭಾರತ ಕಟ್ಟುವ ಸಂಕಲ್ಪ ಹೊಂದಿದ್ದರು: ಪ್ರೊ. ಕಾಳೇಗೌಡ ನಾಗವಾರ

ಮೈಸೂರು,ಏ.5(ಎಂಟಿವೈ)– ಸ್ವಾತಂತ್ರ್ಯ ಭಾರತ ಕಂಡ ಮೇಧಾವಿ ರಾಜಕಾರಣಿಗಳಲ್ಲಿ ಬಾಬು ಜಗಜೀವನ್ ರಾಮ್ ಪ್ರಮುಖರು. ಅವರು ತಮ್ಮದೇ ಆದ ಚಿಂತನೆಯೊಂದಿಗೆ ಹೊಸ ಭಾರತ ಕಟ್ಟುವ ಸಂಕಲ್ಪ ಹೊಂದಿದ್ದರು ಎಂದು ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಬಣ್ಣಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಜಿಲ್ಲಾ ಹಾಗೂ ನಗರ ಕಾಂಗ್ರೆಸ್ ಸಮಿತಿ ವತಿಯಿಂದ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಂ ಅವರ ಜಯಂತಿಯ ಅಂಗವಾಗಿ ಮಂಗಳವಾರ ಆಯೋಜಿಸಿದ್ದ ಹಸಿರು ಕ್ರಾಂತಿ ಹರಿಕಾರನಿಗೆ ಮಹಾನಮನ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಬಾಬೂಜಿ ಕುರಿತು ವಿಶೇಷ ಉಪನ್ಯಾಸ ನೀಡುತ್ತಿದ್ದರು.

ಭಾರತ ಕಂಡ ಅತ್ಯುನ್ನತ ವ್ಯಕ್ತಿತ್ವಗಳಲ್ಲಿ ಬಾಬು ಜಗಜೀವನ್ ರಾಮ್ ಒಬ್ಬರು. ಅವರು ತಳ ಸಮುದಾಯದ ಆಶಾಕಿರಣವಾಗಿದ್ದರು. ಕೇಂದ್ರ ಸರ್ಕಾರದ ಮಂತ್ರಿ ಮಂಡಲದಲ್ಲಿ ಯಾವುದೇ ಸಚಿವ ಸ್ಥಾನ ನೀಡಿದರೂ ಅದಕ್ಕೆ ಸರಿಯಾದ ಗೌರವ ದೊರಕಿಸಿ ಕೊಡುತ್ತಿದ್ದ ಬಾಬೂಜಿ ಅವರು, ಹಸಿರು ಕ್ರಾಂತಿಯನ್ನು ಪ್ರಾರಂಭಿಸಿದರು. ತನ್ಮೂಲಕ ಆಹಾರದ ಸ್ವಾವಲಂಬನೆಯನ್ನು ದೇಶ ಸಾಧಿಸುವಂತೆ ಮಾಡಿದರು. ಬಾಂಗ್ಲಾ ವಿಮೋಚನೆಯ ಸಂದರ್ಭದಲ್ಲಿ ರಕ್ಷಣಾ ಸಚಿವರಾಗಿದ್ದರು. ಆಗಲೂ ಉತ್ತಮ ರೀತಿಯಲ್ಲಿ ತಮ್ಮ ಕರ್ತವ್ಯ ನಿರ್ವಹಣೆ ಮಾಡಿದರು ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಗ್ರಾಮಾಂತರ ಜಿಲ್ಲಾ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಕಾರ್ಯದರ್ಶಿ ಶಿವಣ್ಣ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮಾಜಿ ಮೇಯರ್‌ಗಳಾದ ಚಿಕ್ಕಣ್ಣ, ಪುಷ್ಪಲತಾ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಡಾ.ಬಾಬು ಜಗಜೀವನರಾಮ್ ಸೇರಿ

ದಲಿತ ಧೀಮಂತ ನಾಯಕರ 10 ಪುಸ್ತಕ ಶೀಘ್ರ ಬಿಡುಗಡೆ

ಮೈಸೂರು ವಿವಿಯ ಬಾಬು ಜಗಜೀವನರಾಮ್ ಅಧ್ಯಯನ ಕೇಂದ್ರದಿಂದ ಪ್ರಕಟಣೆ

ಮೈಸೂರು,ಏ.5(ಪಿಎಂ)– ಡಾ.ಬಾಬು ಜಗಜೀವನರಾವ್ ಸೇರಿದಂತೆ ದಲಿತ ಸಮುದಾಯದ ಧೀಮಂತ ನಾಯಕರ ಕುರಿತಂತೆ ಮೈಸೂರು ವಿವಿ ಡಾ.ಬಾಬು ಜಗಜೀವನರಾವ್ ಅಧ್ಯಯನ ಕೇಂದ್ರದಿಂದ 10 ಪುಸ್ತಕಗಳನ್ನು ಹೊರತರಲಾಗುತ್ತಿದೆ.

ಕೇಂದ್ರದ ಸಭಾಂಗಣದಲ್ಲಿ ವಿವಿಯ ಪರಿಶಿಷ್ಟ ಜಾತಿ–ಪರಿಶಿಷ್ಟ ವರ್ಗಗಳ ವಿಶೇಷ ಘಟಕದ ಸಹಯೋಗದಲ್ಲಿ ಡಾ.ಬಾಬು ಜಗಜೀವನರಾವ್ ಅವರ 115ನೇ ಜನ್ಮದಿನಾಚರಣೆ ಪ್ರಯುಕ್ತ ಮಂಗಳವಾರ ಹಮ್ಮಿಕೊಂಡಿದ್ದ 'ಪುಟವಿಟ್ಟ ಚಿನ್ನ ಬಾಬು ಜಗಜೀವನರಾವ್ ; ಜೀವನ–ವ್ಯಕ್ತಿತ್ವ–ಸಾಧನೆಗಳ ಯಶೋಗಾಥೆ' ಕುರಿತ ಒಂದು ದಿನದ ಕಾರ್ಯಾಗಾರ ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರದ ನಿರ್ದೇಶಕ ಪ್ರೊ.ಕೆ.ಸದಾಶಿವ ಈ ವಿಷಯ ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಕೇಂದ್ರದ ವತಿಯಿಂದ ತೆಲುಗು, ತಮಿಳು, ಹಿಂದಿ, ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳಲ್ಲಿ ಇರುವ ದಲಿತ ನಾಯಕರ ಜೀವನ–ಹೋರಾಟ ಸೇರಿದಂತೆ ದಲಿತ ಸಮುದಾಯದ ಅನೇಕ ಅಂಶಗಳ ಕುರಿತಂತೆ ಕನ್ನಡಕ್ಕೆ ಅನುವಾದಿಸಿ, 10 ಪುಸ್ತಕಗಳನ್ನು ಹೊರತರಲಾಗುತ್ತಿದೆ. ಈ ಪೈಕಿ ಮೂರು ಪುಸ್ತಕಗಳು ಪೂರ್ಣವಾಗಿ ಸಿದ್ಧಗೊಂಡಿದ್ದು, ಇಂದು ಬಿಡುಗಡೆ ಮಾಡುವ ಉದ್ದೇಶ ಹೊಂದಲಾಗಿತ್ತು. ಆದರೆ ಕುಲಪತಿಗಳು ದೊಡ್ಡ ಮಟ್ಟದ ಕಾರ್ಯಕ್ರಮ ಏರ್ಪಡಿಸಿ, ಬಿಡುಗಡೆ ಮಾಡುವ ಇಂಗಿತ ವ್ಯಕ್ತಪಡಿಸಿದರು ಎಂದು ತಿಳಿಸಿದರು.

ಲಕ್ನೋ ವಿಶ್ವವಿದ್ಯಾನಿಲಯದಲ್ಲಿ ಬಾಬೂಜಿ ಕುರಿತಂತೆ ಪಿಹೆಚ್.ಡಿ ಮಹಾಪ್ರಬಂಧದ ಹಿಂದಿ ಪುಸ್ತಕ ಪ್ರಕಟಿಸಲಾಗಿದೆ. ಅವರಿಂದ ಅನುಮತಿ ಪಡೆದು ಹಿಂದಿಯಿಂದ ಕನ್ನಡಕ್ಕೆ ಅನುವಾದ ಮಾಡಿರುವುದೂ 10 ಪುಸ್ತಕಗಳ ಪೈಕಿ ಒಂದಾಗಿದೆ. ಕೇಂದ್ರದ 2 ಕೋಟಿ ರೂ. ಸಂಚಿತ ನಿಧಿಯ ಬಡ್ಡಿ ಹಣದಲ್ಲಿ 10 ಪುಸ್ತಕಗಳ ಪ್ರಕಟಣೆಗೆ ಕುಲಪತಿಗಳು ಅನುಮತಿಸಿದ್ದಾರೆ. ಸಾಧ್ಯವಾದಷ್ಟು ಶೀಘ್ರವಾಗಿ ಈ ಪುಸ್ತಕಗಳನ್ನು ಬಿಡುಗಡೆ ಮಾಡಲಿದ್ದೇವೆ ಎಂದು ಹೇಳಿದರು.

ಬಾಬೂಜಿ ಕುರಿತ ಪುಸ್ತಕಗಳನ್ನು ಇಂದು ವಿದ್ಯಾರ್ಥಿಗಳಿಗೆ ವಿತರಣೆ ಮಾಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಮುಂದಿನ ವಾರ ಕೇಂದ್ರದಿಂದ ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಹಾಗೂ ಕ್ವಿಜ್ ಕಾರ್ಯಕ್ರಮ ನಡೆಸಲಾಗುವುದು. ಈ ಸ್ಪರ್ಧೆಯಲ್ಲಿ ಮೈವಿವಿಯ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶವಿದೆ ಎಂದು ತಿಳಿಸಿದರು.



ಮೈಸೂರು ವಿವಿ ಡಾ.ಬಾಬು ಜಗಜೀವನರಾಮ್ ಅಧ್ಯಯನ ಕೇಂದ್ರದಲ್ಲಿ ಬಾಬೂಜಿ ಜಯಂತಿ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಬಾಬೂಜಿ ಅವರ ಕುರಿತ ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಬಾಬೂಜಿ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ಉದ್ಘಾಟನೆ ನೆರವೇರಿಸಿದ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬೂಜಿ ನಮ್ಮ ದೇಶದ ಎರಡು ಕಣ್ಣುಗಳು. ದೇಶಕ್ಕೆ ಈ ಇಬ್ಬರು ಮಹನೀಯರ ಕೊಡುಗೆ ಅಪಾರ. ರಾಷ್ಟ್ರ ನಾಯಕರು ಮತ್ತು ಮಹನೀಯರನ್ನು ಅವರ ಸಮುದಾಯಕ್ಕೆ ಸೀಮಿತಗೊಳಿಸುವುದು ಸರಿಯಲ್ಲ. ಮಹನೀಯರು ಕೇವಲ ಅವರ ಸಮುದಾಯಕ್ಕೆ ಸೀಮಿತವಾಗಿ ಕೊಡುಗೆ ನೀಡಿಲ್ಲ. ಬಾಬೂಜಿ ಅವರು ನಾಲ್ಕೈದು ಖಾತೆ ನಿಭಾಯಿಸಿ ಉಪ ಪ್ರಧಾನಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಯುವ ಪೀಳಿಗೆ ಅವರ ಆದರ್ಶ ಅನುಸರಿಸಬೇಕು ಎಂದು ಸಲಹೆ ನೀಡಿದರು.

> ಕೇಂದ್ರದಿಂದ ಹೊರ ತರುತ್ತಿರುವ 10 ಪುಸ್ತಕಗಳ ಬಿಡುಗಡೆ ಸಮಾರಂಭಕ್ಕೆ ಬಾಬೂಜಿ ಅವರ ಪುತ್ರಿ, ಲೋಕಸಭೆ ಮಾಜಿ ಸ್ಪೀಕರ್ ಮೀರಾ ಕುಮಾರ್ ಅವರನ್ನು ಆಹ್ವಾನಿಸುವ ಇಂಗಿತವನ್ನು ಕುಲಪತಿಗಳು ವ್ಯಕ್ತಪಡಿಸಿದ್ದಾರೆ. ಈ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು ಎಂದಿದ್ದಾರೆ. ಅವರನ್ನು ಆಹ್ವಾನಿಸಿದರೆ, ಅರ್ಥಪೂರ್ಣ ಕಾರ್ಯಕ್ರಮವಾಗಲಿದೆ.
>
> **-ಕೋಟೆ ಎಂ.ಶಿವಣ್ಣ**

ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಮಾತನಾಡಿ, ಬಾಬೂಜಿ ಅವರು ದೇಶದ ಸಮಗ್ರ ಅಭಿವೃದ್ಧಿಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಇವರು ತಮ್ಮ ಚಿಂತನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗಿರುವುದು ಅವರ ಸಾಧನೆಗಳಿಂದ ತಿಳಿದುಬರುತ್ತದೆ. ಇವರ ಜೀವನ ಪುಟಗಳನ್ನು ನೋಡಿದಾಗ 'ನುಡಿದಂತೆ ನಡೆ' ಎಂಬ ಸಿದ್ಧಾಂತವನ್ನು ಅಳವಡಿಸಿಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಯುವಜನತೆ ಬಾಬೂಜಿಯವರ ಆದರ್ಶ ಅನುಸರಿಸುವ ಮೂಲಕ ದೇಶದ ಅಭಿವೃದ್ಧಿಗೆ ತಮ್ಮ ಕೊಡುಗೆ ನೀಡಬೇಕು ಎಂದು ಹೇಳಿದರು.

ಇದಕ್ಕೂ ಮುನ್ನ ಬಾಬೂಜಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಸಿ.ರಾಮಸ್ವಾಮಿ, ಪರಿಶಿಷ್ಟ ಜಾತಿ–ಪರಿಶಿಷ್ಟ ವರ್ಗಗಳ ವಿಶೇಷ ಘಟಕದ ಉಪಕುಲಸಚಿವ ಡಾ.ಎಸ್.ಮಹದೇವಮೂರ್ತಿ, ಕಾಡಾ ಅಧ್ಯಕ್ಷ ಶಿವಲಿಂಗಯ್ಯ ಮತ್ತಿತರರು ಹಾಜರಿದ್ದರು.

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ-571404 ದೂ: 222026 (ಕ) ಫ್ಯಾಕ್ಸ್: 08232-222026, ಮೊ: 8762960325. E-Mail : mandya@mysurumithra.com

ಜಿಲ್ಲಾದ್ಯಂತ ಡಾ.ಬಾಬು ಜಗಜೀವನರಾಂ ಜನ್ಮದಿನಾಚರಣೆ

ಬಾಬು ಜಗಜೀವನರಾಂ ತತ್ವಾದರ್ಶಗಳು ಆದರ್ಶನೀಯ



ಮಂಡ್ಯ, ಏ.5– ಕಾರ್ಮಿಕರ ಕಾಯ್ದೆಯ ಶಿಲ್ಪಿ ಎಂದೇ ಹೆಸರಾದ ಡಾ.ಬಾಬುಜಗಜೀವನ ರಾಂರವರು ಜೀವನದ ಉದ್ದಕ್ಕೂ ರೈತರ, ನೊಂದವರ, ಕಾರ್ಮಿಕರ ಪರವಾಗಿ ದುಡಿದವರು. ಇವರ ತತ್ವಾದರ್ಶಗಳು ಆದರ್ಶನೀಯ ವಾಗಿದ್ದು, ನಾವೆಲ್ಲರೂ ಅಳವಡಿಸಿಕೊಳ್ಳೋಣ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹೇಳಿದರು.

ಮಂಗಳವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಸಭಾಂಗಣದಲ್ಲಿ ಆಚರಿಸಲಾದ ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಂ ರವರ ಜನ್ಮ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶಕಂಡ ಧೀಮಂತ ರಾಷ್ಟ್ರ ನಾಯಕರು, ಹಸಿರು ಕ್ರಾಂತಿಯ ಹರಿಕಾರರು ಹಾಗೂ ಜನ ಮೆಚ್ಚಿದ ಆಡಳಿತಗಾರರಾಗಿ ಬಾಬು ಜಗಜೀವನರಾಂರವರ ಕೊಡುಗೆ ಸಮಾಜಕ್ಕೆ ಅಪಾರವಾಗಿದೆ. ಇವೆಲ್ಲವನ್ನು ನಮ್ಮ ಜೀವನಕ್ಕೆ ಅಳವಡಿಸಿಕೊಳ್ಳಬೇಕಾದದ್ದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು.

ವಿದ್ಯಾರ್ಥಿಗಳು ತಮ್ಮ ಗುರಿಯನ್ನು ಸಾಧಿಸಬೇಕಾದರೆ ಬಾಬು ಜಗಜೀವನರಾಂರವರ ಚಿಂತನೆ, ಕಲೆ, ತತ್ವಾದರ್ಶಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳುವುದು ಬಹಳ ಮುಖ್ಯ ಎಂದರು.

ಇದೇ ವೇಳೆ ಕನ್ನಡದ ಹಿರಿಯ ವಿದ್ವಾಂಸ ಡಾ. ಯಲ್ಲಪ್ಪ ಕೆಕೆಪುರ ಮಾತನಾಡಿ, ಬಾಬು ಜಗಜೀವನರಾಂ ಬಿಹಾರದ ಬೋಜಪುರದ ಬಡ ಕುಟುಂಬದಲ್ಲಿ ಜನಿಸಿದವರು. ಬಾಲ್ಯದಿಂದಲೇ ಅನೇಕ ಕಷ್ಟಕಾರ್ಪಣ್ಯಗಳನ್ನು ಅನು ಭವಿಸಿ ನೊಂದಿದ್ದರೂ, ಇತರರಿಗೆ ಮಾದರಿಯಾಗಿದ್ದರು.

ಬಾಬು ಜಗಜೀವನರಾಂರವರು ಪರಿಶ್ರಮದಿಂದ ಜವ ಬ್ದಾರಿಯುತ ಕಾರ್ಯ ನಿರ್ವಹಿಸುತ್ತಿದ್ದರು. ಬಡವರ, ರೈತರ ಧ್ವನಿಯಾಗಿ ಅನೇಕ ಹೋರಾಟಗಳನ್ನು ಕೈಗೊಂಡು ಯಶಸ್ವಿನ ಹಾದಿಯಲ್ಲಿ ಸಾಗಿದರು ಎಂದು ಹೇಳಿದರು.

1931 ರಲ್ಲಿ ಜಿನಿವಾದಲ್ಲಿ ನಡೆದ ಅಂತಾರಾಷ್ಟ್ರೀಯ ಮಟ್ಟದ ಕಾರ್ಮಿಕರ ಸಭೆಯ ಅಧ್ಯಕ್ಷತೆ ವಹಿಸಿದ್ದರು. ತದನಂತರ ಭಾರತದಲ್ಲಿ ಕಾರ್ಮಿಕ ಸಚಿವರಾಗಿ ರೈತರು ಮತ್ತು ಕೃಷಿಕರ ಪರವಾಗಿ 14 ಕಾಯ್ದೆಗಳನ್ನು ಜಾರಿಗೊಳಿಸಿದರು. ಕಾರ್ಮಿಕರ ದಿನಾಚರಣೆಯನ್ನು ಆಚರಣೆಗೆ ತಂದಿದ್ದರಿಂದ ಆಗಾಗಿ ಬಾಬು ಜಗಜೀವನ ರಾಂರವರು ಕಾರ್ಮಿಕ ಕಾಯ್ದೆಗಳ ಶಿಲ್ಪಿ ಎಂದು ಖ್ಯಾತರಾದರು ಎಂದರು.

ಜಗಜೀವನರಾಂರವರು ಭಾರತದಲ್ಲಿ ಜಾತಿಯ ಸವಾಲು ಹಾಗೂ ಜೀವನ ಸರಳ ವ್ಯಕ್ತಿತ್ವ ವಿಕಸನ ಎಂಬಂತಹ ಎರಡು ಕೃತಿಗಳನ್ನು ಹೊರತಂದು, ಇಡೀ ಸಮಾಜದ ವ್ಯವಸ್ಥೆಯನ್ನು ತಮ್ಮ ಕೃತಿಯಲ್ಲಿ ಚರ್ಚಿಸಿದ್ದಾರೆ, ಇದನ್ನು ನಾವೆಲ್ಲರೂ ಓದಿ ತಿಳಿದುಕೊಳ್ಳಬೇಕು ಎಂದರು. ಬಾಬು ಜಗಜೀವನರಾಂ ಒಂಬತ್ತು ತಿಂಗಳುಗಳ ಕಾಲ ಭಾರತದ ಉಪ ಪ್ರಧಾನಿಯಾಗಿ ಕರ್ತವ್ಯ ನಿರ್ವಹಿಸುವುದರ ಜೊತೆಗೆ ವಿವಿಧ ಖಾತೆಯ ಸಚಿವರಾಗಿ ಜನ ಸೇವೆಯನ್ನು ಮಾಡಿದ್ದಾರೆ. ಇವರ ಜೀವನದ ಹಾದಿ ನಮ್ಮೆಲ್ಲರಿಗೂ ಆಶಾಕಿರಣವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್‌ನ ಸದಸ್ಯ ಕೆ.ಟಿ. ಶ್ರೀಕಂಠೇಗೌಡ, ಜಿಲ್ಲಾಧಿಕಾರಿ ಎಸ್.ಅಶ್ವತಿ, ಜಿ.ಪಂನ ಮುಖ್ಯಕಾರ್ಯನಿರ್ವಹಣಾಧಿಕಾರಿ ಜಿ.ಆರ್. ಜೆ.ದಿವ್ಯ ಪ್ರಭು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್, ನಗರಸಭೆ ಅಧ್ಯಕ್ಷ ಹೆಚ್.ಎಸ್. ಮಂಜು, ಆಯುಕ್ತ ಎಸ್.ಲೋಕೇಶ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಬಿ.ರಂಗೇಗೌಡ, ಉಪವಿಭಾಗಾಧಿಕಾರಿ ಐಶ್ವರ್ಯ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕೆ.ಆರ್.ಪೇಟೆಯಲ್ಲಿ ಸರಳ ಆಚರಣೆ



ಕೆ.ಆರ್.ಪೇಟೆ,ಏ.5(ಶ್ರೀನಿವಾಸ್)– ಕೆ.ಆರ್.ಪೇಟೆ ಪುರಸಭೆ ಕಾರ್ಯಾಲಯ ದಲ್ಲಿ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಂ ಅವರ ಜನ್ಮದಿನಾಚರಣೆಯನ್ನು ಸರಳವಾಗಿ ಆಚರಿಸಲಾಯಿತು. ಪುರಸಭೆಯ ಅಧ್ಯಕ್ಷೆ ಮಹಾದೇವಿ ನಂಜುಂಡ ಅಧ್ಯಕ್ಷತೆ ವಹಿಸಿದ್ದರು. ಬಳಿಕ ಮಾತನಾಡಿ, ದೇಶದ ಸಮಗ್ರವಾದ ಅಭಿವೃದ್ಧಿಗಾಗಿ ದುಡಿದ ಅಪ್ರತಿಮ ನಾಯಕ ಬಾಬು ಜಗಜೀವನರಾಂ ಅವರ ದೂರದೃಷ್ಟಿಯ ಫಲವಾಗಿ ದೇಶದಲ್ಲಿ ಹಸಿರು ಕ್ರಾಂತಿಯಾಗಿ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿ ದೇಶದ ಅಭಿವೃದ್ಧಿಗೆ ನಾಂದಿಯಾಯಿತು ಎಂದು ಸ್ಮರಿಸಿದರು. ದಲಿತರು ಹಾಗೂ ಶೋಷಿತ ವರ್ಗಗಳ ಜನರಿಗೆ ಧೀಶಕ್ತಿಯಾದ ಬಾಬೂಜಿ ಅವರ ಜೀವನದ ಆದರ್ಶಗಳು ಹಾಗೂ ಸಾಧನೆಯನ್ನು ಯುವಜನರು ಪಾಲಿಸುವ ಮೂಲಕ ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಮಹಾದೇವಿ ಕರೆ ನೀಡಿದರು.

ಪುರಸಭೆಯ ಉಪಾಧ್ಯಕ್ಷೆ ಗಾಯತ್ರಿಸುಬ್ಬಣ್ಣ, ಮುಖ್ಯಾಧಿಕಾರಿ ಕುಮಾರ್, ಪುರಸಭಾ ಸದಸ್ಯರಾದ ಹೆಚ್.ಆರ್.ಲೋಕೇಶ್, ಶಾಮಿಯಾನತಿಮ್ಮೇಗೌಡ, ಕೆಬಿ.ಮಹೇಶ್, ಕೆಆರ್.ನೀಲಕಂಠ, ಗಿರೀಶ್, ಸೌಭಾಗ್ಯ ಉಮೇಶ್, ಡಾ.ಕೆ.ಎಸ್.ರಾಜೇಶ್, ತಿಬೆಟ್ ಮಹೇಶ್, ತೇಜಸ್ವಿನಿ ಮಂಜುನಾಥ್, ಕಲ್ಪನಾ ದೇವರಾಜು, ಶೋಭಾದಿನೇಶ್, ಶುಭಾ ಗಿರೀಶ್, ಪರಿಸರ ಇಂಜಿನಿಯರ್ ಅರ್ಚನಾ ಆರಾಧ್ಯ, ಕಂದಾಯಾಧಿಕಾರಿ ರವಿಕುಮಾರ್, ರಾಜೇಶ್, ಶ್ರೀನಾಥ್, ಕೆ.ಎನ್.ಶಾರದಾ, ರತ್ನಮ್ಮ ಸೇರಿದಂತೆ ಪುರಸಭೆಯ ಸದಸ್ಯರು, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಮಂಡ್ಯ ವಾರ್ತಾ ಇಲಾಖೆ ಸಹಾಯಕ ನಿರ್ದೇಶಕರಾಗಿ ನಿರ್ಮಲ ನೇಮಕ

ಮಂಡ್ಯ,ಏ.5– ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾಗಿ ಎಸ್.ಹೆಚ್.ನಿರ್ಮಲ ಇಂದು ಅಧಿಕಾರ ಸ್ವೀಕರಿಸಿದರು.

ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಟಿ.ಕೆ.ಹರೀಶ್ ಅವರನ್ನು ಮೈಸೂರಿಗೆ ವರ್ಗಾವಣೆ ಮಾಡಲಾಗಿದ್ದು, ರಾಮನಗರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಸ್.ಹೆಚ್.ನಿರ್ಮಲ ಅವರು ಮಂಡ್ಯದ ಸಹಾಯಕ ನಿರ್ದೇಶರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ನಿರ್ಮಲ ಅವರನ್ನು ಇಲಾಖೆಯ ಸಿಬ್ಬಂದಿಗಳು ಸ್ವಾಗತಿಸಿದರು.

ಕಬ್ಬು ಬೆಳೆಗಾರರೊಂದಿಗೆ ಚರ್ಚಿಸಲು ಮೈಷುಗರ್ ಆಡಳಿತ ಮಂಡಳಿಗೆ ಸಚಿವ ಗೋಪಾಲಯ್ಯ ಸೂಚನೆ

ಮಂಡ್ಯ,ಏ.5(ಮೋಹನ್‌ರಾಜ್)– ಮೈಷುಗರ್ ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವ ಸಂಬಂಧ ಬೆಳೆಗಾರರೊಂದಿಗೆ ಚರ್ಚೆ ನಡೆಸುವಂತೆ ಕಾರ್ಖಾನೆ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಗೆ ಸೂಚನೆ ನೀಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಮತ್ತು ಅಬಕಾರಿ ಸಚಿವ ಕೆ.ಗೋಪಾಲಯ್ಯ ಹೇಳಿದರು.

ಪ್ರವಾಸಿ ಮಂದಿರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಮೈಷುಗರ್ ಪುನಾರಂಭ ಕುರಿತು ರಾಜ್ಯ ಸರ್ಕಾರ ಸ್ಪಷ್ಟ ತೀರ್ಮಾನ ಕೈಗೊಂಡಿದೆ. ಯಂತ್ರಗಳ ದುರಸ್ತಿಗಾಗಿ 50 ಕೋಟಿ ರೂ. ಕೂಡ ಬಜೆಟ್‌ನಲ್ಲಿ ಮೀಸಲಿಡಲಾಗಿದೆ. ಮುಂದಿನ ಎಂಟು ದಿನಗಳ ಒಳಗೆ ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುವುದು ಎಂದರು.

ಯಂತ್ರಗಳ ದುರಸ್ತಿ ಮಾಡುವ ಕಂಪನಿಯೇ ಮುಂದಿನ ಎರಡು ವರ್ಷಗಳ ಕಾಲ ಅದರ ನಿರ್ವಹಣೆ ಮಾಡಬೇಕೆಂದು ಈಗಾಗಲೇ ತಿಳಿಸಲಾಗಿದೆ. ಮುಂದಿನ ವಾರ ಕಾರ್ಖಾನೆಗೆ ಭೇಟಿ ನೀಡಿ ಆಡಳಿತ ಮಂಡಳಿಯೊಂದಿಗೆ ಸಭೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಬಿ.ವೈ.ವಿಜಯೇಂದ್ರ ಅವರಿಗೆ ಸಚಿವ ಸ್ಥಾನ ನೀಡುವುದು ಪಕ್ಷದ ವರಿಷ್ಠರಿಗೆ ಬಿಟ್ಟ ವಿಚಾರ. ಅವರಿಗೆ ಸಚಿವ ಸ್ಥಾನ ನೀಡಿದರೆ ಅದನ್ನು ಸಮರ್ಥವಾಗಿ ನಿಭಾಯಿಸುವ ಚಾಕಚಕ್ಯತೆ ಅವರಿಗೆ ಇದೆ ಎಂದರು.

ಬಾಬೂಜಿ ಆಹಾರ ಸಮಸ್ಯೆ ನಿವಾರಿಸಿದ ಮುತ್ಸದ್ದಿ ನಾಯಕ



ನಾಗಮಂಗಲ,ಏ.5– ಪಟ್ಟಣದ ತಾಲೂಕು ಆಡಳಿತ ಸೌಧದಲ್ಲಿ ಆಯೋ ಜಿಸಿದ ಬಾಬು ಜಗಜೀವನ ರಾಮ್‌ರವರ 115ನೇ ಜಯಂತಿ ಕಾರ್ಯಕ್ರಮವನ್ನು ತಾಲೂಕು ಆಡಳಿತ ವತಿಯಿಂದ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ದೀಪ ಹಚ್ಚುವ ಮೂಲಕ ತಹಸೀಲ್ದಾರ್ ನಂದೀಶ್ ಉದ್ಘಾಟನೆ ಮಾಡಿದರು.

ನಂತರ ಮಾತನಾಡಿದ ತಹಸಿಲ್ದಾರ್ ಹಸಿರು ಕ್ರಾಂತಿಯ ಮೂಲಕ ದೇಶದ ಆಹಾರ ಸಮಸ್ಯೆ ನಿವಾರಿಸಿದ ಮುತ್ಸದ್ದಿ ನಾಯಕ ಹಾಗೂ ಉಪ ಪ್ರಧಾನಿ ಮತ್ತು ಕೃಷಿ ಸಚಿವರಾಗಿದ್ದ ಡಾಕ್ಟರ್ ಬಾಬು ಜಗಜೀವನ್ ರಾಮ್ ಅವರ ದೇಶಸೇವೆ ಮರೆಯಲು ಸಾಧ್ಯವಿಲ್ಲವೆಂದರು.

ಬುದ್ಧ ಬಸವ ವಿಚಾರಧಾರೆಗಳಿಂದ ಪ್ರೇರಿತ ರಾದ ಅವರು, ದೇಶದ ಕಟ್ಟಕಡೆಯ ಸಮು ದಾಯದ ಹಿತರಕ್ಷಣೆಗಾಗಿ ಶ್ರಮಿಸಿದವರು.

ಬಾಬು ಜಗಜೀವನ್ ರಾಮ್ ರವರು ರಕ್ಷಣಾ ಸಚಿವರಾಗಿದ್ದ ಅವಧಿಯಲ್ಲಿ ಮೊಟ್ಟಮೊದಲ ಬಾರಿಗೆ ನಿವೃತ್ತ ಸೈನಿಕರಿಗೆ ಪಿಂಚಣಿ ಯೋಜನೆ ಜಾರಿಗೆ ತಂದ ಮಹಾನ್ ನಾಯಕ. ಇಂತಹ ನಾಯಕರ ಜೀವನ ಶೈಲಿ ಹಾಗೂ ಆಡಳಿತ ವ್ಯವಸ್ಥೆಯನ್ನು ಇಂದಿನ ಯುವಪೀಳಿಗೆ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ದಲಿತ ಮುಖಂಡ ಮಂಜುನಾಥ್, ತಾಪಂ ಕಾರ್ಯ ನಿರ್ವಹಣಾಧಿಕಾರಿ ಚಂದ್ರಮೌಳಿ, ಸಮಾಜ ಕಲ್ಯಾಣ ಇಲಾಖೆ ಮೆನೇಜರ್ ಪಾರ್ವತಮ್ಮ, ಲೋಕೇಶ್, ತೋಟಗಾರಿಕೆ ಇಲಾಖೆ ಶಾಂತಮ್ಮ, ಮಲ್ಲಿಕಾರ್ಜುನ ಮುಂತಾದವರು ಉಪಸ್ಥಿತರಿದ್ದರು.

ಪಾಂಡವಪುರದಲ್ಲೂ ಡಾ.ಬಾಬೂಜಿ ಜಯಂತಿ



ಪಾಂಡವಪುರ, ಏ:5– ಡಾ.ಬಾಬು ಜಗಜೀವನರಾಮ್ ಅವರ ಜನ್ಮ ದಿನಾಚರಣೆ ಕಾರ್‍ಯಕ್ರಮವು ಪಟ್ಟಣದಲ್ಲಿ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ಐದು ದೀಪ ವೃತ್ತದಲ್ಲಿ ಜಮಾಯಿಸಿದ ದಲಿತ ಸಂಘಟನೆಯ ಕಾರ್‍ಯಕರ್ತರು ಹಾಗೂ ಶಾಸಕ ಸಿ.ಎಸ್.ಪುಟ್ಟರಾಜು ಅವರ ನೇತೃತ್ವದಲ್ಲಿ ಡಾ.ಬಾಬು ಜಗಜೀವನ ರಾಮ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಬಳಿಕ ಪಟ್ಟಣದ ಮಿನಿ ವಿಧಾನಸೌಧದ ತಹಶೀಲ್ದಾರ್ ಕಚೇರಿಯಲ್ಲಿ ತಾಲೂಕು ಆಡಳಿತದ ವತಿಯಿಂದ ನಡೆದ ಅವರ ಜಯಂತೋತ್ಸವ ಕಾರ್‍ಯಕ್ರಮದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಅವರು ಬಾಬು ಜಗಜೀವನರಾಮ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್‍ಯಕ್ರಮ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ದೇಶದ ಮಹಾನ್ ನಾಯಕರಾದ ಡಾ.ಬಿ.ಆರ್. ಅಂಬೇಡ್ಕರ್, ಡಾ.ಬಾಬು ಜಗಜೀವನರಾಮ್ ಅವರ ದೂರದೃಷ್ಟಿಯ ಫಲದಿಂದಾಗಿ ದೇಶದಲ್ಲಿ ಜನರು ನೆಮ್ಮದಿಯಿಂದ ಜೀವನ ನಡೆಸುವಂತಾಗಿದೆ ಎಂದು ಹೇಳಿದರು.

ಕೋವಿಡ್‌ನಿಂದಾಗಿ ಕಳೆದ ಎರಡು ವರ್ಷಗಳಿಂದಲೂ ಮಹಾನ್ ನಾಯಕರ ಜಯಂತೋತ್ಸವವನ್ನು ಸರಳವಾಗಿ ಆಚರಣೆ ಮಾಡಿದೆ. ಮುಂದಿನ ದಿನಗಳಲ್ಲಿ ತಾಲೂಕಿನ ಎಲ್ಲಾ ದಲಿತ ಸಂಘಟನೆಗಳು ಮುಖಂಡರ ಜತೆಗೂಡಿ ತಾಲೂಕಿನಲ್ಲಿ ಅದ್ದೂರಿಯಾಗಿ ಕಾರ್‍ಯಕ್ರಮ ಆಚರಣೆ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ತಹಸೀಲ್ದಾರ್ ಪ್ರಮೋದ್ ಎಲ್.ಪಾಟೀಲ್, ಪುರಸಭೆ ಅಧ್ಯಕ್ಷೆ ಅರ್ಚನಚಂದ್ರು, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ಕಿಯೋನಿಕ್ಸ್ ನಿರ್ದೇಶಕ ಮಂಜುನಾಥ್, ಇಓ ಆರ್.ಪಿ.ಮಹೇಶ್, ಬಿಇಓ ಲೋಕೇಶ್, ಸಮಾಜ ಕಲ್ಯಾಣಾಧಿಕಾರಿ ರವಿಶಂಕರ್, ಮುಖಂಡರಾದ ಟೌನ್‌ಚಂದ್ರು, ಬೊಮ್ಮರಾಜು, ಸಿ.ಪಿ.ಐ. ಪ್ರಭಾಕರ್, ಕಣಿವೆ ಯೋಗೇಶ್ ಸೇರಿದಂತೆ ಹಲವರು ಹಾಜರಿದ್ದರು.

ಬಾಬು ಜಗಜೀವನ್‌ರಾಮ್ ಸಜ್ಜನ ರಾಜಕಾರಣಿ



ಮಳವಳ್ಳಿ,ಏ.5(ಮೋಹನ್‌ರಾಜ್)– ಹಸಿರು ಕ್ರಾಂತಿ ಹರಿಕಾರ ಬಾಬು ಜಗನ್ ಜೀವನ್‌ರಾಮ್ ದಕ್ಷ ಹಾಗೂ ಸಜ್ಜನಿಕ ರಾಜಕಾರಣಿಯಾಗಿದ್ದು, ದಲಿತರು ಎಂಬ ಒಂದೇ ಕಾರಣಕ್ಕಾಗಿ ಪ್ರಧಾನ ಮಂತ್ರಿ ಹುದ್ದೆ ಕೈ ತಪ್ಪಿಸಲಾಗಿತ್ತು ಎಂದು ಶಾಸಕ ಡಾ.ಕೆ.ಅನ್ನದಾನಿ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಬಾಬುಜಗಜೀವನ್ ರಾಮ್ ರವರ ಜಯಂತೋತ್ಸವ ಕಾರ್ಯಕ್ರಮ ದಲ್ಲಿ ಮಾತನಾಡಿದ ಅವರು, ಇಂದಿನ ರಾಜಕಾರಣಿಗಳಿಗೆ ಸ್ಫೂರ್ತಿದಾಯಕ ವಾಗಿರುವ ಬಾಬೂಜಿಯವರ ಮಾರ್ಗ ದರ್ಶನ ತತ್ವಸಿದ್ಧಾಂತಗಳನ್ನು ಪ್ರತಿ ಯೊಬ್ಬರೂ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಹಲವಾರು ಶೋಷಣೆಗಳ ನಡುವೆಯೂ ದಲಿತ ಕುಟುಂಬದಲ್ಲಿ ಹುಟ್ಟಿ ಹಲವಾರು ಅಧಿಕಾರವನ್ನು ಪಡೆದ ಬಾಬೂಜಿ ಸಾಧನೆ ಅವಿಸ್ಮರಣೀಯವಾಗಿದ್ದು, ಅವರ ಸಾಧನೆಗಳು ಎಂದೆಂದಿಗೂ ಜೀವಂತ ವಾಗಿದೆ. 1978ರಲ್ಲಿಯೂ ಕೂಡ ಮಳ ವಳ್ಳಿಗೆ ಜಗನ್‌ಜೀವನ್‌ರಾಮ್ ಆಗಮಿಸಿ ಮತ ಪ್ರಚಾರ ನಡೆಸಿದ್ದರು ಎಂದು ಡಾ.ಅನ್ನದಾನಿ ಸ್ಮರಣೆ ಮಾಡಿದರು.

ಪುರಸಭೆ ಉಪಾಧ್ಯಕ್ಷ ನಂದಕುಮಾರ್ ಮಾತನಾಡಿ, ಮಾಂಸ ತಿನ್ನದ ಕೆಲವರು ಇಂತಹ ಮಾಂಸವನ್ನೇ ತಿನ್ನಬೇಕು ಎಂದು ಹೇಳುತ್ತಿರುವುದು ಸರಿಯಲ್ಲ. ನೂರಾರು ವರ್ಷಗಳ ಹಿಂದೆ ನಡೆಯುತ್ತಿದ್ದ ಶೋಷಣೆ ಇಂದಿಗೂ ಮುಂದುವರೆ ಯುತ್ತಿದೆ ಎಂದು ವಿಷಾದಿಸಿದರು.

ಕೆಂಗೇರಿಯ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಡಾ.ವಡ್ಡಗೆರೆ ನಾಗರಾಜಯ್ಯ ಮಾತನಾಡಿ, ಡಾ.ಬಾಬು ಜಗಜೀವನ್‌ರಾವ್ ಸಾಮಾಜಿಕ ಸೇವೆಯನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ರಾಧಾ ನಾಗರಾಜು, ಸ್ಥಾಯಿ ಸಮಿತಿ ಅಧ್ಯಕ್ಷ ಪುಟ್ಟಸ್ವಾಮಿ, ತಹಶೀಲ್ದಾರ್ ವಿಜಯಣ್ಣ, ಪುರಸಭೆ ಸದಸ್ಯರಾದ ನಾಗೇಶ್, ಬಸವ ರಾಜು, ಪ್ರಮೀಳ, ಮಣಿ ನಾರಾಯಣ, ತಾಪಂ ಇಓ ರಾಮಲಿಂಗಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿ ಚಿಕ್ಕಸ್ವಾಮಿ, ಪ್ರಭಾರ ಮುಖ್ಯಾಧಿಕಾರಿ ಚಂದ್ರಶೇಖರ್, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಎಚ್.ಮಲ್ಲಿಕಾರ್ಜುನಯ್ಯ, ಮುಖಂಡ ರಾದ ಅಪ್ಪಾಜಿ, ಮಲ್ಲೇಗೌಡ, ನಾಗರಾಜು, ಪ್ರಭು, ಕರಿಯಪ್ಪ, ಎಂ.ಕೆ.ಮಹೇಶ್ ಸೇರಿದಂತೆ ಹಲವರು ಇದ್ದರು.

ಇಂದು ದೇವರದಾಸಿಮಯ್ಯ ಜಯಂತಿ



ಮಂಡ್ಯ, ಏ.5– ಏಪ್ರಿಲ್ 6 ರಂದು ದೇವರದಾಸಿ ಮಯ್ಯ ಜಯಂತಿಯನ್ನು ಬೆಳಗ್ಗೆ 11 ಗಂಟೆಗೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಆಚರಿಸಲಾ ಗುವುದು ಎಂದು ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಬುದ್ಧಿ ಭ್ರಮಣೆ ಯುವತಿ ನಾಪತ್ತೆ

ಮಂಡ್ಯ, ಏ.5– ಸುಶ್ಮಿತಾ (23) ಎಂಬ ಬುದ್ಧಿ ಭ್ರಮಣೆಯುಳ್ಳ ಯುವತಿ ಮಾರ್ಚ್ 20 ರಂದು ಮಧ್ಯಾಹ್ನದಿಂದ ಕಾಣೆಯಾಗಿದ್ದಾರೆ ಎಂದು ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಯುವತಿಯು 5.4 ಅಡಿ ಎತ್ತರ, ಎಣ್ಣೆಗೆಂಪು ಬಣ್ಣ, ಸಾಧಾರಣ ಮೈಕಟ್ಟು, ದುಂಡುಮುಖ ಹೊಂದಿದ್ದು., ಯುವತಿಯ ಸುಳಿವು ಸಿಕ್ಕಲ್ಲಿ ಶಿವಳ್ಳಿ ಪೊಲೀಸ್ ಠಾಣೆ ದೂ. ಸ: 08232-277144 ಕಂಟ್ರೋಲ್ ರೂಂ ದೂ.ಸಂ: 08232-224888 ಅಥವಾ 08232-224500 ಸಂಪರ್ಕಿ ಸಬಹುದೆಂದು ಶಿವಳ್ಳಿ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ.

ದುಡಿಯೋಣ ಬಾ ಅಭಿಯಾನಕ್ಕೆ ಚಾಲನೆ



ಮಳವಳ್ಳಿ, ಏ.5– ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಬೇಸಿಗೆ ಕಾಲದಲ್ಲಿ ನಿರಂತರವಾಗಿ ಕೆಲಸ ನೀಡುವ ಉದ್ದೇಶ ದಿಂದ "ದುಡಿಯೋಣ ಬಾ ವಾಹಿನಿ"ಗೆ ಕಾರ್ಯನಿರ್ವಾಹಕ ಅಧಿಕಾರಿ ರಾಮ ಲಿಂಗಯ್ಯರವರು ಚಾಲನೆ ನೀಡಿದರು.


ಇಂದು ಮಳವಳ್ಳಿ ತಾಲೂಕು ಪಂಚಾ ಯತಿ ಆವರಣದಲ್ಲಿ ಅಭಿಯಾನದ ವಾಹಿನಿಗೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಕೂಲಿಗಾರ ರಿಗೆ ನಿರಂತರ ಕೆಲಸ ನೀಡುವ ಉದ್ದೇಶ ದಿಂದ ಮಾರ್ಚ್ 15 ರಿಂದ ಜೂನ್ 30ರ ವರೆಗೆ ಈ ಅಭಿಯಾನ ಪ್ರಾರಂಭವಾ ಗಿದ್ದು, ಜಲ ಸಂರಕ್ಷಣೆಗೆ ಸಂಬಂಧಿಸಿ ದಂತೆ ಜಲಮೂಲಗಳ ಪುನಶ್ಚೇತನ ಕಾಮ ಗಾರಿಗಳಾದ ಸಮಗ್ರ ಕೆರೆ ಅಭಿವೃದ್ಧಿ, ಬದು, ಕಾಲುವೆ ಸುಧಾರಣೆ, ಕೆರೆ ಮತ್ತು ಕಟ್ಟೆಗಳ ಹೂಳೆತ್ತುವ ಕಾಮಗಾರಿಗಳನ್ನು ಆದ್ಯತೆಯ ಕಾಮಗಾರಿಗಳಾಗಿ ತೆಗೆದು ಕೊಳ್ಳಲಾಗಿದೆ ಎಂದು ಹೇಳಿದರು.

ಮಳೆಗಾಲಕ್ಕೂ ಮುನ್ನ ಜಲ ಮೂಲ ಗಳ ಪುನಶ್ಚೇತನವಾಗುವುದರೊಂದಿಗೆ ಬೇಸಿಗೆಯಲ್ಲಿ ತಾಲೂಕಿನ 39 ಗ್ರಾಮ ಪಂಚಾಯತಿಯ ಕೂಲಿಕಾರರಿಗೆ ನಿರಂತರ ವಾಗಿ ಕೆಲಸ ಸಿಗಲಿದೆ ಹಾಗೂ ಕೇಂದ್ರ ಸರ್ಕಾರ ಕೂಲಿ ಮೊತ್ತವನ್ನು ರೂ.20 ಹೆಚ್ಚಿಸಿದ್ದು, ಒಟ್ಟು ರೂ 309, ಸಲಕರಣೆ ವೆಚ್ಚ ಸೇರಿ 319 ಸಿಗಲಿದೆ ಎಂದು ಹೇಳಿದರು.

ಮಹಿಳಾ ಕೂಲಿಕಾರರು ಹೆಚ್ಚಿನ ಸಂಖ್ಯೆ ಯಲ್ಲಿ ನರೇಗಾ ಕೆಲಸದಲ್ಲಿ ಭಾಗವಹಿಸಿ ದಲ್ಲಿ ಮಹಿಳಾ ಕೂಲಿಗಾರರ ಸಬಲೀಕರಣ ವಾಗಲು ಸಾಧ್ಯವಾಗುತ್ತದೆ ಹಾಗೂ ಕೂಲಿ ಗಾರರಿಗೆ ಸಹಾಯವಾಗಲೆಂದು ಕೇಂದ್ರ ಸರ್ಕಾರ NMMS ಆ್ಯಪ್ ಮೂಲಕ ಹಾಜ ರಾತಿಯನ್ನು ತೆಗೆದುಕೊಳ್ಳುವುದರಿಂದ ಕೂಲಿ ಪಾವತಿಯಲ್ಲಿ ಯಾವುದೇ ಸಾಮಸ್ಯೆ ಆಗುವುದಿಲ್ಲ ಎಂದರು.

ಇದೇ ಸಂದರ್ಭದಲ್ಲಿ ತಾಲೂಕು ಐಇಸಿ ಸಂಯೋಜಕ ಸುನಿಲ್ ಕುಮಾರ್. ಹೆಚ್, ಎಂಐಎಸ್ ಸಂಯೋಜಕಿ ಶ್ವೇತ, ವಿಷಯ ನಿರ್ವಾಹಕಿ ಮಹದೇವಮ್ಮ, ತಾಂತ್ರಿಕ ಸಹಾಯಕರಾದ ಚಂದನ್, ಅರುಣ್, ಶೋಭ, ನಿತಿನ್, ಎನ್‌ಎಲ್‌ಆರ್‌ಎಂ ವ್ಯವಸ್ಥಾಪಕ ರಾದ ಮಂಜುನಾಥ್ ಹಾಗೂ ತಾಲೂಕು ಪಂಚಾಯತ್ ಸಿಬ್ಬಂದಿ ಉಪಸ್ಥಿತರಿದ್ದರು.

ದೇವರಾಜು ನಿಧನ



ಕೆ.ಆರ್.ಪೇಟೆ,ಏ.5(ಶ್ರೀನಿವಾಸ್)–ತಾಲೂಕು ಬೂಕನಕೆರೆ ಹೋಬಳಿ ಮಡುವಿನಕೋಡಿ ಗ್ರಾಮದ ನಿವಾಸಿ, ತಾಲೂಕು ದಂಡಾಧಿಕಾರಿಗಳ ಕಚೇರಿಯಲ್ಲಿ ಗ್ರಾಮ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದ ದೇವರಾಜು(40) ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ,ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಮಡುವಿನಕೋಡಿ ಗ್ರಾಮದಲ್ಲಿ ನಡೆಯಿತು. ಅಂತ್ಯಕ್ರಿಯೆಯಲ್ಲಿ ತಹಸೀಲ್ದಾರ್ ಎಂ.ವಿ.ರೂಪ, ರಾಜಸ್ವ ನಿರೀಕ್ಷಕರಾದ ರಾಜಮೂರ್ತಿ, ನರೇಂದ್ರ, ಚಂದ್ರಕಲಾ, ತಾಲೂಕು ಗ್ರಾಮ ಸಹಾಯಕರ ಸಂಘದ ಅಧ್ಯಕ್ಷ ಬ್ರಹ್ಮರಾಜ್, ಗ್ರಾಮ ಲೆಕ್ಕಾಧಿಕಾರಿ ಜಗದೀಶ್, ತಾಲೂಕು ಕಚೇರಿಯ ಸಿಬ್ಬಂದಿ ಭಾಗವಹಿಸಿದ್ದರು.

ದುಬಾರಿ ಶುಲ್ಕ ವಿರೋಧಿಸಿ ವಾಹನ ಮಾಲೀಕರ ಪ್ರತಿಭಟನೆ



ಪಾಂಡವಪುರ, ಏ:5– ಪುರಸಭೆ ಅಧಿಕಾರಿ ಗಳು ನಿಗದಿಪಡಿಸಿರುವ ಸುಂಕ ದುಬಾರಿ ಯಾಗಿದ್ದು, ಯಾವುದೇ ಕಾರಣಕ್ಕೂ ನಿಗದಿತ ಶುಲ್ಕವನ್ನು ಪಾವತಿಸಲು ಸಾಧ್ಯ ವಿಲ್ಲ ಎಂದು ಆರೋಪಿಸಿ ಟ್ಯಾಕ್ಸಿ ಪ್ಯಾಸೆಂಜರ್ ಹಾಗೂ ಗೂಡ್ಸ್ ಆಟೋ ಮಾಲೀಕರು ಮತ್ತು ಚಾಲಕರು ಪುರಸಭೆ ಕಚೇರಿ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಆಟೋ ಚಾಲಕರ ಸಂಘದ ಅಧ್ಯಕ್ಷ ವಿಷ್ಣು ವಿಠಲ, ಆಟೋ ಯೋಗೇಶ್ ಹಾಗೂ ಟ್ಯಾಕ್ಸಿ ಚಾಲಕರ ಪರವಾಗಿ ಶ್ರೀಧರ್ ನೇತೃತ್ವದಲ್ಲಿ ವಾಹನಗಳನ್ನು ಪುರಸಭೆ ಮುಂದೆ ನಿಲ್ಲಿಸಿ ಕಚೇರಿಗೆ ಮುತ್ತಿಗೆ ಹಾಕಿದ ಪ್ರತಿಭಟನಾ ಕಾರರು, ಪುರಸಭೆ ಮುಖ್ಯಾಧಿಕಾರಿ ವೀಣಾ ಅವರ ವರ್ತನೆ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಹಳೇ ಬಸ್ ನಿಲ್ದಾಣದ ಟ್ಯಾಕ್ಸಿ ನಿಲ್ದಾಣ, ಹಿರೇಮರಳಿ ಆಟೋ ನಿಲ್ದಾಣ, ಡಾ.ರಾಜ್‌ಕುಮಾರ್ ವೃತ್ತದಲ್ಲಿರುವ ಪ್ಯಾಸೆಂಜರ್ ಆಟೋ ನಿಲ್ದಾಣ ಹಾಗೂ ಐದು ದೀಪ ವೃತ್ತದಲ್ಲಿನ ಗೂಡ್ಸ್ ವಾಹನ ಗಳ ನಿಲ್ದಾಣಗಳಲ್ಲಿ ಪುರಸಭೆ ವತಿಯಿಂದ ಯಾವುದೇ ಮೂಲ ಸೌಕರ್ಯ ನೀಡಿಲ್ಲ. ಜತೆಗೆ ವಾಹನಗಳ ಚಾಲಕರಿಗೆ ಕುಡಿ ಯುವ ನೀರು, ಶೌಚಗೃಹ ಸೇರಿದಂತೆ ವಾಹನಗಳಿಗೆ ನೆರಳಿನ ವ್ಯವಸ್ಥೆ ಕಲ್ಪಿಸಲು ಪುರಸಭೆ ಅಧಿಕಾರಿಗಳು ವಿಫಲರಾಗಿ ದ್ದಾರೆ. ಆದರೆ ದೈನಂದಿನ ನೆಲ ಬಾಡಿಗೆ ಯನ್ನು ಹೆಚ್ಚು ಮಾಡಿದ್ದು, ಕಡ್ಡಾಯವಾಗಿ ನೀಡುವಂತೆ ಆದೇಶಿಸುತ್ತಾರೆ. ಮೂಲ ಸೌಕರ್ಯ ನೀಡದ ಹೊರತು ಸುಂಕ ನೀಡಲು ಸಾಧ್ಯವಿಲ್ಲ ಎಂದು ಪ್ರತಿಭಟನಾ ಕಾರರು ಕಿಡಿಕಾರಿದರು.

ಸುಂಕವನ್ನು ಕಡಿತಗೊಳಿಸುವಂತೆ ಹಲವು ಬಾರಿ ಮನವಿ ಮಾಡಿದರೂ ಪುರಸಭೆ ಮುಖ್ಯಾಧಿಕಾರಿ ವೀಣಾ ಅವರು ನಮಗೆ ಸ್ಪಂದಿಸಿಲ್ಲ. ದಿನಕ್ಕೆ ಹತ್ತು ರೂಪಾಯಿ ಪಾವತಿಸಲು ಏನೂ ಕಷ್ಟವಾಗಲ್ಲ ಎಂದು ದಬಾಯಿಸುವ ಮೂಲಕ ಈ ಬಗ್ಗೆ ಪ್ರಶ್ನೆ ಮಾಡದಂತೆ ತಾಕೀತು ಮಾಡುತ್ತಾರೆ. ಆದರೆ ಇಂದಿನ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ವಾಹನ ಚಲಾಯಿಸಿ ಬರುವ ಆದಾಯದಲ್ಲಿ ಬದುಕುವುದೇ ಕಷ್ಟವಾಗಿದೆ. ಹೀಗಿರುವಾಗ ಮಾಸಿಕ 300 ರೂ. ಸುಂಕ ಪಾವತಿಸಲು ಸಾಧ್ಯವೇ ಎಂದು ಪ್ರತಿಭಟನಾಕಾರರು ಪ್ರಶ್ನಿಸಿದರು.

ಪ್ರತಿಭಟನಾಕಾರರ ಮನವಿ ಆಲಿಸಿ ಮಾತನಾಡಿದ ಶಾಸಕರು ತಮ್ಮ ಸ್ವಂತ ಖರ್ಚಿನಲ್ಲಿ ಟ್ಯಾಕ್ಸಿ ಹಾಗೂ ಆಟೋ ನಿಲ್ದಾಣಗಳಿಗೆ ಮೇಲ್ಛಾವಣಿ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುತ್ತೇನೆ. ಈ ಬಗ್ಗೆ ನಕ್ಷೆ ತಯಾರಿಸಿ ಕೊಡುವಂತೆ ಪ್ರತಿಭಟನಾಕಾರರಿಗೆ ತಿಳಿಸಿದರಲ್ಲದೇ, ಸುಂಕ ವಸೂಲಾತಿ ಬಗ್ಗೆ ಪರಿಶೀಲನೆ ನಡೆಸುವಂತೆ ಉಪವಿಭಾ ಗಾಧಿಕಾರಿಗಳಿಗೆ ಸೂಚಿಸಲಾಗಿದ್ದು, ಸರಕಾರದ ನಿಯಮದಂತೆ ಅವರು ಕ್ರಮ ಕೈಗೊಳ್ಳುತ್ತಾರೆ ಎಂದು ಭರವಸೆ ನೀಡಿದ ಬಳಿಕ ಪ್ರತಿಭಟನಾಕಾರರು ಪ್ರತಿಭಟನೆ ಕೈಬಿಟ್ಟರು. ಪ್ರತಿಭಟನೆಯಲ್ಲಿ ಕೋಳಿ ಶ್ರೀಧರ, ಚಿಕ್ಕಾಡೆ ಕುಮಾರ್, ತಾಂಡು, ಶಶಿ, ಆಟೋ ಕಾಳಪ್ಪ, ಹಿರೇಮರಳಿ ಯೋಗೇಶ್, ವಿಷ್ಣು ವಿಠಲ, ಚೆಲುವ ಇತರರು ಇದ್ದರು.

ಮೈಸೂರು ಮಿತ್ರ ಕೊಡಗು ಕಚೇರಿ: ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ. ದೂರವಾಣಿ: 223517, (ಕ) ಫ್ಯಾಕ್ಸ್: 08272-223517 ಮೊ. 9731469871 E-mail: madikeri@mysurumithra.com

ಜಿಲ್ಲೆಯಲ್ಲಿ ಬಾಬೂಜಿ ಜಯಂತಿ ಆಚರಣೆ

ಬಾಬು ಜಗಜೀವನ್ ರಾಂ ಅವರ ಆದರ್ಶ, ಚಿಂತನೆಗಳು ದಾರಿದೀಪ: ಅಪ್ಪಚ್ಚುರಂಜನ್



ಮಡಿಕೇರಿ, ಏ.5– ದೇಶದಲ್ಲಿ ತಲೆದೋರಿದ ಆಹಾರ ಸಮಸ್ಯೆ ಹೋಗಲಾಡಿಸಿ, ಹಸಿರು ಕ್ರಾಂತಿಗೆ ಕಾರಣರಾದ ಬಾಬು ಜಗಜೀವನ್ ರಾಂ ಅಂತಹ ಮಹಾನ್ ನಾಯಕರ ಆದರ್ಶಗಳನ್ನು ಪಾಲಿಸಬೇಕಿದೆ ಎಂದು ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ನಡೆದ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ್ ರಾಂ ಅವರ 115 ನೇ ಜನ್ಮ ದಿನಾಚರಣೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸ್ವಾತಂತ್ರ್ಯ ಹೋರಾಟಗಾರ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ್ ರಾಂ ಅವರು ದೇಶಕ್ಕಾಗಿ ನೀಡಿದ ಕೊಡುಗೆಗಳು ಅಪಾರ. ಇಂತಹ ಮಹಾನ್ ನಾಯಕರ ಆದರ್ಶ, ಚಿಂತನೆಗಳು ಇಂದಿಗೂ ದಾರಿದೀಪವಾಗಿವೆ. ಶೋಷಿತರ, ದಮನಿತರ ಪರವಾಗಿ ಹೋರಾಟ ನಡೆಸಿದ ಮಾಜಿ ಉಪ ಪ್ರಧಾನಮಂತ್ರಿ ಬಾಬು ಜಗಜೀವನ್ ರಾಂ ಅವರು ಕೃಷಿ, ರಕ್ಷಣಾ ಸಚಿವರಾಗಿ ಸಲ್ಲಿಸಿದ ಸೇವೆ ಸ್ಮರಣೀಯವಾದದ್ದು ಎಂದು ಅವರು ಹೇಳಿದರು.

1971 ರ ಐತಿಹಾಸಿಕ ವಿಜಯ ಬಾಂಗ್ಲಾ ವಿಮೋಚನೆಯ ಸಮಯದಲ್ಲಿ ಬಾಬು ಜಗಜೀವನ್ ರಾಂ ಅವರು ಪ್ರಮುಖ ಪಾತ್ರ ವಹಿಸಿದ್ದರು ಎಂದು ಅಪ್ಪಚ್ಚು ರಂಜನ್ ತಿಳಿಸಿದರು.

ಸಮಾಜದಲ್ಲಿನ ಅಸ್ಪೃಶ್ಯತೆ ಹೋಗಲಾಡಿಸುವಲ್ಲಿ ಡಾ.ಬಾಬು ಜಗಜೀವನ್ ರಾಂ ಅವರ ಕೊಡುಗೆ ಅಪಾರವಾಗಿದೆ. ಜಾತಿ ವ್ಯವಸ್ಥೆ ತೊಡೆದುಹಾಕಿ ಎಲ್ಲರಲ್ಲೂ ಸಮಾನತೆ ತರುವುದು ಅವರ ಮುಖ್ಯ ಉದ್ದೇಶವಾಗಿತ್ತು. ದೇಶದಲ್ಲಿ ಸಮರ್ಪಕವಾಗಿ ಎಲ್ಲರಿಗೂ ಆಹಾರ ದೊರೆಯದೇ ಇದ್ದಾಗ ಕೇಂದ್ರದಲ್ಲಿ ಕೃಷಿ ಸಚಿವರಾಗಿ ಕೃಷಿಯಲ್ಲಿ ಗಣನೀಯ ಬದಲಾವಣೆ ತಂದರು. ಹಸಿರು ಕ್ರಾಂತಿ ರೂಪಿಸಿ ರೈತರನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿಸಿದರು. ಆಹಾರ ಉತ್ಪಾದನೆ ಹೆಚ್ಚಿಸಿದರು' ಎಂದು ಬಣ್ಣಿಸಿದರು.

'ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪಟ್ಟಿಗೆ ಭಾರತವನ್ನು ಸೇರಿಸುವಲ್ಲಿ ಜಗಜೀವನ್ ರಾಂ ಅವರ ಪಾತ್ರ ಮಹತ್ವದ್ದಾಗಿದೆ. ಸಾಮಾಜಿಕ ಸುಧಾರಣೆ, ಹಸಿರು ಕ್ರಾಂತಿ ಅಲ್ಲದೇ ಇನ್ನೂ ಹಲವಾರು ಕ್ಷೇತ್ರಗಳ ಅಭಿವೃದ್ಧಿಯಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ' ಎಂದು ಹೇಳಿದರು.'

ಸರ್ವೋದಯ ಶಿಕ್ಷಣ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಎಚ್.ಆರ್.ಗಿರೀಶ್ ಅವರು ಮಾತನಾಡಿ, ತಮ್ಮ ಜೀವಿತಾವಧಿಯಲ್ಲಿ ಬಾಬು ಜಗಜೀವನ್ ರಾಂ ಅವರು ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಹೊಸ ಅಲೆ ಎಬ್ಬಿಸಿ ದರು. ಕೃಷಿ ವಲಯಕ್ಕೆ ನೀಡಿದ ಕೊಡುಗೆ ಅಪಾರ. ಅಂತಹ ಧೀಮಂತ ನಾಯಕನ ಆದರ್ಶಗಳನ್ನು ಅಳವಡಿಸಿಕೊಂಡು ಪಾಲಿಸಬೇಕು ಎಂದು ಅವರು ಹೇಳಿದರು.

ಬಾಬು ಜಗಜೀವನ್ ರಾಂ ಅವರು ಶಿಕ್ಷಣವನ್ನೇ ಅಸ್ತ್ರವನ್ನಾಗಿಸಿ ಉನ್ನತ ಸ್ಥಾನ ಪಡೆದ ಮಹಾನ್ ಚೇತನ. ಅವರು ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲದೆ, ಸಮಾಜ ಸೇವಕರು ಆಗಿದ್ದರು. ಬಿಹಾರದ ದಲಿತ ಕುಟುಂಬದಲ್ಲಿ ಜನಿಸಿದ ಅವರು ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಅವರ ಮಂತ್ರಿ ಮಂಡಲದಲ್ಲಿ ಸಚಿವರಾಗಿ, ಮೊರಾರ್ಜಿ ದೇಸಾಯಿ ಅವರ ಕಾಲದಲ್ಲಿ ಉಪ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷರಾದ ಅನಿತಾ ಪೂವಯ್ಯ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಜಿ.ಪಂ ಸಿಇಒ ಭನ್ವರ್ ಸಿಂಗ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಡಾ.ಯತೀಶ್ ಉಳ್ಳಾಲ್, ಡಿಎಚ್ಒ ಡಾ.ವೆಂಕಟೇಶ, ತಹಸೀಲ್ದಾರ್ ಮಹೇಶ, ಪೌರಾಯುಕ್ತರಾದ ರಾಮದಾಸ್ ಇತರರು ಇದ್ದರು.

ವಿದ್ಯಾರ್ಥಿಗಳಾದ ಕಾವ್ಯ ಮತ್ತು ಅನುಶ್ರೀ ಪ್ರಾರ್ಥಿಸಿದರು, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶೇಖರ ಸ್ವಾಗತಿಸಿದರು. ಸತೀಶ್ ನಿರೂಪಿಸಿದರು, ಕೂಡಿಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರಾದ ಪ್ರಕಾಶ ಅವರು ವಂದಿಸಿದರು.

ಇಂದಿನಿಂದ ತಾತ್ಕಾಲಿಕ ಸತ್ಯಾಪನೆ ಮುದ್ರೆ ಶಿಬಿರ

ಮಡಿಕೇರಿ, ಏ.5– ಕಾನೂನು ಮಾಪನಶಾಸ್ತ್ರ ಇಲಾಖೆ ವತಿಯಿಂದ ತಾತ್ಕಾಲಿಕ ಸತ್ಯಾಪನೆ ಮುದ್ರೆ ಶಿಬಿರವು ಏ.6 ರಿಂದ 30 ರವರೆಗೆ ಗೋಣಿಕೊಪ್ಪದ ವಿನ್‌ಟೆಕ್ ಇನ್ಸ್ಟ್ರುಮೆಂಟ್ ಸಿಟಿಜನ್ ಪ್ಲಾಜಾ ಬೈಪಾಸ್ ರಸ್ತೆಯಲ್ಲಿ ನಡೆಯಲಿದೆ. ತಮ್ಮಲ್ಲಿ ಉಪಯೋಗಿಸುವ ಅಳತೆ, ತೂಕ ಮತ್ತು ತೂಕದ ಸಾಧನಗಳನ್ನು ಹಾಜರುಪಡಿಸಿ ಸತ್ಯಾಪನೆ ಮುದ್ರೆ ಮಾಡಿಸುವಂತೆ ಕಾನೂನು ಮಾಪನಶಾಸ್ತ್ರ ನಿರೀಕ್ಷಕರು ತಿಳಿಸಿದ್ದಾರೆ.

ದೇವಟ್‌ಪರಂಬುವಿನಲ್ಲಿ ಕೊಡವರ ನರಮೇಧ ಪ್ರಕರಣ

ಅಂತರರಾಷ್ಟ್ರೀಯ ಹತ್ಯಾಕಾಂಡದ ಸ್ಮರಣಾರ್ಥ ಪಟ್ಟಿಯಲ್ಲಿ ಸೇರಿಸಲು ಸಿಎನ್‌ಸಿ ಆಗ್ರಹ

ಮಡಿಕೇರಿ, ಏ.5– ದೇವಟ್‌ಪರಂಬುವಿನಲ್ಲಿ ನಡೆದ ಕೊಡವರ ದುರಂತ ನರಮೇಧವನ್ನು ಅಂತರರಾಷ್ಟ್ರೀಯ ಹತ್ಯಾಕಾಂಡದ ಸ್ಮರಣಾರ್ಥ ಪಟ್ಟಿಯಲ್ಲಿ ಸೇರಿಸಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಕೊಡವ ಜಾಗೃತಿ ಸಭೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿತು.



ಜಿಲ್ಲಾಡಳಿತದ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ದೇವಟ್‌ಪರಂಬು ಹತ್ಯೆ ಅಪರಾಧಿಗಳ ಸಮುದಾಯದ ವಿರುದ್ಧ ಸೇಡು ತೀರಿಸಿಕೊಳ್ಳಲು ಅಥವಾ ಮಾಡಿದ ಹಿಂದಿನ ಪಾಪಗಳಿಗೆ ಅವರನ್ನು ಹೊಣೆಗಾರರನ್ನಾಗಿ ಮಾಡಲು ನಾವುಗಳು ಉದ್ದೇಶಿಸಿಲ್ಲ. ಬದಲಿಗೆ ಪ್ರಾಣ ಕಳೆದುಕೊಂಡ ನಮ್ಮ ಹಿರಿಯರ ಆತ್ಮಗಳಿಗೆ ಚಿರಶಾಂತಿ ಸಿಗಬೇಕು ಮತ್ತು ಅಂತರರಾಷ್ಟ್ರೀಯ ಸ್ಮಾರಕವನ್ನು ಸ್ಥಾಪಿಸುವ ಮೂಲಕ ಮರಣೋತ್ತರವಾಗಿ ಸ್ಮರಿಸಿ ಗೌರವಿಸಬೇಕು ಎನ್ನುವ ಭಾವನಾತ್ಮಕ ಗುರಿ ನಮ್ಮದು ಎಂದು ಸ್ಪಷ್ಟಪಡಿಸಿದರು.

ದೇವಟ್‌ಪರಂಬು ಕೊಡವ ನರಮೇಧದ ಘಟನೆಯನ್ನು ಯುಎನ್‌ಒ ದ ಅಂತರರಾಷ್ಟ್ರೀಯ ಹತ್ಯಾಕಾಂಡದ ಸ್ಮರಣಾರ್ಥ ಪಟ್ಟಿಯಲ್ಲಿ ಸೇರಿಸಬೇಕು, ಜಿಒಐ, ಯುಎನ್‌ಒ ಮತ್ತು ಫ್ರೆಂಚ್ ಸರ್ಕಾರದ ಜಂಟಿ ನಿಧಿಯಿಂದ ಅಂತರರಾಷ್ಟ್ರೀಯ ಸ್ಮಾರಕ ಸ್ಥಾಪಿಸಬೇಕು, ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯ ಸೈನ್ಯದಳ ಟಿಪ್ಪುವಿನ ಸಹಯೋಗದಲ್ಲಿ ದೇವಟ್‌ಪರಂಬುವಿನಲ್ಲಿ ನಡೆಸಿದ ಕೊಡವ ನರಮೇಧಕ್ಕೆ ಫ್ರೆಂಚ್ ಸರ್ಕಾರ ಕ್ಷಮೆಯಾಚಿಸಬೇಕು. 237 ವರ್ಷಗಳ ಹಿಂದೆ ಸಂಭವಿಸಿದ ಹತ್ಯಾಕಾಂಡವನ್ನು ಖಂಡಿಸುವ ನಿರ್ಣಯವನ್ನು ಭಾರತೀಯ ಸಂಸತ್ತು ಮತ್ತು ವಿಶ್ವಸಂಸ್ಥೆ ಅಂಗೀಕರಿಸಬೇಕು ಎಂದು ಅವರು ಆಗ್ರಹಿಸಿದರು.

ದೇವಟ್‌ಪರಂಬು ದುರಂತ ಮತ್ತು ಅರಮನೆಯ ಪಿತೂರಿಯಿಂದಾಗಿ 1500 ಕೊಡವ ಕುಲಗಳಲ್ಲಿ 700 ಕುಲಗಳು ನಾಶವಾದವು. ಇದರಿಂದ ಕೊಡವ ಜನಸಂಖ್ಯೆ ತೀವ್ರವಾಗಿ ಕಡಿಮೆಯಾಗಿದೆ. ಉಂಟಾಗಿರುವ ಮಾನವನ ನಷ್ಟವನ್ನು ಸರಿದೂಗಿಸಲು ಸೂಕ್ಷ್ಮಾತಿ ಸೂಕ್ಷ್ಮ ಕೊಡವ ಜನಾಂಗಕ್ಕೆ ಎಸ್‌ಟಿ ಟ್ಯಾಗ್ ನೀಡಿ ಸಾಂವಿಧಾನಿಕವಾಗಿ ರಕ್ಷಣೆ ನೀಡಬೇಕು. ಭಾರತದ ಸಂವಿಧಾನ ಪರಾಮರ್ಶೆ ಆಯೋಗ ಶಿಫಾರಸ್ಸು ಮಾಡಿರುವಂತೆ 371(ಕೆ) ವಿಧಿಯಡಿ ಕೊಡವ ಜಿಯೋ ರಾಜಕೀಯ ಸ್ವಾಯತ್ತತೆ ರೂಪಿಸಬೇಕು. ವಿಶ್ವ ಪರಂಪರೆಯ ತಾಣವಾಗಿ "ಕುರುಕ್ಷೇತ್ರ"ಕ್ಕೆ ಸಮಾನವಾಗಿ ದೇವಟ್‌ಪರಂಬನ್ನು ಗುರುತಿಸಬೇಕು. ಸಂವಿಧಾನದ 25 ಮತ್ತು 26 ನೇ ವಿಧಿಗಳಡಿಯಲ್ಲಿ ಸಿಖ್ ಕಿರ್ಪಾಣ್ ಮಾದರಿಯಲ್ಲಿ "ಕೊಡವ ಸಂಸ್ಕಾರ ಗನ್" ಗೆ ರಾಜ್ಯಾಂಗ ಭದ್ರತೆ ನೀಡಬೇಕೆಂದು ನಾಚಪ್ಪ ಒತ್ತಾಯಿಸಿದರು.

ಶಿರಸ್ತೇದಾರ್ ಪ್ರಕಾಶ್ ಮನವಿ ಪತ್ರ ಸ್ವೀಕರಿಸಿದರು. ಸಿಎನ್‌ಸಿ ಪ್ರಮುಖರಾದ ಅಜ್ಜಿನಿಕಂಡ ಇನಿತಾ ಮಾಚಯ್ಯ, ಲೆಫ್ಟಿನೆಂಟ್ ಕರ್ನಲ್ ಪಾರ್ವತಿ (ನಿವೃತ್ತ), ಕೂಪದಿರ ಮುತ್ತಪ್ಪ, ಕಲಿಯಂಡ ಪ್ರಕಾಶ್, ಅಜ್ಜಿಕುಟೀರ ಲೋಕೇಶ್, ಅರೆಯಡ ಗಿರಿ, ಬೊಟ್ಟಂಗಡ ಗಿರೀಶ್, ಮಣವಟ್ಟಿರ ಜಗ್ಗು, ಜಮ್ಮಡ ಸಿ.ಮೋಹನ್, ಮದ್ರಿರ ಕರುಂಬಯ್ಯ, ಪುಳ್ಳಂಗಡ ನಟೇಶ್, ಪಟ್ಟಮಾಡ ಕುಶ, ಮಣವಟ್ಟಿರ ಉತ್ತಮ, ಮಣವಟ್ಟಿರ ಚಿಣ್ಣಪ್ಪ, ಕಿರಿಯಮಾಡ ಶರಿನ್, ಅಜ್ಜಿನಿಕಂಡ ಸನ್ನಿಮಾಚಯ್ಯ, ಪುಲ್ಲೇರ ಕಾಳಪ್ಪ, ನಂದಿನೆರವಂಡ ಅಯ್ಯಣ್ಣ, ನಂದಿನೆರವಂಡ ವಿಜು, ಪುದಿಯೊಕ್ಕಡ ಕಾಶಿ, ಚೋಳಪಂಡ ನಾಣಯ್ಯ, ನಂದಿನೆರವಂಡ ಅಪ್ಪಯ್ಯ, ಅಪ್ಪರಂಡ ಪ್ರಸಾದ್, ಮುಕ್ಕಾಟಿರ ಕಿಟ್ಟು, ನಂದಿನೆರವಂಡ ದಿನೇಶ್, ಚೀಯಬೆರ ಸತೀಶ್ ಪಾಲ್ಗೊಂಡು ಸಂವಿಧಾನದ ಹೆಸರಿನಲ್ಲಿ ಕೊಡವರ ಪರ ಬೇಡಿಕೆಗಳ ಗುರಿ ಸಾಧಿಸಲು ಪ್ರಮಾಣ ವಚನ ಸ್ವೀಕರಿಸಿದರು.

ಕೊಡಗಿನ ಶಬರೀಶ್‌ಗೆ ಐದು ಚಿನ್ನದ ಪದಕ, ನಗದು ಬಹುಮಾನ



ಮಡಿಕೇರಿ, ಏ.5– ಮೈಸೂರಿನ ಕ್ರಾಫರ್ಡ್ ಹಾಲ್‌ನಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ 102ನೇ ಘಟಿಕೋತ್ಸವದಲ್ಲಿ ಕೊಡಗಿನ ವಿ.ಆರ್.ಶಬರೀಶ್ ಐದು ಚಿನ್ನದ ಪದಕ ಮತ್ತು ನಗದು ಬಹುಮಾನ ಪಡೆದುಕೊಂಡಿದ್ದಾರೆ. ಇವರು ವಿರಾಜಪೇಟೆ ಸಮೀಪದ ಕೋಟೆಕೊಪ್ಪ ಗ್ರಾಮದ ರಘು ಮತ್ತು ರೇಣುಕಾ ದಂಪತಿಯ ದ್ವಿತೀಯ ಪುತ್ರರಾಗಿದ್ದು, ಪ್ರಸ್ತುತ ಮೊದಲನೆಯ ವರ್ಷದ ಎಂ.ಪಿ.ಎಡ್ ವ್ಯಾಸಂಗ ಮಾಡುತ್ತಿದ್ದಾರೆ.

ವಿರಾಜಪೇಟೆಯಲ್ಲಿ ಬಾಬು ಜಗಜೀವನ್‌ರಾಂ ಸ್ಮರಣೆ

ವಿರಾಜಪೇಟೆ, ಏ.5– ಡಾ. ಬಾಬು ಜಗಜೀವನ್‌ರಾಮ್ ವಿದ್ಯಾರ್ಥಿ ಜೀವನದಿಂದಲೆ ಬಡವರ್ಗದ ನಾಯಕನಾಗಿ ಬೆಳೆದು ಜೀವನದಲ್ಲಿ ಅತ್ಯುನ್ನತ ಹುದ್ದೆಯನ್ನು ಅಲಂಕರಿಸಿ ರಾಷ್ಟ್ರ ನಾಯಕರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಆದರ್ಶ ಗುಣಗಳು ಇಂದಿನ ತಲೆಮಾರಿನ ಜನರಿಗೆ ದಾರಿದೀಪ ಆಗಬೇಕು ಎಂದು ವಿರಾಜಪೇಟೆ ತಹಸೀಲ್ದಾರ್ ಯೋಗಾನಂದ್ ಹೇಳಿದರು.



ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪಟ್ಟಣ ಪಂಚಾಯಿತಿಯ ಸಂಯುಕ್ತ ಆಶ್ರಯದಲ್ಲಿ ಸ್ಥಳಿಯ ಪುರಭವನದಲ್ಲಿ ಡಾ; ಬಾಬುಜಗಜೀವನ್‌ರಾಮ್ ಅವರ 115ನೇ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜ್ಯೋತಿ ಬೆಳಗಿಸಿ ಬಾಬುಜಗಜೀವನ್‌ರಾಂ ಅವರ ಬಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಬಳಿಕ ಮಾತನಾಡುತ್ತಿದ್ದರು. ಮುಖ್ಯ ಭಾಷಣಕಾರರಾಗಿ ಕ್ಷೇತ್ರ ಸಂಪನ್ಮೂಲ ಅಧಿಕಾರಿ ವನಜಾಕ್ಷಿ ಮಾತನಾಡಿ, ಬಾಬುಜಗಜೀವನ್ ರಾಮ್ ಅವರು ಅತ್ಯಂತ ಹಿಂದುಳಿದ ಬಡತನದಲ್ಲಿ ಬೆಳೆದರಾದರೂ ಉನ್ನತ ಶಿಕ್ಷಣ ಪಡೆದು ಜೀವನದಲ್ಲಿ ಉತ್ತಮ ಸಾಧನೆಯನ್ನು ತೋರಿಸಿಕೊಟ್ಟಿದ್ದಾರೆ. ಕಾರ್ಮಿಕ ಸಚಿವರಾದ ಸಂದರ್ಭ ಕಾರ್ಮಿಕರಿಗೆ ಬೇಕಾದ ಕಾನೂನು ಗಳನ್ನು ಜಾರಿಗೆ ತಂದರಲ್ಲದೆ, ಕೃಷಿ ಸಚಿವ ರಾಗಿ ಕೃಷಿಗೆ ಬೇಕಾಗುವಂತ ಸೌಲಭ್ಯಗಳನ್ನು ಜಾರಿಗೆ ತಂದರು. ಅಸ್ಪೃಶ್ಯತೆಯ ಬಗ್ಗೆ ಹೋರಾಟ ನಡೆಸಿ ಎಲ್ಲರೂ ಸಮಾನರು ಎಂದು ಜಗತ್ತಿಗೆ ಸಾರಿ ಹೇಳಿದಂತ ಮಹಾನ್ ನಾಯಕರು ಬಾಬು ಜಗಜೀವನ್‌ರಾಮ್ ಮತ್ತು ಡಾ:ಬಿ.ಆರ್ ಅಂಬೇಡ್ಕರ್ ದೇಶದ ಅದ್ಭುತ ಶಕ್ತಿಯಾಗಿದ್ದರು ಎಂದರು.

ಮುಖ್ಯ ಅತಿಥಿಯಾಗಿ ಪ,ವರ್ಗದ ಕಲ್ಯಾಣಧಿಕಾರಿ ಗುರುಶಾಂತಪ್ಪ ಅವರು ಮಾತನಾಡಿ, ಬಾಬು ಜಗಜೀವನ್‌ರಾಮ್ ವ್ಯಕ್ತಿ ಅಲ್ಲ ಅವರು ದೇಶದ ಶಕ್ತಿಯಾಗಿ ಬಡ ಜನರ ಏಳಿಗೆಗಾಗಿ ಅಪಾರ ಸಾಧನೆ ಮಾಡಿದ್ದಾರೆ ಇಂದು ಅವರನ್ನು ದೇಶವೆ ಸ್ಮರಿಸುತ್ತಿದೆ ಎಂದರು. ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಹೆಚ್.ಆರ್ ಶಿವಣ್ಣ ಮಾತನಾಡಿ, ಮಹಾನ್ ನಾಯಕರಾದ ಡಾ. ಬಾಬು ಜಗಜೀವನ್‌ರಾಮ್ ಜನ್ಮ ದಿನಾಚರಣೆ ಮತ್ತು ಬಿ.ಆರ್. ಅಂಬೇಡ್ಕರ್ ಜಯಂತಿಯ ಬಗ್ಗೆ ವಿದ್ಯಾರ್ಥಿಗಳನ್ನು ಸಭೆಗೆ ಕರೆಸಿ ಮಹಾನ್ ನಾಯಕರ ಮಹತ್ವದ ಸಾಧನೆ ಬಗ್ಗೆ ತಿಳಿಸಿಕೊಡು ವಂತಾಗಬೇಕು ಎಂದರು.

ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕಿ ಪ್ರೀತಿ ಚಿಕ್ಕಮಾದಯ್ಯ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾತಂತ್ರ್ಯ ಹೋರಾಟದಲ್ಲಿ ಜಗಜೀವನ್‌ರಾಮ್ ಭಾಗವಹಿಸಿರುವುದು ಹಾಗೂ ಅಧಿಕಾರದ ಅವಧಿಯಲ್ಲಿ ಸಾಧನೆಯ ಬಗ್ಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಗ್ರೇಡ್ 2 ತಹಸೀಲ್ದಾರ್ ಪ್ರದೀಪ್ ಕುಮಾರ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಚಂದ್ರಕುಮಾರ್, ದೈಹಿಕ ಶಿಕ್ಷಣ ಪರಿವೀಕ್ಷಕರಾದ ಗಾಯತ್ರಿ, ಉಪ ತಹಸೀಲ್ದಾರ್ ಪೊನ್ನು ಉಪಸ್ಥಿತರಿದ್ದರು. ಶಿಕ್ಷಕ ಎ.ವಿ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

ಅಂತರರಾಷ್ಟ್ರೀಯ ಹಾಕಿ ಆಟಗಾರ ಪ್ರಧಾನ್ ಸೋಮಣ್ಣಗೆ ಏಕಲವ್ಯ ಪ್ರಶಸ್ತಿ

ಮಡಿಕೇರಿ, ಏ.5– 2020–21ನೇ ಸಾಲಿನ ಏಕಲವ್ಯ ಪ್ರಶಸ್ತಿಗೆ ಕೊಡಗಿನವರಾದ ಅಂತರರಾಷ್ಟ್ರೀಯ ಹಾಕಿ ಆಟಗಾರ ಮೂರ್ನಾಡು ಕಿಗ್ಗಾಲುವಿನ ಪುದಿಯೊಕ್ಕಡ ಪ್ರಧಾನ್ ಸೋಮಣ್ಣ ಆಯ್ಕೆಯಾಗಿದ್ದಾರೆ. ಏಕಲವ್ಯ ಪ್ರಶಸ್ತಿಗೆ 15 ಕ್ರೀಡಾ ಸಾಧಕರನ್ನು ಆಯ್ಕೆ ಮಾಡಲಾಗಿದ್ದು, ಇದರಲ್ಲಿ ಪ್ರಧಾನ್ ಸೋಮಣ್ಣ ಒಬ್ಬರಾಗಿದ್ದಾರೆ.



1992ರಿಂದ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ರಾಜ್ಯದ ಕ್ರೀಡಾಪಟುಗಳಿಗೆ ಕರ್ನಾಟಕ ಸರಕಾರದ ಕ್ರೀಡಾ ಇಲಾಖೆ ವತಿಯಿಂದ ಏಕಲವ್ಯ ಸೇರಿದಂತೆ ಇತರ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಏಕಲವ್ಯ ಪ್ರಶಸ್ತಿ ಏಕಲವ್ಯನ ಕಂಚಿನ ಪ್ರತಿಮೆ, ಸ್ಕ್ರೋಲ್, ಸಮವಸ್ತ್ರ, 2 ಲಕ್ಷ ರೂ. ನಗದು ಬಹುಮಾನವನ್ನು ಒಳಗೊಂಡಿರುತ್ತದೆ. ಪ್ರಧಾನ್ ಸೋಮಣ್ಣ ಬಿಜೆಪಿ ಪ್ರಮುಖರಾದ ಪುದಿಯೊಕ್ಕಡ ಬೆಲ್ಲು ಸೋಮಯ್ಯ ಹಾಗೂ ಮೀನಾ ಸೋಮಯ್ಯ (ತಾಮನೆ–ಮಾತಂಡ) ದಂಪತಿ ಪುತ್ರರಾಗಿದ್ದಾರೆ.



ಎಸ್‌ಡಿಪಿಐ ಜಿಲ್ಲಾಧ್ಯಕ್ಷರಾಗಿ ಕಲೀಲ್ ಆಯ್ಕೆ

ಮಡಿಕೇರಿ, ಏ.5– ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ದ ಕೊಡಗು ಜಿಲ್ಲಾಧ್ಯಕ್ಷರಾಗಿ ಕಲೀಲ್ ಮಡಿಕೇರಿ ಆಯ್ಕೆಯಾಗಿದ್ದಾರೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ತಿಳಿಸಿದ್ದಾರೆ.

ಬೆಂಕಿ ಬಿದ್ದು ಏಲಕ್ಕಿ, ಕಾಫಿ ತೋಟಕ್ಕೆ ಹಾನಿ

ಪರಿಹಾರ ಸಿಗದೆ ತೋಟದ ಮಾಲೀಕ ಕಂಗಾಲು

ಸೋಮವಾರಪೇಟೆ, ಏ.5– ಆಕಸ್ಮಿಕವಾಗಿ ಬೆಂಕಿಬಿದ್ದ ಪರಿಣಾಮ ಏಲಕ್ಕಿ, ಕಾಫಿ ತೋಟಕ್ಕೆ ಹಾನಿಯಾಗಿದ್ದು, ಪೆಟ್ಟಿಗೆಯಲ್ಲಿ ಜೇನ್ನೊಣಗಳು ಸುಟ್ಟು ಕರಕಲಾಗಿರುವ ಘಟನೆ ಕಿಕ್ಕರಳ್ಳಿ ಗ್ರಾಮದಲ್ಲಿ ಈಚೆಗೆ ನಡೆದಿದೆ.



ಕಾಡಿಗೆ ಬಿಂಕಿಬಿದ್ದು ಕಾಫಿ ತೋಟಕ್ಕೆ ಆವರಿಸಿದ ಪರಿಣಾಮ ಗ್ರಾಮದ ನಿವಾಸಿ ಅನಿಲ್ ಕುಮಾರ್ ಅವರಿಗೆ ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ. ಮನೆಗೂ ಹಾನಿಯಾಗಿದೆ. ಪೈಪ್‌ಗಳು, ಜೇನುಪೆಟ್ಟಿಗೆಗಳು, ಕಾಫಿ, ಏಲಕ್ಕಿ ಗಿಡಗಳಿಗೆ ಬೆಂಕಿ ತಗುಲಿ ಹಾನಿಯಾಗಿದೆ. ಅತೀಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಕೃಷಿ ಮಾಡುವುದೇ ಕಷ್ಟಕರವಾಗಿದೆ. ಉತ್ಪಾದನಾ ವೆಚ್ಚ ಜಾಸ್ತಿಯಾಗುತ್ತದೆ. ಮಳೆಗಾಲದಲ್ಲಿ ರೋಗಬಾಧೆಯಿಂದ ಕಾಫಿ, ಏಲಕ್ಕಿಯನ್ನು ಉಳಿಸಿಕೊಳ್ಳುವುದೇ ಕಷ್ಟಕರವಾಗಿದೆ. ಕಾಫಿ ಗಿಡಗಳಿಗೆ 15 ವರ್ಷವಾಗಿತ್ತು. ಉತ್ತಮ ಫಸಲು ಕೊಯ್ಲು ಮಾಡುವ ಸಂದರ್ಭದಲ್ಲಿ ನಷ್ಟವಾಗಿದೆ ಎಂದು ಅನಿಲ್ ಹೇಳಿದರು. ಪರಿಹಾರಕ್ಕಾಗಿ ಅರಣ್ಯ ಇಲಾಖೆ, ಕಂದಾಯ ಇಲಾಖೆ, ತೋಟಗಾರಿಕಾ ಇಲಾಖೆಗೆ ಅರ್ಜಿ ಸಲ್ಲಿಸಿದರೂ, ಪರಿಹಾರ ನೀಡಲು ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಹೇಳಿದ್ದಾರೆ. ಮುಂದೆ ಏನೂ ಮಾಡಬೇಕೆಂದು ತೋಚುತ್ತಿಲ್ಲ ಎಂದು ಸುದ್ದಿಗಾರರೊಂದಿಗೆ ತಮ್ಮ ಅಸಹಾಯಕತೆ ತೋಡಿಕೊಂಡರು.

ಸೋಮವಾರಪೇಟೆಯಲ್ಲೂ ಬಾಬೂಜಿ ಜನ್ಮದಿನ ಆಚರಣೆ



ಸೋಮವಾರಪೇಟೆ ಸ್ತ್ರೀಶಕ್ತಿ ಭವನ ಸಭಾಂಗಣದಲ್ಲಿ ಮಂಗಳವಾರ ಬಾಬು ಜಗಜೀವನ್‌ರಾಂ ಅವರ 115ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಗೋವಿಂದರಾಜು ಮಾತನಾಡಿದರು.

ಸೋಮವಾರಪೇಟೆ, ಏ.5– ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಪಟ್ಟಣ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆಗಳ ಸಹಯೋಗದೊಂದಿಗೆ ಇಲ್ಲಿನ ಸ್ತ್ರೀಶಕ್ತಿ ಭವನ ಸಭಾಂಗಣದಲ್ಲಿ ಮಂಗಳವಾರ ಬಾಬು ಜಗಜೀವನ್‌ರಾಂ ಅವರ 115ನೇ ಜನ್ಮದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ತಹಸೀಲ್ದಾರ್ ಗೋವಿಂದರಾಜು ಮಾತನಾಡಿ, ಕೃಷಿ ಕ್ಷೇತ್ರದ ಸುಧಾರಣೆ, ಹಸಿರು ಕ್ರಾಂತಿ ಹಾಗೂ ಕಾರ್ಮಿಕ ವರ್ಗದ ಕಲ್ಯಾಣಕ್ಕಾಗಿ ಜಗಜೀವನ್‌ರಾಂ ಅವರು ಸಾಕಷ್ಟು ಕೆಲಸ ಮಾಡಿದ್ದಾರೆ. ಕಾರ್ಮಿಕರ ಶ್ರೇಯೋಭಿವೃದ್ಧಿಗೆ ದೂರದೃಷ್ಟಿಯ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎಂದು ಸ್ಮರಿಸಿದರು.

ದೇಶದ ಸಚಿವರಾಗಿ, ಉಪ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಸಮಾಜ ಸುಧಾರಕ ಬಾಬು ಜಗಜೀವನ್‌ರಾಂ ಅವರ ಹೋರಾಟ ಹಾಗೂ ಜಾರಿಗೆ ತಂದ ಕಾಯ್ದೆಗಳು ಐತಿಹಾಸಿಕ ದಾಖಲೆಗಳಾಗಿವೆ ಎಂದು ಬಣ್ಣಿಸಿದರು.

ಮುಖ್ಯ ಅತಿಥಿಯಾಗಿದ್ದ ನಿವೃತ್ತ ಮುಖ್ಯೋಪಾಧ್ಯಾಯ ಜೆ.ಸಿ. ಶೇಖರ್ ಮಾತನಾಡಿ, ಸಮಾಜ ಸುಧಾರಣೆಗೆ ಶ್ರಮಿಸಿದ ದಾರ್ಶನಿಕರನ್ನು ಕೇವಲ ಒಂದು ವರ್ಗಕ್ಕೆ ಸೀಮಿತಗೊಳಿಸಬಾರದು. ಅವರುಗಳ ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಜಯಣ್ಣ, ಸ್ತ್ರೀ ಶಕ್ತಿ ಬ್ಲಾಕ್ ಸೊಸೈಟಿ ಅಧ್ಯಕ್ಷೆ ಸುಮತಿ, ಪ.ಪಂ. ಸದಸ್ಯೆ ಶೀಲಾ ಡಿಸೋಜ, ಮುಖ್ಯಾಧಿಕಾರಿ ನಾಚಪ್ಪ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಣ್ಣಯ್ಯ, ಸಮಾಜ ಕಲ್ಯಾಣ ಇಲಾಖಾಧಿಕಾರಿ ಚಂದ್ರಪ್ಪ, ಬಾಲಕೃಷ್ಣ ರೈ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಾಡಾನೆ ದಾಳಿ; ಬಾಳೆ, ಅಡಿಕೆ, ಕಾಫಿ ಬೆಳೆ ನಾಶ



ವಿರಾಜಪೇಟೆ, ಏ.5– ವಿರಾಜಪೇಟೆ ಬಳಿಯ ಐಮಂಗಲ ಗ್ರಾಮದ ಕುಂಡ್ರಂಡ ಸಿ.ಪೊನ್ನಪ್ಪ ಅವರ ಕಾಫಿ ತೋಟಕ್ಕೆ ಕಾಡಾನೆಗಳು ದಾಳಿ ನಡೆಸಿ ಫಸಲಿಗೆ ಬಂದ ಬಾಳೆ, ಅಡಿಕೆ ಹಾಗೂ ಕಾಫಿ ಗಿಡಗಳನ್ನು ಮುರಿದು ನಷ್ಟವುಂಟುಮಾಡಿದೆ.

ಐಮಂಗಲ ಗ್ರಾಮದಲ್ಲಿ ಪದೇ ಪದೇ ಆನೆಗಳು ದಾಳಿ ನಡೆಸುತ್ತಿದ್ದು ಸಂಜೆ 6.30ರ ವೇಳೆಗೆ ರಸ್ತೆ ಹಾಗೂ ತೋಟಗಳಿಗೆ ಬರುತ್ತವೆ. ಗ್ರಾಮಸ್ಥರು ನಡೆದಾಡಲು ಭಯಭೀತರಾಗಿದ್ದಾರೆ. ಈ ಸಂಬಂಧ ಈಗಾಗಲೇ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಗಿದ್ದು, ನಷ್ಟ ಸಂಭವಿಸಿರುವುದಕ್ಕೆ ಪರಿಹಾರ ಮತ್ತು ಕಾಡಾನೆಗಳನ್ನು ಕಾಡಿಗೆ ಅಟ್ಟುವಂತ ಕೆಲಸವನ್ನು ಮಾಡಿ ಅರಣ್ಯ ಇಲಾಖೆ ಶಾಶ್ವತ ಪರಿಹಾರ ನೀಡುವಂತೆ ಪೊನ್ನಪ್ಪ ಒತ್ತಾಯಿಸಿದ್ದಾರೆ.

ಕಾಪಾಳ ಸಮಾಜದ ಸ್ಥಿತಿಗತಿ ವೀಕ್ಷಿಸಿದ ಹಿಂದುಳಿದ ವರ್ಗಗಳ ಆಯೋಗ

ಜಿಲ್ಲಾಧಿಕಾರಿ ಜೊತೆ ಚರ್ಚಿಸಿ ಮುಂದಿನ ಕ್ರಮ: ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗ್ಡೆ

ಮಡಿಕೇರಿ, ಏ.5– ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಕೆ.ಜಯಪ್ರಕಾಶ ಹೆಗ್ಡೆ ಮತ್ತು ಸದಸ್ಯರಾದ ಎಚ್.ಎಸ್. ಕಲ್ಯಾಣ್ ಕುಮಾರ್, ಬಿ.ಎಸ್.ರಾಜಶೇಖರ್, ಕೆ.ಟಿ.ಸುವರ್ಣ, ಅರುಣ್ ಕುಮಾರ್, ಶಾರದ ನಾಯ್ಕ, ಇತರರು ಕೊಡಗು ಜಿಲ್ಲೆಯ ನಾಲ್ಕುನಾಡು ಅರಮನೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಕಾಪಾಳ ಸಮಾಜದವರ ಸ್ಥಿತಿಗತಿ ವೀಕ್ಷಿಸಿದರು.

ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧ್ಯಕ್ಷರು ಮತ್ತು ಸದಸ್ಯರ ತಂಡವು ಕಕ್ಕಬ್ಬೆ ಗ್ರಾ.ಪಂ. ವ್ಯಾಪ್ತಿಯ ನಾಲ್ಕುನಾಡು ಅರಮನೆ ವ್ಯಾಪ್ತಿಯಲ್ಲಿ ಕಾಪಾಳ ಸಮಾಜದವರು ವಾಸಿಸುತ್ತಿರುವ ಸ್ಥಳಕ್ಕೆ ಮಂಗಳವಾರ ಭೇಟಿ ನೀಡಿ ಸುದೀರ್ಘವಾಗಿ ಚರ್ಚಿಸಿ ಮಾಹಿತಿ ಪಡೆದರು.

ಆರಂಭದಲ್ಲಿ ಮಾತನಾಡಿದ ಕಾಪಾಳ ಸಮಾಜದ ಪ್ರಮುಖರಾದ ಕಾಪಾಳರ ತಮ್ಮಯ್ಯ ಅವರು, ನಾಲ್ಕುನಾಡು ಅರಮನೆ ವ್ಯಾಪ್ತಿಯಲ್ಲಿ 32 ಮನೆಗಳಿದ್ದು, ಸುಮಾರು 200 ಮಂದಿ ಇದ್ದಾರೆ. ಮಡಿಕೇರಿ ತಾಲೂಕಿನ ಕಕ್ಕಬ್ಬೆ ಗ್ರಾ.ಪಂ. ವ್ಯಾಪ್ತಿಯಲ್ಲಿ ಮಾತ್ರ ಕಾಪಾಳ ಜನಾಂಗದವರು ವಾಸಿಸುತ್ತಿದ್ದಾರೆ ಎಂದು ಅವರು ತಿಳಿಸಿದರು.

ದಟ್ಟ ಕಾನನದಲ್ಲಿ ವಾಸಿಸುತ್ತಿದ್ದ ಕಾಪಾಳ ಜನಾಂಗದವರನ್ನು ಅಂದಿನ ರಾಜರು ನಾಲ್ಕುನಾಡು ಅರಮನೆ 'ಕಾವಲು ಕಾಯಲು' ಕರೆದುಕೊಂಡು ಬಂದರು. ಕಾಪಾಳರು ಎಂದರೆ ಕಾವಲುಗಾರರು, ಕಾಪಾಡುವವರು, ರಕ್ಷಕರು ಎಂಬ ಅರ್ಥವಿದೆ ಎಂದು ಕಾಪಾಳರ ತಮ್ಮಯ್ಯ ಅವರು ತಿಳಿಸಿದರು. ಅಂದಿನ ರಾಜರು ಕಾಪಾಳ ಸಮಾಜದವರಿಗೆ ಸ್ವಲ್ಪ ಜಾಗ ನೀಡಿ ನಾಲ್ಕುನಾಡು ಅರಮನೆ ಕಾವಲುಗಾರರನ್ನಾಗಿ ನೇಮಿಸಿಕೊಂಡಿದ್ದರು. ಕಾಪಾಳ ಸಮಾಜವು ಆರ್ಥಿಕವಾಗಿ, ಸಾಮಾಜಿಕ, ಶೈಕ್ಷಣಿಕವಾಗಿ ತುಂಬಾ ಹಿಂದೆ ಉಳಿದಿದ್ದು, ಕಾಪಾಳ ಜನಾಂಗಕ್ಕೆ ಯಾವುದೇ ರೀತಿಯ ಸರ್ಕಾರದ ಸೌಲಭ್ಯಗಳು ಸಿಗುತ್ತಿಲ್ಲ, ಆದ್ದರಿಂದ ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂದು ಅವರು ಕೋರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ.ಜಯ ಪ್ರಕಾಶ ಹೆಗ್ಡೆ ಅವರು ಕಾಪಾಳ ಸಮಾಜದಲ್ಲಿ ಉನ್ನತ ಶಿಕ್ಷಣ ಪಡೆದವರು ಮತ್ತು ಸರ್ಕಾರಿ ಉದ್ಯೋಗ ಪಡೆದಿರುವವರು ಎಷ್ಟು ಮಂದಿ ಎಂದು ಮಾಹಿತಿ ಪಡೆದರು. ಈ ವೇಳೆ ಒಂದಿಬ್ಬರು ಪದವಿ ಹಂತಕ್ಕೆ ಓದಿದ್ದಾರೆ. ಅದು ಬಿಟ್ಟು ಯಾರೂ ಸಹ ಸರ್ಕಾರಿ



ಉದ್ಯೋಗವನ್ನು ಪಡೆದಿಲ್ಲ ಎಂದು ಕಾಪಾಳರ ಪ್ರಮುಖರೊಬ್ಬರು ಮಾಹಿತಿ ನೀಡಿದರು. ಕಾಪಾಳರು ಕೊಡಗಿನ ಮೂಲ ನಿವಾಸಿಗಳಾಗಿದ್ದು, ಕೂಲಿ ಕೆಲಸ ಮಾಡಿಕೊಂಡು ಬದುಕುತ್ತಿದ್ದೇವೆ. ಕೊಡವ ಸಂಸ್ಕೃತಿ, ಸಂಪ್ರದಾಯ ಅನುಸರಿಸಲಾಗುತ್ತಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಕುಡಿಯರ ಭರತ್‌ಚಂದ್ರ ದೇವಯ್ಯ ಮತ್ತು ಕಾಪಾಳ ಜನಾಂಗದ ಪ್ರಮುಖರಾದ ಪೊನ್ನಪ್ಪ ಅವರು ಮಾತನಾಡಿ, ಕಾಪಾಳ ಸಮುದಾಯದ ಬಗ್ಗೆ ಕುಲಶಾಸ್ತ್ರ ಅಧ್ಯಯನ ಆಗಬೇಕು. ತಾತ ಮುತ್ತಾತಂದಿರ ಹೆಸರಿನಲ್ಲಿ ಭೂಮಿ ಇದೆ. ಆದರೆ ಮಕ್ಕಳ ಹೆಸರಿಗೆ ಆರ್‌ಟಿಸಿ ಆಗಿಲ್ಲ ಎಂದು ಅವರು ತಿಳಿಸಿದರು. ಪಂಚಾಯಿತಿ ವತಿಯಿಂದ ರಸ್ತೆ, ವಿದ್ಯುತ್ ದೀಪ, ಕುಡಿಯುವ ನೀರು ಒದಗಿಸುವಂತಾಗಬೇಕು ಎಂದು ಅವರು ಕೋರಿದರು.

ಮಾಹಿತಿ ಆಲಿಸಿ ಮಾತನಾಡಿದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಕೆ.ಜಯಪ್ರಕಾಶ ಹೆಗ್ಡೆ ಅವರು ಏ.6 ರಂದು ಜಿಲ್ಲಾಧಿಕಾರಿ ಜೊತೆ ಸಭೆ ನಡೆಯಲಿದ್ದು, ಈ ಸಭೆಯಲ್ಲಿ ಕಾಪಾಳರ ಸ್ಥಿತಿಗತಿ ಬಗ್ಗೆ ಚರ್ಚಿಸಿ ಮುಂದಿನ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಹಿಂದುಳಿದ ವರ್ಗಗಳ ಜಾತಿ ವರ್ಗೀಕರಣ ಪಟ್ಟಿಯಲ್ಲಿ ಕೆಟಗರಿ–01 ರ ಕ್ರಮ ಸಂಖ್ಯೆ 26 ರಲ್ಲಿ 'ಕೊಡಗು ಕಾಪಾಳ' ಎಂದು ಇದೆ. ತಮ್ಮ ಜೀವನ ಶೈಲಿಯನ್ನು ಗಮನಿಸಿದಾಗ ಬುಡಕಟ್ಟು ಸಂಸ್ಕೃತಿ, ಸಂಪ್ರದಾಯ ಹೊಂದಿದ್ದು, ಆ ನಿಟ್ಟಿನಲ್ಲಿ ವರದಿ ತಯಾರಿಸಿ ಪರಿಶಿಷ್ಟ ಪಂಗಡ ಆಯೋಗಕ್ಕೆ ಸಲ್ಲಿಸಲಾಗುವುದು ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ತಿಳಿಸಿದರು.

ಕೆಟಗರಿ–01 ರಲ್ಲಿ ಇದ್ದರೂ ಸಹ ಅಲೆಮಾರಿ ಸಮುದಾಯಕ್ಕೆ ಹೆಚ್ಚಿನ ಸೌಲಭ್ಯಗಳು ಸಿಗಲಿದ್ದು, ಹೆಚ್ಚಿನ ಸೌಲಭ್ಯ ಪಡೆಯುವಂತಾಗಲು ಸಹಕಾರಿಯಾಗುವ ನಿಟ್ಟಿನಲ್ಲಿ ಕ್ರಮವಹಿಸಲಾಗುವುದು. ಆ ನಿಟ್ಟಿನಲ್ಲಿ ಬುಧವಾರ ನಡೆಯುವ ಸಭೆಯಲ್ಲಿ ಜಿಲ್ಲಾಧಿಕಾರಿ ಅವರ ಜೊತೆ ಚರ್ಚಿಸಿ ಮುಂದಿನ ಕ್ರಮವಹಿಸಲಾಗುವುದು ಎಂದು ಕೆ.ಜಯಪ್ರಕಾಶ ಹೆಗ್ಡೆ ಅವರು ಹೇಳಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಕೆ.ಜಯಪ್ರಕಾಶ್ ಹೆಗ್ಡೆ ಅವರು, ಹಿಂದುಳಿದ ವರ್ಗಗಳ ಪಟ್ಟಿಯಿಂದ ಕಾಪಾಳ ಸಮಾಜ ಬಿಟ್ಟು ಹೋಗಿದೆ ಎಂದು ಸಮಾಜ ಕಲ್ಯಾಣ ಸಚಿವರು ಹಾಗೂ ಹಿಂದೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಕೋಟ ಶ್ರೀನಿವಾಸ್ ಪೂಜಾರಿ ಹಾಗೂ ನಗರಸಭೆ ಅಧ್ಯಕ್ಷರು ಗಮನ ಸೆಳೆದಿದ್ದರು. ಆ ನಿಟ್ಟಿನಲ್ಲಿ ಕಾಪಾಳ ಜನಾಂಗ ವಾಸಿಸುವ ಪ್ರದೇಶವನ್ನು ವೀಕ್ಷಿಸಿ, ಇಲ್ಲಿನ ಕಾಪಾಳ ಜನರ ಸ್ಥಿತಿಗತಿ ಆಲಿಸಲು ಭೇಟಿ ನೀಡಲಾಗಿದೆ. ಆ ನಿಟ್ಟಿನಲ್ಲಿ ಕಾಪಾಳರ ಸ್ಥಿತಿಗತಿ ಗಮನಿಸಲಾಗಿದ್ದು, ಸಂಕಷ್ಟದಿಂದ ಬದುಕು ದೂಡುತ್ತಿದ್ದಾರೆ ಎಂದರು. ಕಾಪಾಳ ಜನಾಂಗವು ಸ್ಥಿತಿಗತಿಯನ್ನು ಅವಲೋಕಿಸಿದಾಗ ಬುಡಕಟ್ಟು ಸಂಸ್ಕೃತಿ, ಸಂಪ್ರದಾಯವನ್ನು ಹೊಂದಿದ್ದಾರೆ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ತಿಳಿಸಿದರು.

ಕಕ್ಕಬ್ಬೆ ಗ್ರಾ.ಪಂ.ಅಧ್ಯಕ್ಷರಾದ ಕಲಿಯಂಡ ಸಂಪನ್ ಅಯ್ಯಪ್ಪ, ಹಿಂದುಳಿದ ವರ್ಗಗಳ ಜಿಲ್ಲಾ ಅಧಿಕಾರಿ ಎನ್.ಮಂಜುನಾಥ್, ತಾಲೂಕು ಅಧಿಕಾರಿ ರಾಜಶೇಖರ್, ಬಿಸಿಎಂ ಇಲಾಖೆಯ ವ್ಯವಸ್ಥಾಪಕರಾದ ಕವಿತಾ ಇತರರು ಇದ್ದರು.

ಮೈಸೂರು ಮಿತ್ರ ವಿಳಾಸ: ನಂದಿನಿ ಗ್ರಾಫಿಕ್ಸ್, ಸಿ.ಹೆಚ್.ಆರ್ ಕಾಂಪ್ಲೆಕ್ಸ್, ಜೋಡಿ ರಸ್ತೆ, ಚಾಮರಾಜನಗರ-571313. ಫ್ಯಾಕ್ಸ್: 08226-222608, ಮೊ. 9242265657 E-mail: chamarajanagar@mysurumithra.com

ಜಿಲ್ಲಾದ್ಯಂತ ಹಸಿರು ಕ್ರಾಂತಿ ಹರಿಕಾರ ಡಾ. ಬಾಬೂಜಿ ಸ್ಮರಣೆ

ಬಾಬೂಜಿಯಿಂದ ದೇಶಕ್ಕೆ ಪ್ರಾಮಾಣಿಕ ಸೇವೆ

ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ ಬಣ್ಣನೆ





ಚಾಮರಾಜನಗರ,ಏ.5-ಹಲವು ಮಹತ್ವದ ಇಲಾಖೆಗಳ ಸಚಿವ ಸ್ಥಾನದ ಜವಾಬ್ದಾರಿ ನಿರ್ವಹಿಸಿದ ಡಾ.ಬಾಬು ಜಗಜೀವನ್ ರಾಮ್ ಅವರು ಸಂಶೋಧನೆ, ವಿಜ್ಞಾನ, ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡು ಇಲಾಖೆಯ ಕಾರ್ಯ ಕ್ಷೇತ್ರಕ್ಕೆ ಪ್ರಾಮಾಣಿಕವಾಗಿ ನ್ಯಾಯ ತಂದು ಕೊಟ್ಟರು ಎಂದು ಚಿತ್ರದುರ್ಗದ ಆದಿಜಾಂಬವ ಮಹಾ ಸಂಸ್ಥಾನ ಮಠದ, ಕೋಡಿಹಳ್ಳಿ ಶ್ರೀಮದ್ ಕಡಪ ಸಿಂಹಾಸನದ ಷಡಕ್ಷರ ಮುನಿ ದೇಶಿಕೇಂದ್ರ ಸ್ವಾಮೀಜಿ ಬಣ್ಣಿಸಿದರು.

ನಗರದ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರ ನಾಯಕ ಹಾಗೂ ಉಪ ಪ್ರಧಾನಿ ಡಾ.ಬಾಬು ಜಗಜೀವನ್‌ರಾಮ್ ಅವರ 115ನೇ ಜನ್ಮ ದಿನಾಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕಾರ್ಮಿಕ, ರಕ್ಷಣಾ ಸೇರಿದಂತೆ ಹಲವು ಮಹತ್ವದ ಖಾತೆಗಳನ್ನು ಡಾ.ಬಾಬುಜಗಜೀವನ್ ರಾಮ್ ಅವರು ಪರಿಪೂರ್ಣ ಹಾಗೂ ದಕ್ಷತೆಯಿಂದ ನಿರ್ವಹಣೆ ಮಾಡಿದರು. ಆಳವಾದ ಅಧ್ಯಯನದಿಂದಾಗಿ ಬದುಕಿನ ವಿಶೇಷವಾಗಿ ಗಮನ ಸೆಳೆದ ಬಾಬೂಜೀ ಅವರು ಹಸಿವಿನ ಬವಣೆ ನೀಗಲು ಜಾರಿಗೆ ತಂದ ಕ್ರಮಗಳಿಂದ ಹಸಿರು ಕ್ರಾಂತಿಯ ಹರಿಕಾರರು ಎನಿಸಿಕೊಂಡರು ಎಂದರು.

ಯಾವ ವ್ಯಕ್ತಿ ಜನರ ಮನಸ್ಸಿನಲ್ಲಿ ಉಳಿಯಲಿದ್ದಾರೋ ಅವರೇ ಸಾಧಕರು, ಬದುಕಿನ ಸಾರ್ಥಕತೆಯ ಹೆಜ್ಜೆ ಮೂಡಿಸಬೇಕು. ಅಂತಹವರಲ್ಲಿ ಬಾಬು ಜಗಜೀವನ್ ರಾಮ್ ಅವರು ಸಹ ಪ್ರಮುಖರು ಆಗಿದ್ದಾರೆ. ಬಾಬುಜಗಜೀವನ್‌ರಾಮ್ ಅವರು ರಾಜ ನೀತಿಜ್ಞರು, ಸಮಾಜ ಸುಧಾರಕರು ಆಗಿದ್ದಾರೆ ಎಂದು ಷಡಕ್ಷರಮುನಿ ದೇಶಿಕೇಂದ್ರಸ್ವಾಮಿ ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಸಮಾಜದ ಉನ್ನತಿಗೆ ದುಡಿದ ಮಹನೀಯರ ವಿಚಾರಗಳು ಹಾಗೂ ಆದರ್ಶಗಳನ್ನು ಎಲ್ಲರೂ ತಿಳಿಯಬೇಕಿದೆ. ಬಾಬು ಜಗಜೀವನ್‌ರಾಮ್ ಅವರ ಸೇವೆ ಸಾಧನೆಗಳನ್ನು ಅರಿಯಬೇಕಿದೆ. ಸಮಾಜದಲ್ಲಿ ಮೇಲು ಕೀಳು ಭಾವನೆ ತೊಡೆದು ಸಮಾನತೆ ಮೂಡಿಸುವ ನಿಟ್ಟಿನಲ್ಲಿ ಎಲ್ಲರೂ ಮುಂದಾಗಬೇಕು ಎಂದು ಸಲಹೆ ನೀಡಿದರು.

ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಬೆಂಗಳೂರು ವಿವಿಯ ಡಾ.ಬಾಬು ಜಗಜೀವನರಾವ್ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ನಿರ್ದೇಶಕ ಪ್ರೊ. ಡಾ.ಬಿ.ಗಂಗಾಧರ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ಶೈಕ್ಷಣಿಕ ಸಾಧನೆ ಮಾಡಿ ಹೆಚ್ಚು ಚಿನ್ನದ ಪದಕ ಮತ್ತು ನಗದು ಬಹುಮಾನ ಗಳಿಸಿದ ಜಿಲ್ಲೆಯ ಪ್ರತಿಭಾವಂತ ವಿದ್ಯಾರ್ಥಿಗಳಾದ ಮಹದೇವಸ್ವಾಮಿ ಹಾಗೂ ತೇಜಸ್ವಿನಿ ಅವರನ್ನು ಗಣ್ಯರು ಸನ್ಮಾನಿಸಲಾಯಿತು.

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ. ರಾಮಚಂದ್ರ, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಬಿ.ಶಾಂತಮೂರ್ತಿ ಕುಲಗಾಣ, ನಗರಸಭಾ ಸದಸ್ಯರಾದ ಮಹದೇವಯ್ಯ, ಬಸವಣ್ಣ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್ಪಿ ಟಿ.ಪಿ.ಶಿವಕುಮಾರ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಎಡಿಸಿ ಎಸ್.ಕಾತ್ಯಾಯಿನಿ ದೇವಿ, ಎಎಸ್ಪಿ ಕೆ.ಎಸ್.ಸುಂದರ್‌ರಾಜ್, ತಹಸೀಲ್ದಾರ್ ಚಿದಾನಂದ ಗುರುಸ್ವಾಮಿ, ತಾಪಂ ಇಓ ಪ್ರೇಮ್‌ಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಹೆಚ್.ಸಿ.ಭಾಗೀರಥಿ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ವೇದಿಕೆ ಸಮಾರಂಭಕ್ಕೂ ಮೊದಲು ನಗರದ ಪ್ರವಾಸಿ ಮಂದಿರದಲ್ಲಿ ಡಾ. ಬಾಬು ಅವರ ಭಾವಚಿತ್ರದ ಮೆರವಣಿಗೆಗೆ ಗಣ್ಯರು ಚಾಲನೆ ನೀಡಿದರು. ಬಳಿಕ ಕಲಾ ತಂಡಗಳೊಂದಿಗೆ ಮೆರವಣಿಗೆಯು ಪ್ರಮುಖ ಬೀದಿಗಳಲ್ಲಿ ಸಾಗಿ ಗಮನ ಸೆಳೆಯಿತು.

500 ಲಾಡು ವಿತರಿಸಿದ ಅಮ್ಮನಪುರ ಮಲ್ಲೇಶ್

ಚಾಮರಾಜನಗರ: ಹಸಿರುಕ್ರಾಂತಿ ಹರಿಕಾರ ಹಾಗೂ ಉಪಪ್ರಧಾನಿ ಡಾ. ಬಾಬು ಜಗಜೀವನರಾಮ್ ಅವರ ಜಯಂತ್ಯುತ್ಸವ ಮೆರವಣಿಗೆಯಲ್ಲಿ ಭಾಗವಹಿಸಿದವರಿಗೆ ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್ ಲಾಡು ವಿತರಿಸಿದರು.

ಡಾ.ಬಾಬುಜಗಜೀವನರಾಮ್ ಅವರ 115 ನೇ ಜಯಂತಿ ಅಂಗವಾಗಿ ನಗರದ ಪ್ರವಾಸಿಮಂದಿರದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ಬಾಬುಜಗಜೀವನರಾಮ್ ಭಾವಚಿತ್ರ ಮೆರವಣಿಗೆಯಲ್ಲಿ ಭಾಗವಹಿಸಿದ ಜನಪ್ರತಿನಿಧಿಗಳು, ಸರ್ಕಾರಿ ನೌಕರರು, ಕಲಾವಿದರು, ಸಾರ್ವಜನಿಕರಿಗೆ ಲಾಡು ವಿತರಿಸಿ ಬಾಬುಜಗಜೀವನರಾಂ ಜಯಂತಿಯ ಶುಭಾಶಯ ಕೋರಿದರು.

ಜಿಲ್ಲಾ ಕಾಂಗ್ರೆಸ್‌ನಿಂದ ಬಾಬೂಜಿ ಜಯಂತಿ



ಚಾ.ನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಡಾ.ಬಾಬು ಜಗಜೀವನರಾಮ್ ಅವರ 115ನೇ ಜಯಂತಿ ಆಚರಿಸಲಾಯಿತು.

ಚಾಮರಾಜನಗರ, ಏ.5(ಎಸ್‌ಎಸ್)- ಡಾ.ಬಿ.ಆರ್.ಅಂಬೇಡ್ಕರ್ ಅವರಂತೆ ಡಾ.ಬಾಬು ಜಗಜೀವನ ರಾಮ್ ಅವರೂ ಕೂಡಾ ಜಾತಿ ಮತ್ತು ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿದ್ದು, ಶೋಷಿತ ವರ್ಗದವರಿಗಾಗಿ ಶ್ರಮಿಸಿದರು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಮ್ ಅವರ 115ನೇ ಜಯಂತಿ ಕಾರ್ಯಕ್ರಮದಲ್ಲಿ ಬಾಬೂಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ದೇಶದಲ್ಲಿ ಆಹಾರ ಅಭದ್ರತೆ ಉಂಟಾದ ಸಂದರ್ಭದಲ್ಲಿ ಹಸಿರು ಕ್ರಾಂತಿ ಜಾರಿಗೆ ತಂದು ಆಹಾರ ಉತ್ಪನ್ನ ಹೆಚ್ಚಳ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯ ಎಂದರು.

ಬಾಬು ಜಗಜೀವನ ರಾಮ್ ಅವರು ಬಾಬೂಜಿ ಎಂದು ಖ್ಯಾತರಾಗಿದ್ದು, ಅವರು ಸ್ವಾತಂತ್ರ ಹೋರಾಟಗಾರರಷ್ಟೇ ಅಲ್ಲದೆ, ಸಮಾಜ ಸೇವಕರೂ ಆಗಿದ್ದರು. ಬಿಹಾರದ ದಲಿತ ಕುಟುಂಬದಲ್ಲಿ ಜನಿಸಿದ ಅವರು ನೆಹರು ಅವರ ಮಂತ್ರಿಮಂಡಲದಲ್ಲಿ ಸಚಿವರಾಗಿದ್ದರು. ಮೊರಾರ್ಜಿ ದೇಸಾಯಿ ಅವರ ಕಾಲದಲ್ಲಿ ಭಾರತದ ಉಪ ಪ್ರಧಾನಿಯೂ ಆಗಿದ್ದರು. ಜಗಜೀವನ ರಾಮ್ ಅವರು ಅಸ್ಪೃಶ್ಯತಾ ನಿವಾರಣೆ ಹೋರಾಟದ ಮಹಾನ್ ನಾಯಕರಾಗಿದ್ದರು. ಅವರ ಆದರ್ಶ ನಮಗೆಲ್ಲ ದಾರಿದೀಪ ಎಂದರು.

ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಆರ್.ಮಹದೇವು, ಚಿಕ್ಕಮಹದೇವು, ಕೆಪಿಸಿಸಿ ಸದಸ್ಯ ಸೈಯದ್ ರಫೀ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್, ಗುರುಸ್ವಾಮಿ, ಕಾನೂನು ಘಟಕ ಅಧ್ಯಕ್ಷ ನಾಗಾರ್ಜುನ್ ಪೃಥ್ವಿ, ತಾಪಂ ಮಾಜಿ ಸದಸ್ಯ ಶಿವಸ್ವಾಮಿ, ಮುಖಂಡರಾದ ಕಾಗಲವಾಡಿ ಚಂದ್ರು, ಸಿ.ಕೆ.ರವಿಕುಮಾರ್, ಆಲೂರು ಪ್ರದೀಪ, ಎಲ್.ಸುರೇಶ್, ಶ್ರೀಕಾಂತ್, ಸ್ವಾಮಿ, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಮಹಿಳಾಧ್ಯಕ್ಷೆ ಶಕುಂತಲಾ ಇತರರಿದ್ದರು.

ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬಾಬೂಜಿ ಸ್ಮರಣೆ



ಚಾಮರಾಜನಗರ, ಏ.5(ಎಸ್‌ಎಸ್)- ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಡಾ.ಬಾಬುಜಗಜೀವನರಾಂ ಅವರ 115ನೇ ಜಯಂತಿ ಆಚರಿಸಲಾಯಿತು.

ಜಿಲ್ಲಾಧ್ಯಕ್ಷ ಆರ್.ಸುಂದರ ಬಾಬು ಜಗಜೀವನ ರಾಮ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಬಳಿಕ ಮಾತನಾಡಿದ ಅವರು, ಡಾ.ಬಾಬುಜಗಜೀವನರಾವ್ ಅವರು ಹಸಿರುಕ್ರಾಂತಿ, ಆಧುನಿಕ ಕೃಷಿಗೆ ಹೆಚ್ಚು ಒತ್ತು ನೀಡುವ ಮೂಲಕ ದೇಶಕ್ಕೆ ಅಪಾರ ಕೊಡುಗೆ ನೀಡಿದರು. ಶೋಷಿತರ ಧ್ವನಿಯಾಗಿದ್ದರು ಎಂದರು.

ನಗರ ಮಂಡಲ ಪ್ರಧಾನ ಕಾರ್ಯದರ್ಶಿ ರಾಮಸಮುದ್ರ ಶಿವು ಮಾತನಾಡಿ, ಡಾ.ಬಾಬುಜಗಜೀವನರಾಮ್ ಅವರು ಬಿಹಾರದ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ರಾಜಕಾರಣಿ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪಿ.ವೃಷಭೇಂದ್ರಪ್ಪ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್, ನಗರ ಮಂಡಲ ಅಧ್ಯಕ್ಷ ರಾಜು, ಪ್ರಧಾನ ಕಾರ್ಯದರ್ಶಿ ರಾಜೇಶ್, ನಗರಸಭೆ ಅಧ್ಯಕ್ಷೆ ಆಶಾ ನಟರಾಜ್, ಮುಖಂಡ ನಟರಾಜ್, ನಗರಸಭಾ ಸದಸ್ಯರಾದ ಶಿವರಾಜ್, ವನಜಾಕ್ಷಮ್ಮ, ಜಿಲ್ಲಾ ಮಾಧ್ಯಮ ಪ್ರಮುಖ್ ಮಂಜುನಾಥ್, ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ವಿರಾಟ್ ಶಿವು, ಆನಂದ್ ಭಗೀರಥ, ಬುಲೆಟ್ ಚಂದ್ರು, ಬೃಂಗೇಶ್, ಪದ್ಮ ಇತರರು ಹಾಜರಿದ್ದರು.

ದೇಶಕ್ಕೆ ಬಾಬೂಜಿ ನೀಡಿದ ಕೊಡುಗೆ ಅನನ್ಯ



ಕೊಳ್ಳೇಗಾಲದ ಗುರುಭವನದಲ್ಲಿ ಆಯೋಜಿಸಿದ್ದ ಬಾಬು ಜಗಜೀವನರಾಂ ಅವರ ಜಯಂತಿ ಕಾರ್ಯಕ್ರಮಕ್ಕೆ ಹನೂರು ಶಾಸಕ ನರೇಂದ್ರ ಚಾಲನೆ ನೀಡಿದರು.

ಕೊಳ್ಳೇಗಾಲ,ಏ.5 (ನಾಗೇಂದ್ರ ಸ್ವಾಮಿ) - ಬಾಬು ಜಗಜೀವನರಾಮ್ ಅವರು ಅಧಿಕಾರದಲ್ಲಿದ್ದ ವೇಳೆ ತೆಗೆದುಕೊಂಡ ತೀರ್ಮಾನಗಳು ಪ್ರಜಾಪ್ರಭುತ್ವಕ್ಕೆ, ಸಂವಿಧಾನಕ್ಕೆ ಪೂರಕವಾಗಿವೆ. ಅವರು ಕೃಷಿ ತಜ್ಞರು, ಆಹಾರ ಉತ್ಪಾದನೆಗೆ ಅಂದೇ ಒತ್ತು ನೀಡಿದ್ದರು. ಇಂದು ಅವರನ್ನು ಸ್ಮರಿಸುವ ಜೊತೆಗೆ ಅವರ ಚಿಂತನೆಗಳನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಎನ್.ಮಹೇಶ್ ತಿಳಿಸಿದರು.

ನಗರದ ಗುರುಭವನದಲ್ಲಿ ಆಯೋಜಿಸಿದ್ದ ಹಸಿರು ಕ್ರಾಂತಿಯ ಹರಿಕಾರ ಬಾಬು ಜಗಜೀವನರಾಮ್ ಅವರ 115ನೇ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಾಬು ಜಗಜೀವನರಾವ್ ಅವರು ದೇಶ ಸ್ಮರಿಸುವ ಹಲವು ಪುಣ್ಯ ಕಾರ್ಯಗಳನ್ನು ಮಾಡಿದ್ದಾರೆ. ಅವುಗಳು ಇಂದಿಗೂ ಜೀವಂತವಾಗಿವೆ. ಅವರು ದೇಶಕ್ಕೆ ನೀಡಿರುವ ಕೊಡುಗೆ ಅನನ್ಯವಾದುದು. ಅವರ ಸಾಧನೆಗಳು, ಸೂರ್ಯಚಂದ್ರರಿರುವ ತನಕ ಅಜರಾಮರವಾಗಿರಲಿದೆ ಎಂದು ಶಾಸಕ ಎನ್.ಮಹೇಶ್ ಬಣ್ಣಿಸಿದರು.

ಹನೂರು ಶಾಸಕ ಆರ್.ನರೇಂದ್ರ ಮಾತನಾಡಿ, ಬಾಬು ಜಗಜೀವನರಾಮ್ ಅವರು ದೇಶಕಂಡ ಗಣ್ಯ ವ್ಯಕ್ತಿ. ಅವರು ಅಂದು ಯಾವುದೇ ಖಾತೆ ನೀಡಿದರೂ ನಿಭಾಯಿಸಿದ ಶ್ರೇಷ್ಠರು. ಕಾರ್ಮಿಕ, ರಕ್ಷಣಾ, ಕೃಷಿ ಸೇರಿದಂತೆ ಅನೇಕ ಖಾತೆಗಳನ್ನು ನಿಭಾಯಿಸುವ ಮೂಲಕ ಆ ಖಾತೆಗಳಿಗೆ ಮಹತ್ವ ತಂದುಕೊಟ್ಟರು. ಕಾರ್ಮಿಕ ಇಲಾಖೆ ಹಾಗೂ ರೈಲ್ವೆ ಇಲಾಖೆ ಸುಧಾರಣೆಗೆ ಅನೇಕ ಕ್ರಮಗಳನ್ನು ಜಾರಿಗೊಳಿಸುವ ಮೂಲಕ ಗಮನ ಸೆಳೆದಿದ್ದರು. ದೇಶ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗುತ್ತಿರುವುದು ವಿಶೇಷ, ಅವರು ದೇಶಕ್ಕಾಗಿ ನೀಡಿದ ಕೊಡುಗೆ ಅಪಾರ ಎಂದರು. ಮುಖ್ಯ ಭಾಷಣಕಾರ ಮದ್ದೂರು ದೊರೆಸ್ವಾಮಿ ಬಾಬೂಜಿ ಕುರಿತು ಮಾತನಾಡಿದರು.

ನಗರಸಭೆ ಅಧ್ಯಕ್ಷೆ ಸುಶೀಲ ಶಾಂತರಾಜು, ಕೃಷಿ ಉತ್ಪನ್ನ ಮಾರುಕಟ್ಟೆ ಅಧ್ಯಕ್ಷ ಪ್ರಭು ಸ್ವಾಮಿ, ಇಓ ಮಹೇಶ್, ಬಿಇಓ ಚಂದ್ರಪಾಟೀಲ್ ಇದ್ದರು.

ರಾಮಸಮುದ್ರದಲ್ಲಿ ಬಾಬೂಜಿ ಜಯಂತ್ಯುತ್ಸವ



ಚಾಮರಾಜನಗರ, ಏ.5-ನಗರದ ರಾಮಸಮುದ್ರ 30ನೇ ವಾರ್ಡ್‌ನಲ್ಲಿ ಡಾ.ಬಾಬು ಜಗಜೀವನರಾಮ್ 'ಯುವಕ ಸಂಘದಿಂದ ಡಾ.ಬಾಬೂಜಿ ಅವರ ಜಯಂತಿ ಆಚರಿಸಲಾಯಿತು.

ಸಂಘದ ಗೌರವಾಧ್ಯಕ್ಷ ಆರ್.ಕೆ.ಶಿವಕುಮಾರ್ ಬಾಬೂಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಡಾ.ಬಾಬು ಜಗಜೀವನರಾಮ್ ಅವರು ದೇಶದ ಉಪಪ್ರಧಾನಿಯಾಗಿದ್ದು ದೇಶಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ತತ್ವ-ಆದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಂಡು ಅವರ ಹಾದಿಯಲ್ಲಿ ಸಾಗಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಅಧ್ಯಕ್ಷ ರಾಚಯ್ಯ, ಉಪಾಧ್ಯಕ್ಷ ಲಕ್ಷ್ಮಣ್ ಕುಮಾರ್, ಪ್ರಸಾದ್, ಸುನಿ ಹಾಜರಿದ್ದರು.

ಜಗಜೀವನರಾಮ್‌ರ ಆದರ್ಶಗಳು ಪ್ರಸ್ತುತ

ಶಾಸಕ ಸಿ.ಎಸ್.ನಿರಂಜನಕುಮಾರ್



ಗುಂಡ್ಲುಪೇಟೆ, ಏ.5(ಸೋಮ್.ಜಿ)- ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಮ್ ಅವರು ಆದರ್ಶಗಳು ಇಂದಿಗೂ ಪ್ರಸ್ತುತ ಎಂದು ಶಾಸಕ ಸಿ.ಎಸ್. ನಿರಂಜನಕುಮಾರ್ ಹೇಳಿದರು.

ಪಟ್ಟಣದ ನೆಹರು ವೃತ್ತದ ಸಮೀಪದಲ್ಲಿರುವ ಪುರಸಭೆ ಬಯಲು ರಂಗ ಮಂದಿರದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಏರ್ಪಡಿಸಿದ್ದ ಡಾ. ಬಾಬು ಜಗಜೀವನರಾವ್ ಅವರ ಜಯಂತಿ ಮಹೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಸಿರು ಕ್ರಾಂತಿಯ ಹರಿಕಾರರಾಗಿದ್ದ ಬಾಬೂಜಿ ಅವರು ಬಡ್ತಿ ಮೀಸಲಾತಿ ಮತ್ತು ಕಾರ್ಮಿಕರ ಕಾಯ್ದೆಗಳ ಜನಕರು. ಹಸಿರು ಕ್ರಾಂತಿಯ ಮೂಲಕ ದೇಶದಲ್ಲಿನ ಆಹಾರ ಭದ್ರತೆ ಒದಗಿಸಿದವರು. ಅವರ ದೇಶಾಭಿಮಾನ, ಆದರ್ಶಗಳದಿಂದಿಗೂ ಪ್ರಸ್ತುತ ಎಂದರು.

ಮುಖ್ಯ ಭಾಷಣಕಾರರಾಗಿ ಮಾತನಾಡಿದ ಮುಖಂಡ ಮಣಿಕಂಠ, ಬಾಬೂಜಿ ಅವರ ಜೀವನ ಚರಿತ್ರೆ ಹಾಗೂ ಅವರ ಆಡಳಿತದ ಬಗ್ಗೆ ಸಭಿಕರಿಗೆ ವಿವರಿಸಿದರು. ಕಾರ್ಯಕ್ರಮಕ್ಕೂ ಮೊದಲು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬಾಬೂಜೀ ಅವರ ಭಾವ ಚಿತ್ರ ಮೆರವಣಿಗೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಎನ್.ಮಲ್ಲೇಶ್, ತಹಸೀಲ್ದಾರ್ ಸಿ.ಜೆ.ರವಿಶಂಕರ್, ಪುರಸಭೆ ಮುಖ್ಯಾಧಿಕಾರಿ ಆರ್. ಹೇಮಂತರಾಜು, ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ ಸೇರಿದಂತೆ ಪುರಸಭೆ ಸದಸ್ಯರು ಮತ್ತು ಮುಖಂಡರಿದ್ದರು.

ಏ.8ಕ್ಕೆ ಮಹದೇಶ್ವರ ಸ್ವಾಮಿ ಹುಂಡಿ ಎಣಿಕೆ

ಚಾಮರಾಜನಗರ, ಏ.5- ಮಲೆಮಹದೇಶ್ವರಬೆಟ್ಟದ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಗೋಲಕಗಳ ಎಣಿಕೆಯನ್ನು ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣ ಕಟ್ಟದ ಮೊದಲ ಮಹಡಿಯ ವಿಶ್ರಾಂತಿಗೃಹದಲ್ಲಿ ಏ.8ರಂದು ಬೆಳಗ್ಗೆ ಸೂಕ್ತ ಪೊಲೀಸ್ ಬಂದೋಬಸ್ತ್‌ನೊಂದಿಗೆ ನಡೆಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಐಟಿಐ ಕಾಲೇಜಿನಲ್ಲಿ ವಯೋನಿವೃತ್ತಿ ಹೊಂದಿದ ಶ್ರೀಮತಿ ಎ.ಪಿ.ಮಂಜುಳಾ ಅವರಿಗೆ ಬೀಳ್ಕೊಡುಗೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಲೂಬ್ನನಿಕತ್, ತರಬೇತಿ ಅಧಿಕಾರಿ ಪ್ರಸಾದ್, ಆಡಳಿತಾಧಿಕಾರಿ ಅನ್ನಪೂರ್ಣ ಹಾಗೂ ಕಾಲೇಜು ಸಿಬ್ಬಂದಿ ಹಾಜರಿದ್ದರು. ಚಿತ್ರ : ಕಿರಣ್‌ಬೇಗೂರು.

ಎಪಿಎಂಸಿ ಚುನಾವಣಾ ಪ್ರಚಾರಕ್ಕೆ ಚಾಲನೆ



ಚಾಮರಾಜನಗರ, ಏ.5- ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಚುನಾವಣೆಗೆ ನಾಗವಳ್ಳಿ ಸಾಮಾನ್ಯ ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಆಲೂರು ಪ್ರದೀಪ್ ಅವರು ತಮ್ಮ ಚುನಾವಣಾ ಪ್ರಚಾರಕ್ಕೆ ಕ್ಷೇತ್ರದ ಚಂದಕವಾಡಿಯಲ್ಲಿರುವ ಶ್ರೀಲಕ್ಷ್ಮೀದೇವಿ ದೇವಸ್ಥಾನದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರೊಂದಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ನಂತರ ಗ್ರಾಮದ ಮತದಾರರ ಮನೆ-ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ಏ.17 ರಂದು ಭಾನುವಾರ ನಡೆಯುವ ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಚುನಾವಣೆಗೆ ನಾಗವಳ್ಳಿ ಸಾಮಾನ್ಯ ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ತಮ್ಮ ಅಮೂಲ್ಯ ಮತವನ್ನು ತಕ್ಕಡಿ ಗುರುತಿಗೆ ಹಾಕುವ ಮೂಲಕ ನನ್ನನ್ನು ಜಯಶೀಲರನ್ನಾಗಿ ಮಾಡಿ ತಮ್ಮ ಸೇವೆಗೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಬಸವರಾಜನಾಯಕ, ಕಪನಿನಾಯಕ, ಗ್ರಾಪಂ ಮಾಜಿ ಅಧ್ಯಕ್ಷರಾದ ಡಿ.ಪುಟ್ಟಸ್ವಾಮಿ, ಸಿದ್ದಪ್ಪಾಜಿ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವು, ಆರ್.ಮಹದೇವ, ಜಿಪಂ ಮಾಜಿ ಸದಸ್ಯ ಕೆ.ಪಿ.ಸದಾಶಿವಮೂರ್ತಿ, ಮುಖಂಡರಾದ ಆಲೂರು ಪ್ರವೀಣ್, ನಾಗಯ್ಯ, ಮಹೇಶ್ ಕುದೇರು, ನಲ್ಲೂರು ಸೋಮೇಶ್ವರ್, ಹೆಬ್ಬಸೂರು ಕಂಬಲೇಶ, ವೀರಭದ್ರಸ್ವಾಮಿ, ಮಧು, ಕಮಲ್ ಖಾನ್, ತಕೀರ್, ಕಾಗಲವಾಡಿ ಶಿವಸ್ವಾಮಿ, ದೊಡ್ಡರಾಯಪೇಟೆ ಗಿರೀಶ್, ಕಾಗಲವಾಡಿ ಚಂದ್ರು, ಆಲೂರು ಗ್ರಾಪಂ ಅಧ್ಯಕ್ಷ ಎ.ಸಿ.ಮಹದೇವಸ್ವಾಮಿ, ಸಚಿನ್, ಶೇಷಣ್ಣ, ನಲ್ಲೂರು ಮಹದೇವಸ್ವಾಮಿ, ಲೋಕೇಶ್, ಹೊಂಡರಬಾಳು ರಮೇಶ್, ನಾರಾಯಣಸ್ವಾಮಿ, ಬಸವರಾಜು, ಹೆಬ್ಬಸೂರು ಗ್ರಾಪಂ ಅಧ್ಯಕ್ಷ ಅರಳೀಪುರ ಮಹದೇವಸ್ವಾಮಿ, ದಡದಹಳ್ಳಿ ರಮೇಶ್, ಶಿವಣ್ಣ, ನಿಂಗಯ್ಯ, ಕುಮಾರ್ ಇತರರಿದ್ದರು.

ಕೊರೊನಾ ವಾರಿಯರ್ಸ್ ವಜಾ ಆದೇಶ ಹಿಂಪಡೆಯಲು ಒತ್ತಾಯಿಸಿ ಪ್ರತಿಭಟನೆ



ಚಾಮರಾಜನಗರ, ಏ.5-ಕೋವಿಡ್ ಸಂದರ್ಭದಲ್ಲಿ ಕೊರೊನಾ ವಾರಿಯರ್ಸ್ ಆಗಿ ನೇಮಕಗೊಂಡಿರುವ ಜಿಲ್ಲಾಸ್ಪತ್ರೆ (ಸಿಮ್ಸ್) 110 ಶುಶ್ರೂಷಕ ಅಧಿಕಾರಿಗಳನ್ನು ಸೇವೆಯಿಂದ ವಜಾ ಮಾಡಿರುವ ಆದೇಶವನ್ನು ಹಿಂಪಡೆಯುವಂತೆ ಒತ್ತಾಯಿಸಿ ಕೋವಿಡ್ 19-20 ಬ್ಯಾಚ್‌ನ ಶುಶ್ರೂಷಕ ಅಧಿಕಾರಿಗಳು ನಗರದಲ್ಲಿ ಪ್ರತಿಭಟಿಸಿದರು.

ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟಿಸಿ, ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿ ದೇವಿ ಅವರಿಗೆ ಮನವಿ ಸಲ್ಲಿಸಿದರು.

ಕೋವಿಡ್ ಸಂದರ್ಭದಲ್ಲಿ ಕೊರೊನಾ ವಾರಿಯರ್ಸ್ ಆಗಿ ನೇಮಕಗೊಂಡಿರುವ ಜಿಲ್ಲಾಸ್ಪತ್ರೆ(ಸಿಮ್ಸ್) 110 ಶುಶ್ರೂಷಕ ಅಧಿಕಾರಿಗಳನ್ನು ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಬೇಕು. ಕಳೆದ 2 ವರ್ಷಗಳಿಂದ ಜೀವದ ಹಂಗು ತೊರೆದು ಕೊರೊನಾ ವಾರಿಯರ್ಸ್ ಆಗಿ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿರುವ ಶುಶ್ರೂಷಕ ಅಧಿಕಾರಿಗಳ ಕುಟುಂಬಗಳು ಅವರ ಸಂಬಳದಿಂದಲ್ಲೇ ಜೀವನ ಸಾಗಿಸುತ್ತಿದ್ದವೆ. ಏಕಾಏಕಿ ಸರ್ಕಾರಿ ಆದೇಶದನ್ವಯ ತಮ್ಮ ಸೇವೆಯಿಂದ ತೆಗೆಯಲು ಆದೇಶ ನೀಡಲಾಗಿದೆ. ಇದರಿಂದ ಶುಶ್ರೂಷಕ ಅಧಿಕಾರಿಗಳ ಬದುಕು ಬೀದಿಗೆ ಬಂದಂತಾಗಿದೆ ವಜಾ ಮಾಡಿರುವವರನ್ನು ಕೂಡಲೇ ಕೆಲಸಕ್ಕೆ ತೆಗೆದುಕೊಂಡು ಬೀದಿ ಪಾಲಾಗುವ ಜೀವನವನ್ನು ಸರಿಪಡಿಸಬೇಕು ಎಂದು ಪ್ರತಿಭಟನಾನಿರತರು ಒತ್ತಾಯಿಸಿದರು.

3 ತಿಂಗಳಿಂದ ಬಾಕಿಯಿರುವ ವೇತನ, ಸರ್ಕಾರ ಘೋಷಣೆ ಮಾಡಿದ ಕೋವಿಡ್ ವಿಶೇಷ ಪ್ರೋತ್ಸಾಹಧನವನ್ನು ತಕ್ಷಣವೇ ನೀಡಬೇಕು ಎಂದು ಇದೇ ವೇಳೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಭಾರತೀಯ ವಿದ್ಯಾರ್ಥಿ ಸಂಘದ ಜಿಲ್ಲಾ ಸಂಯೋಜಕ ಪರ್ವತ್‌ರಾಜ್ ಮಾತನಾಡಿ, ಕೋವಿಡ್ ಸಂದರ್ಭದಲ್ಲಿ ಕೊರೊನಾ ವಾರಿಯರ್ಸ್ ಆಗಿ ನೇಮಕಗೊಂಡಿರುವ ಶುಶ್ರೂಷಕ ಅಧಿಕಾರಿಗಳು ರಾಜ್ಯಾದ್ಯಂತ 6 ಸಾವಿರಕ್ಕೂ ಹೆಚ್ಚು ಇದ್ದು, ಜಿಲ್ಲೆಯಲ್ಲಿ 110 ಮಂದಿ ಇದ್ದಾರೆ. ಜಿಲ್ಲಾಸ್ಪತ್ರೆಯಲ್ಲಿ ಇನ್ನೂ 300-400 ಸಿಬ್ಬಂದಿ ಭರ್ತಿ ಮಾಡಬೇಕಿದೆ. ಕೋವಿಡ್ ಸಂಕಷ್ಟದಲ್ಲಿ ಸಾರ್ವಜನಿಕರ ಸೇವೆ ಸಲ್ಲಿಸಿರುವ 110 ಶುಶ್ರೂಷಕ ಅಧಿಕಾರಿಗಳನ್ನು ಮಾನವೀಯತೆ, ದೃಷ್ಟಿಯಿಂದ ಒಳಗುತ್ತಿಗೆಯಲ್ಲಿ ಮುಂದುವರಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಾಗರ್, ರವಿ, ಪ್ರದೀಪ್, ರಾಘು, ಮಧುಸೂದನ್, ಶಿಲ್ಪ, ಶಶಿ, ಶಶಿಕಲಾ, ಲೀಲಾವತಿ, ನಂದಿನಿ, ಸುಷ್ಮ, ರುಕ್ಮಿಣಿ, ಮೇಘನಾ, ಸುಶ್ಮಿತಾ, ಕಲಾವತಿ, ನಾಗಮ್ಮ, ಶೋಭ, ಲಾವಣ್ಯ ಇತರರಿದ್ದರು.

ಡಾ.ಜಿ.ಪರಮೇಶ್ವರ್ 'ಸವ್ಯಸಾಚಿ' ಕೃತಿ ಏ.10ಕ್ಕೆ ಬಿಡುಗಡೆ

ಬೆಂಗಳೂರು, ಏ.5 (ಕೆಎಂಶಿ)–ಹಿರಿಯ ರಾಜಕೀಯ ಮುತ್ಸದ್ದಿ,ಕಾಂಗ್ರೆಸ್ ನಾಯಕ,



ಮಾಜಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರ ಕುರಿತಾದ ಗೌರವ ಕೃತಿ 'ಸವ್ಯಸಾಚಿ' ಏ.10ರಂದು ಬಿಡುಗಡೆ ಯಾಗಲಿದೆ. ತುಮಕೂರಿನ ಸಿದ್ಧಾರ್ಥ ಮೆಡಿಕಲ್ ಕಾಲೇಜು ಆವರಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಗ್ರಂಥ ಬಿಡುಗಡೆಯಾಗಲಿದೆ. ಹಿರಿಯ ಸಾಹಿತಿ, ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ.ಚಂದ್ರಶೇಖರ ಕಂಬಾರ ಅವರು ಸವ್ಯಸಾಚಿ ಗ್ರಂಥವನ್ನು ಬಿಡುಗಡೆ ಮಾಡಲಿದ್ದಾರೆ. ಪುಸ್ತಕ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಖ್ಯಾತ ಸಾಹಿತಿ, ನಾಡೋಜ ಡಾ. ಬರಗೂರು ರಾಮಚಂದ್ರಪ್ಪ ವಹಿಸಲಿದ್ದು, ಡಾ.ಕೆ.ಸಿರಿ ಸುಮೇಧಾ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ನಾಡಿನ ಹಲವು ಗಣ್ಯರು, ನಾಯಕರು ಹಾಗೂ ಸಾಹಿತಿಗಳು ಡಾ.ಜಿ.ಪರಮೇಶ್ವರ್ ಅವರ ಕುರಿತು ಬರೆದಿರುವ ಲೇಖನಗಳು ಸವ್ಯಸಾಚಿ ಗ್ರಂಥದಲ್ಲಿದ್ದು ಪ್ರೊ.ಮಾದೇವ್ ಭರಣಿ ಅವರು ಇದನ್ನು ಸಂಪಾದಿಸಿದ್ದಾರೆ.

ಒಂದನೇ ಪುಟದಿಂದ

ಸ್ಪೋಕನ್ ಇಂಗ್ಲಿಷ್



ಇರುವ 562 ಶಾಲೆಗಳನ್ನು ರಾಜ್ಯ ಸರ್ಕಾರ ನಡೆಸುತ್ತಿದೆ ಎಂದು ನಾಗೇಶ್ ತಿಳಿಸಿದರು.

ಕನ್ನಡ ಶಾಲೆಗಳ ಉಳಿವಿಗೆ ತಜ್ಞರ ಸಲಹೆಗಳನ್ನು ಸೂಚನೆಗಳನ್ನು ಸ್ವೀಕರಿಸಲಾಗುತ್ತದೆ. ಎಲ್ಲ ಸಲಹೆಗಳನ್ನು ಸ್ವೀಕರಿಸಿ ಕನ್ನಡ ಉಳಿಸಿ ಬೆಳೆಸುವ ಪ್ರಯತ್ನ ಮಾಡಲಾಗುತ್ತದೆ ಎಂದರು. ಸರಸ್ವತಿ ಸಮ್ಮಾನ್ ಪುರಸ್ಕೃತ ಸಾಹಿತಿ ಎಸ್.ಎಲ್.ಭೈರಪ್ಪ, ಕಸಾಪ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ, ನಿಡುಮಾಮಿಡಿ ಮಹಾಸಂಸ್ಥಾನದ ಶ್ರೀ ವೀರಭದ್ರ ಚೆನ್ನಮಲ್ಲ ಮಹಾಸ್ವಾಮೀಜಿ, ಹುಕ್ಕೇರಿಯ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾ ಸ್ವಾಮೀಜಿ, ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಣ ಕ್ಷೇತ್ರದ ಪ್ರಮುಖರು ಉಪಸ್ಥಿತರಿದ್ದರು.

20 ಲಕ್ಷ ರೂ.ಗೆ ಹೆಚ್ಚಳ

ಹಸಿರು ಕ್ರಾಂತಿ ಮಾಡುವ ಮೂಲಕ ಕೆಲವೇ ವರ್ಷಗಳಲ್ಲಿ ದೇಶದಲ್ಲಿ ಆಹಾರದ ಸ್ವಾವಲಂಬನೆಯನ್ನು ತಂದಂತಹ ಖ್ಯಾತಿ ಅವರಿಗೆ ಸಲ್ಲುತ್ತದೆ ಎಂದರು. ಶಿಕ್ಷಣ, ಉದ್ಯೋಗ, ಸಾಮಾಜಿಕ ಗೌರವ, ಅವಕಾಶಗಳು ದೊರೆತಾಗ, ಸಮುದಾಯ ಮುಖ್ಯವಾಹಿನಿಗೆ ಬಂದಾಗ ಮಾತ್ರ ಭಾರತ ಸಮಗ್ರ ಅಭಿವೃದ್ಧಿಯಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಭೂ ಒಡೆತನ ಹೊಂದಿರುವವರಿಗೆ ಸಾಮಾಜಿಕ ಗೌರವ ದೊರೆಯುತ್ತದೆ. ಸಮುದಾಯದವರ ಭೂ ಒಡೆತನಕ್ಕೆ ಸಂಬಂಧಿಸಿದಂತೆ ಭೂ ಸುಧಾರಣಾ ಕಾಯ್ದೆ ಜಾರಿ ಮಾಡಲಾಗಿದೆ. ಯೋಜನೆಯ ಯಶಸ್ವಿ ಅನುಷ್ಠಾನದಲ್ಲಿರುವ ತೊಡಕುಗಳನ್ನು ನಿವಾರಿಸಿ ಸಮುದಾಯದವರಿಗೆ ನ್ಯಾಯ ಒದಗಿಸುವ ಕೆಲಸವನ್ನು ಮಾಡಲಾಗುವುದು ಎಂದು ಹೇಳಿದರು.

ಹೊಸ ಕಾನೂನು ಮಾಡಿಲ್ಲ

ಜೊತೆಗೆ ಪೊಲೀಸ್ ಠಾಣೆಯಿಂದ ಹಿಡಿದು ಜಿಲ್ಲಾ ಮಟ್ಟದಲ್ಲಿ ಹಿಂದೆಯೇ ಮಾಡಲಾಗಿದೆ. ಮುಂದೂ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದರು. ಸಚಿವ ಸಂಪುಟ ವಿಸ್ತರಣೆ ಬಗ್ಗೆ ಇದುವರೆಗೂ ಯಾವುದೇ ಚರ್ಚೆಯಾಗಿಲ್ಲ. ಅಮಿತ್ ಷಾ ಮತ್ತು ಜೆ.ಪಿ.ನಡ್ಡಾ ಅವರನ್ನು ಭೇಟಿಯಾದ ವೇಳೆ ವಿಚಾರ ಪ್ರಸ್ತಾಪವಾಗುವ ನಿರೀಕ್ಷೆ ಇದೆ ಎಂದರು. ಆಂಧ್ರಪ್ರದೇಶದ ಐ.ಟಿ. ಬಿ.ಟಿ ಸಚಿವ ಕೆ.ಟಿ.ರಾಮರಾವ್ ಅವರು ಮಾಡಿರುವ ಟ್ವೀಟ್ ಅತ್ಯಂತ ಹಾಸ್ಯಾಸ್ಪದವಾಗಿದೆ. ಇಡೀ ಜಗತ್ತಿನ ಜನ ಬೆಂಗಳೂರಿಗೆ ಬರುತ್ತಿದ್ದಾರೆ. ಹೆಚ್ಚಿನ ಯೂನಿಕಾರ್ನ್ ಮತ್ತು ಸ್ಟಾರ್ಟ್ ಅಪ್‌ಗಳು ಬೆಂಗಳೂರಿನಲ್ಲಿವೆ ಎಂದರು.

ಕಾರ್ಯದರ್ಶಿಯಾಗಿ ವಿಜಯೇಂದ್ರ?

ಹೊಸಪೇಟೆಯಲ್ಲಿ ಏ.16 ಮತ್ತು 17ರಂದು ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸಭೆ ನಡೆಯಲಿದ್ದು, ಸಭೆಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಸೇರಿದಂತೆ ಕೆಲವು ದೆಹಲಿ ನಾಯಕರು ಭಾಗವಹಿಸುತ್ತಿದ್ದಾರೆ. ಕಾರ್ಯಕಾರಿಣಿ ಸಭೆಯ ನಂತರ ರಾಜ್ಯ ಮಟ್ಟದಲ್ಲಿ ದೊಡ್ಡ ಬದಲಾವಣೆಗಳನ್ನು ದೆಹಲಿ ನಾಯಕರು ತೆಗೆದುಕೊಳ್ಳಲಿದ್ದಾರೆ. ಅಲ್ಲಿಯವರೆಗೂ ಮುಖ್ಯಮಂತ್ರಿ ಬದಲಾವಣೆ ಸೇರಿದಂತೆ ಯಾವುದೇ ತೀರ್ಮಾನಗಳು ಆಗುವುದಿಲ್ಲ.

ಸಂಪುಟ ಪುನರಚಿಸಲೆಂದು ಮುಖ್ಯಮಂತ್ರಿಯವರು ನಡೆಸುತ್ತಿರುವ ಪ್ರಯತ್ನಕ್ಕೂ ವರಿಷ್ಠರು ಅವಕಾಶ ನೀಡುವುದಿಲ್ಲ. ಮುಂದಿನ ವಿಧಾನಸಭಾ ಚುನಾವಣೆಯನ್ನು ಸಮರ್ಥವಾಗಿ ಎದುರಿಸುವ ಮತ್ತು ಮತದಾರರನ್ನು ಸೆಳೆಯಲು ಜಾತಿ ಸಮೀಕರಣ ಪ್ರಯೋಗವನ್ನು ಮಾಡಲು ವರಿಷ್ಠರು ಮುಂದಾಗಿದ್ದಾರೆ. ಇದರ ಮೊದಲ ಹಂತವಾಗಿ ಅಶ್ವತ್ಥನಾರಾಯಣ ಮತ್ತು ವಿಜಯೇಂದ್ರ ಅವರ ನಾಯಕತ್ವವನ್ನು ಪ್ರಯೋಗ ಮಾಡಲು ಹೊರಟಿದ್ದಾರೆ.

ವಿಜಯೇಂದ್ರ ಅವರಿಗೆ ಪಕ್ಷದಲ್ಲಿ ಪ್ರಮುಖ ಹುದ್ದೆ ನೀಡುವುದರಿಂದ ಯಡಿಯೂರಪ್ಪನವರು ಚುನಾವಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಲಿದ್ದಾರೆ ಎಂಬ ಭಾವನೆ ದೆಹಲಿ ವರಿಷ್ಠರಲ್ಲಿದೆ. ಇದೇ ಕಾರಣಕ್ಕೆ ತುಮಕೂರಿನ ಸಿದ್ಧಗಂಗಾಶ್ರೀಗಳ ಸಮಾರಂಭದ ಪೂರ್ಣ ಹೊಣೆಗಾರಿಕೆಯನ್ನು ವಿಜಯೇಂದ್ರ ವಹಿಸಿಕೊಂಡಿದ್ದರು. ಅವರ ಆಹ್ವಾನದ ಮೇರೆಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಸಮಾರಂಭಕ್ಕೆ ಆಗಮಿಸಿದ್ದಲ್ಲದೆ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡರು.

ತಮ್ಮ ಭೇಟಿ ಸಂದರ್ಭದಲ್ಲಿ ಯಡಿಯೂರಪ್ಪನವರೊಟ್ಟಿಗೆ ಗೃಹ ಸಚಿವರು ಪ್ರತ್ಯೇಕವಾಗಿ ಮಾತುಕತೆ ಮಾಡಿರುವುದನ್ನು ಇಲ್ಲಿ ಸ್ಮರಿಸಬಹುದು. ಪಕ್ಷದ ಜೊತೆಗೆ ಸರ್ಕಾರದಲ್ಲೂ ಮಹತ್ತರ ಬದಲಾವಣೆ ತರಲು ದೆಹಲಿ ನಾಯಕರು ಮುಂದಾಗಿದ್ದಾರೆ. ಕಳೆದ ವಾರ ಕೇಂದ್ರ ರೈಲ್ವೆ ಸಚಿವ ಪಿಯುಷ್ ಗೋಯಲ್ ರಾಜ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಟ್ಟಿಗೆ ಸುದೀರ್ಘ ಸಮಾಲೋಚನೆ ನಡೆಸಿದ್ದಾರೆ. ವರಿಷ್ಠರ ಸಂದೇಶವನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದಾರೆ. ಈ ಬೆಳವಣಿಗೆಯ ನಂತರ ವರಿಷ್ಠರ ಆಹ್ವಾನದ ಮೇರೆಗೆ ಮುಖ್ಯಮಂತ್ರಿಯವರು 2 ದಿನ ದೆಹಲಿ ಪ್ರವಾಸಕ್ಕೆ ತೆರಳಿದ್ದಾರೆ. ಭೇಟಿಯ ಸಂದರ್ಭದಲ್ಲಿ ಪ್ರಧಾನಿಯವರನ್ನು ಭೇಟಿ ಮಾಡುವುದೇ ಇವರ ಉದ್ದೇಶವಾಗಿದೆ. ಆದರೆ ಇದುವರೆಗೂ ಪ್ರಧಾನಿ ಕಾರ್ಯಾಲಯ ಸಮಯ ಅವಕಾಶ ನೀಡಿಲ್ಲ. ಒಟ್ಟಾರೆ ರಾಜ್ಯ ಕಾರ್ಯಕಾರಿಣಿ ಸಭೆಯ ನಂತರ ಪಕ್ಷ ಮತ್ತು ಸರ್ಕಾರದಲ್ಲಿ ಮಹತ್ತರ ಬದಲಾವಣೆಗಳನ್ನು ನಿರೀಕ್ಷಿಸಬಹುದು.

44 ಉಪನ್ಯಾಸಕರ ವರ್ಗಾವಣೆ

ಪ್ರಕಟಣೆ ನೀಡಿರುವ ಅವರು, ಇಲಾಖೆಯಿಂದ ಈ ಬಗ್ಗೆ ಸುತ್ತೋಲೆ ಹೊರಡಿಸಿದ್ದು, ವರ್ಗಾವಣೆಯಾಗಲಿರುವ ಉಪನ್ಯಾಸಕರ ಹೆಸರುಗಳನ್ನು ಪ್ರಕಟಿಸಲಾಗಿದೆ. ಇಲಾಖೆ ಇಎಂಐಎಸ್ ತಂತ್ರಾಂಶದಲ್ಲಿ ಲಭ್ಯವಿರುವ ಅಭ್ಯರ್ಥಿಗಳ ಸೇವಾ ವಿವರಗಳನ್ನು ಪರಿಗಣಿಸಿ, ಕೌನ್ಸೆಲಿಂಗ್ ಮೂಲಕ ವರ್ಗಾಯಿಸಲಾಗುವುದು. ಈ ಮಾಹಿತಿಯಲ್ಲಿ ಬದಲಾವಣೆ/ಆಕ್ಷೇಪಣೆ ಇದ್ದಲ್ಲಿ ಏ.6ರ ಒಳಗೆ ಇಲಾಖೆಯ ಇ–ಮೇಲ್ dce. postshifting 2022@gmail.comಗೆ ಸಲ್ಲಿಸಬಹುದು ಎಂದಿದ್ದಾರೆ. ಇದನ್ನು ಆಧರಿಸಿ, ಏ.7ರಂದು ಹುದ್ದೆ ಸ್ಥಳಾಂತರ ಮತ್ತು ಹೆಚ್ಚುವರಿ ಕಾರ್ಯಭಾರ ಲಭ್ಯವಿರುವ ಕಾಲೇಜುಗಳ ಅಂತಿಮ ಪಟ್ಟಿ ಪ್ರಕಟಿಸಲಾಗುವುದು. ಮರುದಿನ, ಅಂದರೆ ಏ.8ರಂದು ಕೌನ್ಸೆಲಿಂಗ್ ನಡೆಸಲಾಗುವುದು ಎಂದು ತಿಳಿಸಿದ್ದಾರೆ. ನಿಯಮಗಳ ಪ್ರಕಾರ, ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಲೆ, ವಾಣಿಜ್ಯ ಮತ್ತು ಭಾಷಾ ವಿಷಯಗಳ ಬೋಧಕರಿಗೆ ವಾರಕ್ಕೆ 16 ಗಂಟೆ ಮತ್ತು ಪ್ರಾಯೋಗಿಕ ತರಗತಿಗಳಿರುವ ವಿಷಯಗಳ ಬೋಧಕರಿಗೆ 20 ಗಂಟೆಗಳ ಕಾರ್ಯಭಾರ ಇರಬೇಕು ಎಂದು ವಿವರಿಸಿದ್ದಾರೆ. ವರ್ಗಾವಣೆ ಪ್ರಕ್ರಿಯೆಯಲ್ಲಿ ಸಾಧ್ಯವಾದಷ್ಟೂ ಮಟ್ಟಿಗೆ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಕಾಲೇಜಿರುವ ವಲಯದೊಳಗೇ ವರ್ಗಾವಣೆ ಮಾಡಲಾಗುವುದು ಎಂದು ಆಯುಕ್ತರು ಹೇಳಿದ್ದಾರೆ.

ಸಂಸದ ಪ್ರತಾಪ್ ಸಿಂಹ ಆಹ್ವಾನ

ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಪ್ರಸಿದ್ಧ ಪಡೆಯುತ್ತಿರುವ ಯೋಗ ಕಲೆಗೆ ಉತ್ತೇಜನ ನೀಡುತ್ತಿದ್ದಾರೆ. ವಿಶ್ವಸಂಸ್ಥೆಯು 'ಜೂನ್ 21' ಅನ್ನು 'ಅಂತಾರಾಷ್ಟ್ರೀಯ ಯೋಗ ದಿನ' ಎಂದು ಘೋಷಿಸಿದೆ. ಆ ಮೂಲಕ ಉನ್ನತ ಮಟ್ಟದ ವಿದ್ಯೆಯನ್ನು ಜಗತ್ತಿಗೆ ನೀಡಿದ ಹಿರಿಮೆಯನ್ನು ಭಾರತ ಹೊಂದಿದೆ. 'ಅಂತಾರಾಷ್ಟ್ರೀಯ ಯೋಗ ದಿನ' 2015ರಲ್ಲಿ ಪ್ರಾರಂಭವಾದಾಗಿನಿಂದಲೂ ಮೈಸೂರಿನಲ್ಲಿ ಈ ದಿನವನ್ನು ಸೂಕ್ತ ರೀತಿಯಲ್ಲಿ ಆಚರಿಸಲಾಗುತ್ತಿದೆ. ಆ ಮೂಲಕ ಸ್ಥಳೀಯವಾಗಿ ಸಮಾಜದ ಎಲ್ಲಾ ವರ್ಗಗಳ ಜನರಿಗೂ ಜೀವನದಲ್ಲಿ ಸ್ವಾಸ್ಥ್ಯ ಸಂಸ್ಕೃತಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವ ಸಾಮಾಜಿಕ ಜವಾಬ್ದಾರಿ ಮೆರೆಯಲಾಗುತ್ತಿದೆ. ಮೈಸೂರಿನಲ್ಲಿ 2017ರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಂದು 55,506ಕ್ಕೂ ಅಧಿಕ ಮಂದಿ ಸಾಮೂಹಿಕ ಯೋಗ ಪ್ರದರ್ಶಿಸಿದ್ದ ಗಿನ್ನಿಸ್ ದಾಖಲೆಯಾಗಿತ್ತು. ಈ ದಾಖಲೆಯ ಶ್ರೇಯಸ್ಸನ್ನು ಪ್ರಧಾನಿಗಳಾದ ತಮಗೆ ಅರ್ಪಿಸಿದ್ದೇವೆ. ರಾಜಸ್ಥಾನದ ಕೋಟಾದಲ್ಲಿ 2018ರಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ 1,00,984 ಮಂದಿ ಭಾಗವಹಿಸಿದ್ದು, ಆ ಮೂಲಕ ಮೈಸೂರಿನ ದಾಖಲೆ ಮುರಿಯಲಾಗಿದೆ. ಈ ವರ್ಷ ಮೈಸೂರಿನಲ್ಲಿ ಹಿಂದಿನ ಗಿನ್ನಿಸ್ ದಾಖಲೆ ಮೀರಿಸಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಇಂತಹ ಬೃಹತ್ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪ್ರಧಾನಿಗಳಾದ ತಾವು ಆಗಮಿಸಬೇಕೆಂದು ಸಂಸದರು ಮನವಿಯಲ್ಲಿ ಕೋರಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಂಸದ ಪ್ರತಾಪ್ ಸಿಂಹ ಪತ್ನಿ ಅರ್ಪಿತಾ ಸಿಂಹ, ಪುತ್ರಿ ವಿಪಂಚಿ ಸಿಂಹ ಇದ್ದರು.

ಏಕತೆಯ ಸಂದೇಶ ಸಾರಿದ 'ಮಾನವ ಸರಪಳಿ'

ಪ್ರಗತಿಪರ ಹೋರಾಟಗಾರರು, ವಿವಿಧ ಸಂಘ-ಸಂಸ್ಥೆಗಳಿಂದ ಗಮನ ಸೆಳೆದ ಹೋರಾಟ



ಮೈಸೂರು,ಏ.5(ಎಂಟಿವೈ)– ರಾಜ್ಯದಲ್ಲಿ ಕೋಮು ಸೌಹಾರ್ದತೆ ಕಾಪಾಡುವ ನಿಟ್ಟಿನಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಮೈಸೂರಲ್ಲಿ ಏರ್ಪಡಿಸಲಾಗಿದ್ದ 'ಮಾನವ ಸರಪಳಿ' ಯಲ್ಲಿ ಪ್ರಗತಿಪರ ಹೋರಾಟಗಾರರು ಸೇರಿದಂತೆ ವಿವಿಧ ಸಂಘಟನೆ ಹಾಗೂ ಧರ್ಮದ ಮುಖಂಡರು ಪಾಲ್ಗೊಂಡು ಏಕತೆಯ ಸಂದೇಶ ಸಾರಿದರು.

ಮೈಸೂರಿನ ಚಿಕ್ಕಗಡಿಯಾರ ವೃತ್ತದ ಬಳಿ ಪ್ರಗತಿಪರ ಸಂಘಟನೆಗಳ ಒಕ್ಕೂಟ 'ಸರ್ವ ಜನಾಂಗದ ಶಾಂತಿಯ ತೋಟದ ಉಳಿವಿಗಾಗಿ ಮಾನವ ಸರಪಳಿ' ಘೋಷಣೆಯೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾತಿ–ಭೇದ ಮರೆತು ಒಬ್ಬರನ್ನೊಬ್ಬರು ಕೈ ಹಿಡಿದು, ನಾವೆಲ್ಲಾ ಭಾರತೀಯರು, ಜಾತಿ ಬಿಡಿ, ಮತ ಬಿಡಿ, ಮಾನವತೆಗೆ ಜೀವ ಕೊಡಿ, ಕೋಮುವಾದ ಅಳಿಯಲಿ ಮಾನವತೆ ಉಳಿಯಲಿ, ನಮ್ಮಲ್ಲಿ ಇಲ್ಲ ಹಿಂದೂ ರಕ್ತ ಮುಸ್ಲಿಂ ರಕ್ತ ನಮ್ಮಲ್ಲಿರುವುದು ಮಾನವ ರಕ್ತ ಎಂಬ ಘೋಷಣೆ ಕೂಗಿ ಗಮನ ಸೆಳೆದರು.

ರಾಜ್ಯದಲ್ಲಿ ಹಿಜಾಬ್ ವಿವಾದ, ಹಲಾಲ್ ಕಟ್, ಜಟ್ಕಾ ಕಟ್, ಇದೀಗ ಮಸೀದಿಗಳಲ್ಲಿ ಮೈಕ್‌ನಲ್ಲಿ ನಮಾಜ್ ಮಾಡುವ ವಿಚಾರವನ್ನು ಮುಂದಿಟ್ಟುಕೊಂಡು ಸಾಮರಸ್ಯ ಕದಡುವ ಸಂಚು ನಡೆಸಲಾಗುತ್ತಿದೆ. ಕೆಲವು ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು ಹಿಂದೂ–ಮುಸ್ಲಿಂರ ನಡುವೆ ಸಂಘರ್ಷ ಏರ್ಪಡಿಸುವ ಹುನ್ನಾರ ನಡೆಸಲಾಗುತ್ತಿದೆ. ಆ ಮೂಲಕ ರಾಜಕೀಯ ಲಾಭ' ಮಾಡಿಕೊಳ್ಳುವ ಸಂಚು ಮಾಡಲೆಂದು ಕೆಲವರು ನಿರತರಾಗಿದ್ದಾರೆ. ಹೇಗಾದರೂ ಮಾಡಿ ಕೋಮು ಗಲಭೆ ಸೃಷ್ಟಿಸಬೇಕೆಂದು ಮಗ್ನರಾಗಿದ್ದಾರೆ ಎಂದು ಹೋರಾಟಗಾರರು ಆಪಾದಿಸಿದರು.

ಈ ಹಿನ್ನೆಲೆಯಲ್ಲಿ ಸರ್ವ ಜನಾಂಗದ ತೋಟವಾಗಿರುವ ನಮ್ಮ ನಾಡಲ್ಲಿ ಶಾಂತಿ ಕಾಪಾಡುವ ಅವಶ್ಯಕತೆ ಇದೆ. ಜನರು ಕೋಮು ದಳ್ಳುರಿ ಮಾತುಗಳಿಗೆ ಮನ್ನಣೆ ನೀಡಬಾರದು. ನೂರಾರು ವರ್ಷಗಳಿಂದ ಹಿಂದೂ–ಮುಸ್ಲಿಂರು ಸಹೋದರತೆಯಿಂದ ಬಾಳ್ವೆ ನಡೆಸುತ್ತಿದ್ದಾರೆ. ಆದರೆ ಹುಳಿ ಹಿಂಡುವ ಕೆಲಸ ನಡೆಯುತ್ತಿದೆ ಎಂದು ಮಾನವ ಸರಪಳಿಯಲ್ಲಿ ಪಾಲ್ಗೊಂಡಿದ್ದವರು ಆರೋಪಿಸಿದರು.

ಇದೇ ವೇಳೆ ಪ್ರಗತಿಪರ ಹೋರಾಟಗಾರ ಪ.ಮಲ್ಲೇಶ್ ಕರಪತ್ರದಲ್ಲಿ ಮುದ್ರಿತವಾದ ವಾಕ್ಯಗಳನ್ನು ಓದುವ ಮೂಲಕ ಗಮನ ಸೆಳೆದರು. ಸರ್ವ ಜನಾಂಗದ ಶಾಂತಿಯ ತೋಟವಾಗಿದ್ದ ಕನ್ನಡ ನಾಡಿನಲ್ಲಿ ಧರ್ಮದ ಭೂತ ನೃತ್ಯ ಆರಂಭವಾಗಿದೆ. ಹಿಂದೂ–ಮುಸ್ಲಿಂರ ನಡುವೆ ಕಂದಕ ತೋಡಿ, ರಾಜ್ಯ ಸೌಹಾರ್ದಕ್ಕೆ ಬೆಂಕಿ ಇಡುವ ಕೆಲಸವನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡಲಾಗುತ್ತಿದೆ ಎಂದರು.

ಹಿಜಾಬ್ ಮೂಲಕ ಆರಂಭಗೊಂಡ ಮುಸ್ಲಿಂರ ವಿರುದ್ಧದ ರಾಜಕೀಯ ಪಗಡೆಯಾಟ, ಜಾತ್ರೆ–ಜನ ಜಂಗುಳಿಗಳಲ್ಲಿ ಅವರ ವ್ಯಾಪಾರ ವಹಿವಾಟನ್ನು ನಿರ್ಬಂಧಿಸುವ ವರೆಗೆ, ಮಾಂಸ ಮಾರಾಟದ ಹಲಾಲ್ ತನಕ ಮುಂದುವರಿದಿದೆ. ಇಷ್ಟಕ್ಕೇ ಸುಮ್ಮನಾಗದೇ ಇನ್ನೂರೈವತ್ತು ವರ್ಷಗಳ ಚರಿತ್ರೆಯನ್ನೇ ತಿರುಚಲಾಗುತ್ತಿರುವುದು ಖಂಡನೀಯ. ಇದು ಭಾರತ. ಇಲ್ಲಿರುವ ಎಲ್ಲರೂ ಭಾರತೀಯರು. ಜಾತಿಯಾಧಾರಿತವಾದ ಎಲ್ಲಾ ಧರ್ಮಗಳೂ ಅವರವರ ಮಂದಿರ, ಮಸೀದಿ, ಇಗರ್ಜಿಗಳಿಗಷ್ಟೇ ಸೀಮಿತವಾಗಬೇಕೆಂಬುದೇ ನಮ್ಮೆಲ್ಲರ ಆಶಯ. ನಾವೆಲ್ಲರೂ ಮೊದಲು ಮನುಷ್ಯರು. ಮಾನವೀಯತೆಯೇ ನಮ್ಮೆಲ್ಲರ ಮಹಾ ಧರ್ಮ. ಸಂವಿಧಾನವೇ ಈ ಮಣ್ಣಿನ ಸರ್ವಶ್ರೇಷ್ಠ ಗ್ರಂಥ ಎಂದು ನುಡಿದರು.

ರಂಗಕರ್ಮಿ ಸಿ.ಬಸವಲಿಂಗಯ್ಯ ಮಾತನಾಡಿ, ಎಲ್ಲ ಜನಾಂಗಗಳ ಎಲ್ಲ ಜಾತಿಯ ಜನರ ತೋಟಕ್ಕೆ ಬೆಂಕಿ ಹಾಕಲಾಗುತ್ತಿದೆ. ನಿರುದ್ಯೋಗ, ಬೆಲೆ ಏರಿಕೆ ಸಂಗತಿಗಳಿಂದ ಜನರ ಮನಸ್ಸನ್ನು ಬೇರೆಡೆ ಸೆಳೆಯಲು ಹಿಜಾಬ್, ಹಲಾಲ್ ಸೇರಿದಂತೆ ಭಾವನಾತ್ಮಕ ವಿಷಯಗಳನ್ನು ಮುನ್ನೆಲೆಗೆ ತರಲಾಗುತ್ತಿದೆ. ಇದರ ವಿರುದ್ಧ ಜನರು ಎಚ್ಚೆತ್ತುಕೊಳ್ಳದಿದ್ದರೆ ಅಖಂಡ ಭಾರತ ಕಳೆದುಕೊಳ್ಳಬೇಕಾಗುತ್ತದೆ ಎಂದು ವಿಷಾದಿಸಿದರು.

ಮುಖಂಡ ಸೈಯದ್ ಅಲೀಂ ಮಾತನಾಡಿ, ಭಾರತದ ಬ್ಯೂಟಿ, ವಿಶ್ವದಲ್ಲಿ ಎಲ್ಲಿಯೂ ಇಲ್ಲ. ಪ್ರೀತಿ, ವಿಶ್ವಾಸ, ಸಹಬಾಳ್ವೆಗೆ ಭಾರತ ಹೆಸರುವಾಸಿ. ಈಚೆಗಿನ ದ್ವೇಷಮಯ ಸಂಘರ್ಷಗಳು ಪ್ರೀತಿ, ವಿಶ್ವಾಸದ ಬಾಳ್ವೆಗೆ ಧಕ್ಕೆ ತರುತ್ತಿವೆ ಇದು ಅಪಾಯಕಾರಿ. ಪ್ರೀತಿ, ವಿಶ್ವಾಸ ಉಳಿಸಲು ಮಾನವ ಸರಪಳಿ ರಚಿಸಿರುವುದು ಮಹತ್ ಕಾರ್ಯ ಎಂದರು.

ಈ ಸಂದರ್ಭದಲ್ಲಿ ಹೋರಾಟಗಾರರಾದ ಬೆಟ್ಟಯ್ಯ ಕೋಟೆ, ಬಸವಲಿಂಗಯ್ಯ, ಉಗ್ರನರಸಿಂಹೇಗೌಡ, ಜಿ.ಪಿ.ಬಸವರಾಜ್, ಹೊಸಕೋಟೆ ಬಸವರಾಜು, ನಾ.ದಿವಾಕರ, ಬಿ.ರವಿ, ಪಂಡಿತಾರಾಧ್ಯ, ಜನಾರ್ಧನ್, ಜಗದೀಶ್ ಸೂರ್ಯ, ರತಿರಾವ್, ಲಕ್ಷ್ಮೀನಾರಾಯಣ, ಕಲ್ಲಹಳ್ಳಿ ಕುಮಾರ್, ಚೋರನಹಳ್ಳಿ ಶಿವಣ್ಣ, ಕೆ.ಆರ್.ಗೋಪಾಲಕೃಷ್ಣ, ಪ್ರೊ.ಮಹೇಶ್ಚಂದ್ರಗುರು, ಕೆ.ಎಸ್.ಶಿವರಾಮ್, ಎನ್.ಪುನೀತ್ ಅಶೋಕಪುರಂ, ಮಹೇಶ್ ಸೋಸ್ಲೆ, ಪ್ರೊ.ಕಾಳಚನ್ನೇಗೌಡ, ಅಭಿರುಚಿ ಗಣೇಶ್, ಶಿವಲಿಂಗಯ್ಯ, ಕಲೀಂ ಉಲ್ಲಾ, ದ್ಯಾವಪ್ಪನಾಯಕ, ಟಿ.ಆರ್.ಸುನಿಲ್, ಭಾಸ್ಕರ್ ಮುಂತಾದವರು ಪಾಲ್ಗೊಂಡಿದ್ದರು.

ಕೆಲಸದಿಂದ ಕೊರೊನಾ ವಾರಿಯರ್ಸ್‌ಗಳ ಬಿಡುಗಡೆ

ವೈದ್ಯಕೀಯ ಸಿಬ್ಬಂದಿ ಪ್ರತಿಭಟನೆ



ಮೈಸೂರು,ಏ.5(ಎಂಟಿವೈ)– ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡುವ ಮಹತ್ತರ ಕಾರ್ಯ ನಿರ್ವಹಿಸಿದ ಕೊರೊನಾ ವಾರಿಯರ್ಸ್‌ಗಳನ್ನು ಕೆಲಸದಿಂದ ಬಿಡುಗಡೆಗೊಳಿಸಿರುವುದನ್ನು ಖಂಡಿಸಿ, ಕರ್ನಾಟಕ ಸಂಯುಕ್ತ ಆರೋಗ್ಯ ಇಲಾಖೆ ಗುತ್ತಿಗೆ ನೌಕರರ ಸಂಘದ ಆಶ್ರಯದಲ್ಲಿ ವೈದ್ಯಕೀಯ ಸಿಬ್ಬಂದಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಮಂಗಳವಾರ ಪ್ರತಿಭಟನೆ ನಡೆಸಿದ ಕೊರೊನಾ ವಾರಿಯರ್ಸ್‌ಗಳು ಕೊರೊನಾ ಸೋಂಕು ಸಮಾಜಕ್ಕೆ ಹರಡಿದ್ದ ಸಂದರ್ಭದಲ್ಲಿ ಸಕಾಲಕ್ಕೆ ಚಿಕಿತ್ಸೆ ನೀಡಿ, ಸಾವಿನ ಪ್ರಮಾಣ ನಿಯಂತ್ರಣ ಮಾಡುವಲ್ಲಿ ಶ್ರಮಿಸಿದ ಕೊರೊನಾ ವಾರಿಯರ್ಸ್‌ಗಳ ಕಾರ್ಯಕ್ಕೆ ಬೆಲೆ ಕಟ್ಟಲಾಗುವುದಿಲ್ಲ. ಕೊರೊನಾ ವಾರಿಯರ್ಸ್‌ಗಳ ಸೇವೆಯ ಬಗ್ಗೆ ಅಧಿಕಾರಿಗಳು ಈ ಹಿಂದೆ ಪ್ರಶಂಸೆ ವ್ಯಕ್ತಪಡಿಸಿದ್ದರು. ರಾಜಕಾರಣಿಗಳು ನಮ್ಮ ಸೇವೆಯನ್ನು ಮುಕ್ತ ಕಂಠದಿಂದ ಹೊಗಳಿದ್ದರು. ಆದರೆ ಇದೀಗ ಕೊರೊನಾ ವಾರಿಯರ್ಸ್‌ಗಳನ್ನು ಸೇವೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕೊರೊನಾ ಉಲ್ಬಣದ ವೇಳೆ 6 ಸಾವಿರಕ್ಕೂ ಹೆಚ್ಚು ಡಾಕ್ಟರ್ಸ್, ಸ್ಟಾಫ್ ನರ್ಸ್, ಲ್ಯಾಬ್ ಟೆಕ್ನಿಷಿಯನ್, ಸ್ವಾಬ್ ಕಲೆಕ್ಷನ್ ಸಿಬ್ಬಂದಿ ಕೆಲಸಕ್ಕೆ ಸೇರಿಸಿಕೊಳ್ಳಲಾಗಿತ್ತು. ಜೀವದ ಹಂಗು ತೊರೆದು ಕೆಲಸ ಮಾಡಿದ್ದೆವು. ಈಗ ಕೊರೊನಾ ಪ್ರಕರಣ ಇಳಿಮುಖವಾಗಿದೆ ಎಂಬ ಕಾರಣಕ್ಕಾಗಿ ನಿರ್ದಾಕ್ಷಿಣ್ಯವಾಗಿ ಕೆಲಸದಿಂದ ವಜಾ ಮಾಡಿರುವುದು ಖಂಡನೀಯ. ನಾಡಿನ ಜನರಿಗೆ ಹಗಲಿರುಳು ಸೇವೆ ಮಾಡಿರುವುದನ್ನು ಪರಿಗಣಿಸದೇ ನಮ್ಮನ್ನು ಬೀದಿಪಾಲು ಮಾಡಲಾಗಿದೆ. ರಾಜ್ಯ ಸರ್ಕಾರ ಈ ನಿರ್ಧಾರವನ್ನು ಹಿಂಪಡೆಯಬೇಕು. ಕೊರೊನಾ ವಾರಿಯರ್ಸ್‌ಗಳಿಗೆ ಮತ್ತೆ ಕೆಲಸ ಕೊಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಸಂಯುಕ್ತ ಆರೋಗ್ಯ ಇಲಾಖೆ ಗುತ್ತಿಗೆ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಪುನೀತ್ ರಾಜ್ ಸೇರಿದಂತೆ ಸೇವೆಯಿಂದ ಬಿಡುಗಡೆಗೊಂಡಿರುವ ವೈದ್ಯಕೀಯ ಸಿಬ್ಬಂದಿಗಳು ಪಾಲ್ಗೊಂಡಿದ್ದರು.


ಮನೆ ಮುಂದೆ ನಿಲ್ಲಿಸಿದ್ದ 2 ಕಾರುಗಳಿಗೆ ಪೆಟ್ರೋಲ್ ಸುರಿದು ಬೆಂಕಿ

● ರಾಘವೇಂದ್ರನಗರದಲ್ಲಿ ಸೋಮವಾರ ಮುಂಜಾನೆ ದುಷ್ಕೃತ್ಯ ● ಸಿಸಿ ಕ್ಯಾಮರಾದಲ್ಲಿ ಸೆರೆಯಾದ ದೃಶ್ಯ ವೈರಲ್

ಮೈಸೂರು, ಏ.5(ಆರ್‌ಕೆ)– ಮನೆ ಮುಂದೆ ನಿಂತಿದ್ದ ಎರಡು ಕಾರುಗಳಿಗೆ ಅಪರಿಚಿತನೋರ್ವ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿರುವ ಘಟನೆ ಮೈಸೂರಿನ ರಾಘವೇಂದ್ರನಗರದಲ್ಲಿ ಸೋಮವಾರ ಮುಂಜಾನೆ ಸಂಭವಿಸಿದೆ.

ಸುರೇಂದ್ರ ಎಂಬುವರಿಗೆ ಸೇರಿದವು ಎನ್ನಲಾದ ಕಾರುಗಳಿಗೆ ಅಂದು ಮುಂಜಾನೆ ಸುಮಾರು 1.45ಗಂಟೆ ವೇಳೆಗೆ ಕ್ಯಾನ್‌ನಲ್ಲಿ ಪೆಟ್ರೋಲ್ ತಂದು ಸುರಿದ ವ್ಯಕ್ತಿ ನಂತರ ಬೆಂಕಿ ಹಚ್ಚಿದ ದೃಶ್ಯ ಅಲ್ಲಿನ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಇದೀಗ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಆದರೆ ಘಟನೆ ಬಗ್ಗೆ ಮಾಲೀಕರು ದೂರು ನೀಡದ ಕಾರಣ ಪ್ರಕರಣ ದಾಖಲಿಸಿಲ್ಲ ಎಂದು ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಜಿ.ಎನ್.ಶ್ರೀಕಾಂತ್ ತಿಳಿಸಿದ್ದಾರೆ. ಘಟನೆಯಿಂದ ಕಾರಿನ ಭಾಗಶಃ ಟಾಪ್ ಸುಟ್ಟು ಹೋಗಿದೆ ಎಂದು ಹೇಳಲಾಗುತ್ತಿದ್ದು, ವೈಯಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ಈ ಕೃತ್ಯ ಎಸಗಿರಬಹುದೆಂದು ಶಂಕಿಸಲಾಗಿದೆ.



ಕೆಪಿಸಿಸಿ ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಸಿ.ನರೇಂದ್ರ ಅವರಿಗೆ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಅಭಿನಂದಿಸಿ ಹುಟ್ಟು ಹಬ್ಬವನ್ನ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಹಿನಕಲ್ ಮಂಜು, ಪ್ರಧಾನ ಕಾರ್ಯದರ್ಶಿಗಳಾದ ಧನಗಳ್ಳಿ ಪ್ರವೀಣ್, ಬಿಳಿಕೆರೆ ಸ್ವಾಮಿ, ಹೂಟಗಳ್ಳಿ ನವೀನ್, ಕೆಪಿಸಿಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಗೌತಮ್ ಬಾಲಾಜಿ, ಚಾಮುಂಡೇಶ್ವರಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ವಿನೋದ್, ಇಲವಾಲ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಸಂತೋಷ್, ಮುಖಂಡರಾದ ಬಸವರಾಜು, ಮಹೇಶ್, ಶೇಖರ್ ಇತರರು ಇದ್ದರು.



ಹುಟ್ಟುಹಬ್ಬ ಆಚರಿಸಿಕೊಂಡ ನಾಗವಾಲ ಗ್ರಾಪಂ ಅಧ್ಯಕ್ಷ ಹಾಗೂ ಕೆಪಿಸಿಸಿ ಕಾರ್ಯದರ್ಶಿ ಸಿ.ನರೇಂದ್ರ ಅವರನ್ನು ಡಿಸಿಸಿ ಕಾರ್ಯದರ್ಶಿ ಹಾಗೂ ಮಾಜಿ ಗ್ರಾಪಂ ಸದಸ್ಯ ಹುಯಿಲಾಳು ರಾಮಸ್ವಾಮಿ ಅಭಿನಂದಿಸಿ, ಶುಭ ಕೋರಿದರು. ಈ ವೇಳೆ ಹುಯಿಲಾಳು ಮಂಜುನಾಥ್, ಮಂಜುನಾಥ್ ಪ್ರಸಾದ್, ಸತೀಶ್ ಇದ್ದರು.

ಭಾರೀ ಸೈಲೆನ್ಸರ್ ಸದ್ದು; ಮೈಸೂರಲ್ಲಿ ಮುಂದುವರಿದ ಕಾರ್ಯಾಚರಣೆ

100ಕ್ಕೂ ಹೆಚ್ಚು ಪ್ರಕರಣ ದಾಖಲು; ದಂಡ ಕಟ್ಟಿದ್ದರೂ ಸರಿಪಡಿಸಿದ ಸೈಲೆನ್ಸರ್ ಅಳವಡಿಕೆ ನಂತರವೇ ವಾಹನ ಬಿಡುಗಡೆ



ಮೈಸೂರು, ಏ.5(ಆರ್‌ಕೆ)– ಭಾರೀ ಸದ್ದು ಮಾಡುವ ಸೈಲೆನ್ಸರ್‌ವುಳ್ಳ ಬೈಕುಗಳ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ಮೈಸೂರಿನ ಸಂಚಾರ ಪೊಲೀಸರು, ದಂಡ ಪಾವತಿಸಿಕೊಂಡು ದೋಷಪೂರಿತ ಸೈಲೆನ್ಸರ್ ಸರಿಪಡಿಸಿದ ನಂತರವಷ್ಟೇ ಅಂತಹ ವಾಹನಗಳನ್ನು ಬಿಟ್ಟು ಕಳುಹಿಸುತ್ತಿದ್ದಾರೆ. ಬುಲೆಟ್, ಆರ್‌ಎಕ್ಸ್ ಯಮಹಾ, ಡ್ಯೂಕ್‌ನಂತಹ ದುಬಾರಿ ಬೆಲೆಯ ಬೈಕುಗಳ ಸೈಲೆನ್ಸರ್ ಮಫ್ಲರ್ ತೆಗೆದು ಭಾರೀ ಸದ್ದುಮಾಡುವಂತೆ ಪರಿವರ್ತಿಸಿಕೊಂಡು ಯುವಕರು ಸವಾರಿ ಮಾಡುವ ಹಾವಳಿ ಇತ್ತೀಚೆಗೆ ಜಾಸ್ತಿಯಾಗಿದ್ದು, ಅದರಿಂದ ರೋಗಿಗಳು, ಹಿರಿಯ ನಾಗರಿಕರು, ಮಕ್ಕಳಿಗೆ ತೀವ್ರ ತೊಂದರೆಯಾಗುತ್ತಿತ್ತು.

ಸರ್ಕಲ್‌ಗಳು, ಮುಖ್ಯ ರಸ್ತೆಗಳಲ್ಲಿ ಪೊಲೀಸರಿದ್ದರೂ ಲೆಕ್ಕಿಸದೇ ಭಾರೀ ಸದ್ದುಮಾಡಿಕೊಂಡು ಯುವಕರು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ಇವುಗಳ ಬಗ್ಗೆ ಸಾರ್ವಜನಿಕರಿಂದಲೂ ವ್ಯಾಪಕ ದೂರುಗಳು ಕೇಳಿ ಬಂದಿದ್ದವು. ಈ ಹಾವಳಿಗೆ ಕಡಿವಾಣ ಹಾಕಲು ಸಂಚಾರ ಠಾಣೆ ಪೊಲೀಸರು, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರ ನಿರ್ದೇಶನದಂತೆ ಸೋಮವಾರದಿಂದ ಕಾರ್ಯಾಚರಣೆ ಆರಂಭಿಸಿದ್ದಾರೆ.

ಮೊದಲ ದಿನ (ಏ.4)ವೇ ವಿವಿಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲೇ 14 ಪ್ರಕರಣ ದಾಖಲಿಸಿ ಭಾರೀ ಶಬ್ದ ಮಾಡುವ ಬೈಕುಗಳನ್ನು ವಶಪಡಿಸಿಕೊಂಡು, ದಂಡ ಪಾವತಿಸಿಕೊಂಡು, ಪೊಲೀಸ್ ಠಾಣೆ ಆವರಣದಲ್ಲಿ ಮೆಕ್ಯಾನಿಕ್ ಕರೆಸಿ ಸೈಲೆನ್ಸರ್ ಸರಿಪಡಿಸಿದ ನಂತರವಷ್ಟೇ ವಾಹನಗಳನ್ನು ಆರ್‌ಸಿ ಮಾಲೀಕರಿಗೆ ಹಸ್ತಾಂತರಿಸಲಾಗುತ್ತಿದೆ.

> "ಕಂಪನಿಯಿಂದ ಬಂದಿರುವ ಬೈಕ್‌ಗಳ ಸೈಲೆನ್ಸರ್ ಮಫ್ಲರ್ ತೆಗೆದು ಹೆಚ್ಚು ಶಬ್ದ ಬರುಮಂತೆ ಪರಿವರ್ತನೆ ಮಾಡುತ್ತಿರುವವರ ಹಾವಳಿ ಮಿತಿ ಮೀರಿದ್ದು, ಅದರಿಂದ ನಾಗರಿಕರು, ರೋಗಿಗಳು, ವಯಸ್ಸಾದವರು ಮತ್ತು ಮಕ್ಕಳಿಗೆ ತೀವ್ರ ತೊಂದರೆಯಾಗುತ್ತಿತ್ತು. ವಾಯುಮಾಲಿನ್ಯದ ಜೊತೆಗೆ ಶಬ್ದಮಾಲಿನ್ಯವೂ ಹೆಚ್ಚಾಗುತ್ತಿದ್ದರಿಂದ ಈ ಹಾವಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಮೈಸೂರು ನಗರದಲ್ಲಿ ಕಾರ್ಯಾಚರಣೆ ಮಾಡುತ್ತಿದ್ದೇವೆ. ಬೈಕು, ಕಾರುಗಳಲ್ಲಿ ಕಂಪನಿಯಿಂದ ಅಳವಡಿಸಿರುವ ಸೈಲೆನ್ಸರ್‌ಗಳನ್ನು ಪರಿವರ್ತಿಸಿಕೊಂಡು ಓಡಿಸಿದಲ್ಲಿ ಪ್ರಕರಣ ದಾಖಲಿಸಿ, ದಂಡ ಕಟ್ಟಿಸಿಕೊಳ್ಳುವ ಜೊತೆಗೆ ಸರಿಪಡಿಸಿದ ನಂತರವಷ್ಟೇ ವಾಹನಗಳನ್ನು ಕೊಡುತ್ತಿದ್ದೇವೆ. ದಂಡ ವಸೂಲಿ ಮಾಡುವುದು ನಮ್ಮ ಉದ್ದೇಶವಲ್ಲ, ಭಾರೀ ಶಬ್ದ ನಿಗ್ರಹಿಸಿ, ಶಬ್ದಮಾಲಿನ್ಯ ತಡೆದು, ಸಾರ್ವಜನಿಕರಿಗಾಗುವ ಕಿರಿಕಿರಿ ತಪ್ಪಿಸಲು ಕಾರ್ಯಾಚರಣೆ ನಡೆಸಲಾಗುತ್ತಿದೆ.
>
> -ಡಾ. ಚಂದ್ರಗುಪ್ತ,
> ಮೈಸೂರು ನಗರ ಪೊಲೀಸ್ ಆಯುಕ್ತ

ಅದೇ ರೀತಿ ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ 4, ಕೆಆರ್‌ನಲ್ಲಿ 6, ಎನ್‌ಆರ್ ಮತ್ತು ದೇವರಾಜ ಸಂಚಾರ ಠಾಣೆಗಳಲ್ಲಿ ತಲಾ ಒಂದೊಂದು ಪ್ರಕರಣ ದಾಖಲಿಸಲಾಗಿದೆ. ಎರಡನೇ ದಿನವಾದ ಇಂದು ಕಾರ್ಯಾ ಚರಣೆ ಮುಂದುವರಿಸಿರುವ ಪೊಲೀಸರು ದೋಷಪೂರಿತ ಸೈಲೆನ್ಸರ್‌ಗಳಿಗೆ ಮಫ್ಲರ್ ಅಳವಡಿಸಿ ಮೂಲ ಸ್ಥಿತಿಗೆ ಪರಿವರ್ತಿಸಿದ ನಂತರವಷ್ಟೇ 500 ರೂ. ದಂಡ ವಸೂಲಿ ಮಾಡಿ ಬೈಕ್‌ಗಳನ್ನು ಬಿಡುಗಡೆ ಮಾಡಿದರು.

ಅದೇ ರೀತಿ ವ್ಹೀಲಿಂಗ್ ಮಾಡುವವರು, ಅತೀ ವೇಗ ಮತ್ತು ಅಜಾಗರೂಕ ಚಾಲನೆ, ತ್ರಿಬಲ್ ರೈಡಿಂಗ್‌ನಂತಹ ನಿಯಮ ಉಲ್ಲಂಘಿಸಿದವರ ವಿರುದ್ಧವೂ ಸಂಚಾರ ಠಾಣೆ ಪೊಲೀಸರು ಸಮರ ಸಾರಿದ್ದಾರೆ. ಇಂದು ರಾತ್ರಿಯವರೆಗೆ ಮೈಸೂರು ನಗರದಾದ್ಯಂತ 100ಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಿದ್ದಾರೆ.

ಮಂಗಳವಾರ 69 ಪ್ರಕರಣ ದಾಖಲು



ಮೈಸೂರಿನ ನರಸಿಂಹರಾಜ ಸಂಚಾರ ಠಾಣೆ ಪೊಲೀಸರು ಮಂಗಳವಾರ ವಶಕ್ಕೆ ಪಡೆದ ದೋಷಪೂರಿತ ಸೈಲೆನ್ಸರ್‌ವುಳ್ಳ ದ್ವಿಚಕ್ರ ವಾಹನಗಳು.

ಮೈಸೂರಿನ ವಿವಿ ಪುರು ಸಂಚಾರ ಠಾಣಾ ವ್ಯಾಪ್ತಿಯಲ್ಲಿ 23, ನರಸಿಂಹರಾಜ ಠಾಣೆ 18, ಸಿದ್ಧಾರ್ಥ ಠಾಣೆ 12, ಕೃಷ್ಣರಾಜ ಠಾಣೆ 11 ಹಾಗೂ ದೇವರಾಜ ಸಂಚಾರ ಠಾಣೆ ವ್ಯಾಪ್ತಿಯಲ್ಲಿ 5 ಸೇರಿದಂತೆ ನಗರದಲ್ಲಿ ಮಂಗಳವಾರ ಒಟ್ಟು 69 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದು, ದೋಷಪೂರಿತ ಸೈಲೆನ್ಸರ್ ಅಳವಡಿಸಿಕೊಂಡು ವಾಹನ ಚಲಾಯಿಸುತ್ತಿದ್ದ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂಚಾರ ವಿಭಾಗದ ಎಸಿಪಿ ಗಂಗಾಧರಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ನರಸಿಂಹರಾಜ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಇಂದು ವಶಕ್ಕೆ ಪಡೆದಿರುವುದೆಲ್ಲಾ ಬುಲೆಟ್ ಬೈಕ್‌ಗಳು ಎಂದು ಇನ್‌ಸ್ಪೆಕ್ಟರ್ ಎಸ್.ಡಿ.ಸುರೇಶ್‌ಕುಮಾರ್ ಹೇಳಿದ್ದಾರೆ.

ಉರುಳಿ ಬಿದ್ದ ಮರ: ಪೊಲೀಸ್ ಜೀಪ್ ಸೇರಿ ಹಲವು ವಾಹನ ಜಖಂ




ಮೈಸೂರು, ಏ.5(ಜಿಎ)– ಬೃಹತ್ ಮರ ಬಿದ್ದು ಎರಡು ಪೊಲೀಸ್ ಜೀಪ್ ಸೇರಿ ಮೂರು ವಾಹನಗಳು ಜಖಂ ಗೊಂಡಿರುವ ಘಟನೆ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಎದುರು ಮಂಗಳವಾರ ನಡೆದಿದೆ.

ಸಂಜೆ 5.30ರ ವೇಳೆಗೆ ಬುಡ ಸಮೇತ ಉರುಳಿ ಬಿದ್ದ ಮರದ ಕೆಳಗೆ ನಿಲ್ಲಿಸಿದ್ದ ಮೂರು ಪೊಲೀಸರ ಜೀಪ್ ಹಾಗೂ ಒಂದು ಮಾರುತಿ ಸುಜುಕಿ ಬಲೆನೊ (ಕೆಎ.09. ಎಂಸಿ.8406) ಕಾರು ಜಖಂಗೊಂಡಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಯಾಗಿಲ್ಲ. ಬಳಿಕ ಜಖಂಗೊಂಡಿದ್ದ ಸುಜುಕಿ ಬಲೆನೊ ಕಾರಿನ ಮಾಲೀಕ ಮಹೇಶ್ ಖಾಸಗಿ ಕ್ರೇನ್ ವಾಹನ ಕರೆಸಿಕೊಂಡು ತಮ್ಮ ಕಾರನ್ನು ಹೊರ ತೆಗೆಸಿದ್ದಾರೆ. ಮರ ದಡಿ ಸಿಕ್ಕಿ ಹಾಕಿಕೊಂಡಿದ್ದ ಪೊಲೀಸರ ಜೀಪ್‌ಗಳನ್ನು ಹೊರತೆಗೆಯಲಾಗಿದೆ.

ಲಾರಿಗೆ ಸಿಲುಕಿ ವ್ಯಕ್ತಿ ಸಾವು

ಮೈಸೂರು,ಏ.5(ಎಂಕೆ)–ಲಾರಿಗೆ ಸಿಲುಕಿ ದ್ವಿಚಕ್ರ ಸವಾರನೋರ್ವ ಸ್ಥಳದಲ್ಲೇ ಮೃತ ಪಟ್ಟಿರುವ ಘಟನೆ ತಿ.ನರಸೀಪುರ ರಿಂಗ್‌ರಸ್ತೆಯಲ್ಲಿ ನಡೆದಿದೆ. ಶಿವನಾರಾಯಣ (33) ಎಂಬುವವರು ಲಾರಿಗೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟವರಾಗಿದ್ದು, ತಿ.ನರಸೀಪುರ ರಿಂಗ್‌ರಸ್ತೆ ಯಲ್ಲಿ ತಮ್ಮ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ವೇಳೆ ಲಾರಿಗೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ಸಿದ್ದಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಲ್ಲಡ್ಕ ಪ್ರಭಾಕರ್ ಭಟ್ ಆರೋಗ್ಯದಲ್ಲಿ ಏರುಪೇರು: ಆಸ್ಪತ್ರೆಗೆ ದಾಖಲು




ಮಂಗಳೂರು, ಏ. 5– ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್, ಎದೆ ನೋವು ಹಿನ್ನೆಲೆಯಲ್ಲಿ ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆ.

ತಮ್ಮ ವಿದ್ಯಾಸಂಸ್ಥೆಯಲ್ಲಿದ್ದಾಗ ಪ್ರಭಾಕರ್ ಭಟ್‌ಗೆ ಎದೆ ನೋವು ಕಾಣಿಸಿಕೊಂಡಿದೆ ಎಂದು ತಿಳಿದುಬಂದಿದೆ. ಈ ಹಿನ್ನೆಲೆ, ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಇದೀಗ ಪ್ರಭಾಕರ್ ಭಟ್ ಚೇತರಿಸಿಕೊಳ್ಳುತ್ತಿರುವುದಾಗಿ ವೈದ್ಯರು ಮಾಹಿತಿ ನೀಡಿದ್ದಾರೆ.

ಮಾಜಿ ಕುಸ್ತಿಪಟುಗಳ ಮಾಸಾಶನ ಹೆಚ್ಚಳ

ರಾಜ್ಯ ಸರ್ಕಾರದಿಂದ ಆದೇಶ



ಬೆಂಗಳೂರು, ಏ. 5– ಮಾಜಿ ಕುಸ್ತಿಪಟುಗಳ ಮಾಸಾಶನ ವನ್ನು ಒಂದು ಸಾವಿರ ರೂ. ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿದೆ. 50 ವರ್ಷ ಮೇಲ್ಪಟ್ಟ ಮಾಜಿ ಪೈಲ್ವಾನರಿಗೆ ಮಾಸಾಶನ ಹೆಚ್ಚಳದ ಪ್ರಯೋಜನವಾಗಲಿದೆ.

ಮಾಸಾಶನ ಹೆಚ್ಚಿಸುವುದಾಗಿ ಬಜೆಟ್‌ನಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಘೋಷಿಸಿದ್ದರು. ಇದೀಗ ರಾಜ್ಯಮಟ್ಟದ ಕುಸ್ತಿಪಟುಗಳಿಗೆ 2500 ರಿಂದ 3500 ರೂಪಾಯಿಗೆ ಹೆಚ್ಚಳ ಮಾಡಲಾಗಿದೆ. ರಾಷ್ಟ್ರಮಟ್ಟದ ಕುಸ್ತಿಪಟುಗಳಿಗೆ 3000 ರಿಂದ 4000 ರೂಪಾಯಿಗೆ ಮಾಸಾಶನ ಹೆಚ್ಚಳ ಮಾಡಲಾಗಿದೆ. ಅಂತಾರಾಷ್ಟ್ರೀಯ ಕುಸ್ತಿಪಟುಗಳಿಗೆ 4000 ರಿಂದ 5000 ರೂಪಾಯಿಗೆ ಮಾಸಾಶನ ಹೆಚ್ಚಳ ಮಾಡಲಾಗಿದೆ. ಏಪ್ರಿಲ್ 1 ರಿಂದಲೇ ಪೂರ್ವಾನ್ವಯವಾಗುವಂತೆ ಆದೇಶ ಜಾರಿ ಮಾಡಲಾಗಿದೆ.

ಬರಹಗಾರರು ಮನುಷ್ಯರ ನಡುವಿನ ಭಿನ್ನ ಗೋಡೆ ಒಡೆಯಬೇಕು

• ವಿದ್ವಾಂಸ ಪ್ರೊ.ರಾಮೇಗೌಡ (ರಾಗೌ) ಅಭಿಮತ • ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರ ನಾಲ್ಕು ಕೃತಿಗಳ ಬಿಡುಗಡೆ

ಮೈಸೂರು,ಏ.5(ಪಿಎಂ)– ಮನುಷ್ಯರ ನಡುವೆ ಎದ್ದಿರುವ ಭಿನ್ನ ಗೋಡೆಗಳನ್ನು ಒಡೆಯುವ ಪ್ರಾಮಾಣಿಕ ಪ್ರಯತ್ನ ಬರಹಗಾರ ರಿಂದ ಆಗಬೇಕು ಎಂದು ವಿದ್ವಾಂಸ ಪ್ರೊ. ರಾಮೇಗೌಡ (ರಾಗೌ) ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ವಾಚಸ್ಪತಿ ಪ್ರಕಾಶನದ ಜಂಟಿ ಆಶ್ರಯದಲ್ಲಿ ಮಂಗಳ ವಾರ ಹಮ್ಮಿಕೊಂಡಿದ್ದ ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರ 'ಕಂಬಾರರ ಕಾದಂಬರಿ ಲೋಕ', 'ಸಾಹಿತ್ಯ ಶಿಕ್ಷಣ ಸಂಸ್ಕೃತಿ', 'ಸಾಹಿತ್ಯ ಸೌರಭ' ಮತ್ತು 'ಅಸ್ಮಿತೆ' ಸೇರಿದಂತೆ ನಾಲ್ಕು ಕೃತಿಗಳ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವದ ಯಾವುದೇ ಮೂಲೆಯಲ್ಲಿಯಾದರೂ ಲೇಖಕರಲ್ಲಿ ಭಿನ್ನ ಧೋರಣೆಯ ಎರಡು ಗುಂಪುಗಳನ್ನು ಕಾಣಬಹುದು. ಬರವಣಿಗೆ ಮತ್ತು ಬದುಕು ಬೇರೆ ಬೇರೆ ಎನ್ನುವುದು ಒಂದು ಗುಂಪಿನ ಅಭಿಮತ ವಾದರೆ, ಬರವಣಿಗೆ ಮತ್ತು ಬದುಕು ಬೇರೆ ಬೇರೆ ಅಲ್ಲ, ಒಂದೇ. ಬದುಕಿದಂತೆ ಬರೆಯುವುದು, ಬರೆದಂತೆಯೇ ಬದುಕುವುದು ಎನ್ನುವುದು ಎರಡನೇ ಗುಂಪಿನ ಪ್ರತಿಪಾದನೆ. ಸಿದ್ಧಾಶ್ರಮ ಅವರು ಎರಡನೇ ಗುಂಪಿಗೆ ಸೇರುತ್ತಾರೆ. ಅವರ ಮೇಲೆ ಕುವೆಂಪು ಪ್ರಭಾವವಿದೆ ಎಂದು ಹೇಳಿದರು.



ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಮಂಗಳವಾರ ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರ ನಾಲ್ಕು ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ವಿಶೇಷವಾಗಿ ವಿಮರ್ಶೆಯೊಂದಿಗೆ ಸಿದ್ಧಾಶ್ರಮ ಸಾಹಿತ್ಯ ವಲಯ ವಿಸ್ತರಿಸುತ್ತಿದ್ದಾರೆ. ಬರವಣಿಗೆ ಎನ್ನುವುದು ಅವರಿಗೆ ಬದುಕು. ಈ ಕ್ಷೇತ್ರದಲ್ಲಿ 45 ವರ್ಷಗಳಿಂದ ಕೆಲಸ ಮಾಡುತ್ತಿದ್ದು, 28 ಕೃತಿಗಳನ್ನು ಪ್ರಕಟಿಸಿರುವ ಇವರು, ಪ್ರಬಲವಾದ ಇಚ್ಛಾಸಕ್ತಿಯಿಂದ ಮೇಲೆ ಬಂದವರು. ಕನ್ನಡದ ಪ್ರಮುಖ ಬರಹಗಾರರಲ್ಲಿ ಇವರೂ ಒಬ್ಬರು. ಜೀವನ್ಮುಖಿ ಧೋರಣೆ, ನೇರ ನಡೆ, ರಾಜೀ ಮಾಡಿಕೊಳ್ಳದ ವ್ಯಕ್ತಿತ್ವ ಇವರದು. ಅನ್ಯಾಯದ ವಿರುದ್ಧ ಹೋರಾಡುವ ಒಬ್ಬ ಪ್ರಾಮಾಣಿಕ ಲೇಖಕ ಮತ್ತು ಅಪರೂಪದ ಸ್ವಾಭಿಮಾನಿ ಎಂದು ಬಣ್ಣಿಸಿದರು.

ಸಿದ್ಧಾಶ್ರಮ ಅವರ ಕಾವ್ಯ ಮುಖ್ಯವಾಗಿ ವಚನಗಳಲ್ಲಿ ಬಂಡಾಯ ಸ್ವರೂಪವಿದೆ. ಅವರ ಬರವಣಿಗೆಯಲ್ಲಿ ದಮನಿತರ ಪರವಾದ ಒಲವು ನಿಚ್ಚಳವಾಗಿ ಕಂಡು ಬರುತ್ತದೆ. ಸಿದ್ಧಾಶ್ರಮ ಒಬ್ಬ ಉತ್ತಮ ವಿಮರ್ಶಕ, ಸಂಶೋಧಕ ಮತ್ತು ಸಾಹಿತ್ಯ ಚರಿತ್ರಕಾರ. ಕಳೆದ 5 ದಶಕಗಳಿಂದ ಸಾಹಿತ್ಯ ವಿಮರ್ಶೆಯಲ್ಲಿ ನಿರಂತರವಾಗಿ ತೊಡಗಿಕೊಂಡಿರುವ ಸಿದ್ಧಾಶ್ರಮ, ಕನ್ನಡದ ಎಲ್ಲಾ ಕಾಲಘಟ್ಟಗಳ ಪ್ರಮುಖ ಲೇಖಕರ ಮುಖ್ಯ ಕೃತಿಗಳನ್ನು ಸಾಮಾಜಿಕ ಪ್ರಜ್ಞೆ ಮತ್ತು ಸಾಂಸ್ಕೃತಿಕ ಅರಿವಿನ ಹಿನ್ನೆಲೆಯಲ್ಲಿ ವಿಮರ್ಶೆ ಮಾಡಿದ್ದಾರೆ ಎಂದು ಹೇಳಿದರು.

ವಿಮರ್ಶೆಯಲ್ಲಿ ಆಯ್ಕೆಯನ್ನು ಓದುಗರಿಗೆ ಬಿಡಬೇಕು. ವಿಮರ್ಶಕನೇ ಆಯ್ಕೆ ಮಾಡುವುದು ಸರಿಯಲ್ಲ. ಬರವಣಿಗೆಯಲ್ಲಿರುವ ವಿಚಾರವನ್ನು ಒಪ್ಪುವುದು, ಬಿಡುವುದು ಓದುಗನಿಗೆ ಬಿಟ್ಟ ವಿಚಾರ ಎಂದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಮಾತನಾಡಿ, ನಾಡಿನ ಮುಖ್ಯ ಸಂಸ್ಕೃತಿ ಚಿಂತಕರಾದ ಸಿದ್ಧಾಶ್ರಮ, ನೂರಾರು ವೈಚಾರಿಕ ಲೇಖನಗಳನ್ನು ಬರೆದು, ಮೌಢ್ಯ, ಕಂದಾಚಾರ, ಅಸಮಾನತೆ, ಶೋಷಣೆಯನ್ನು ನಿವಾರಿಸಿ ಸಮಸಮಾಜ ಕಟ್ಟುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. ಕೃತಿಯೊಳಗಿನಿಂದಲೇ ವಿಮರ್ಶಾ ಮಾನದಂಡಗಳನ್ನು ಶೋಧಿಸಿಕೊಳ್ಳುವ ಮೂಲಕ ಕೃತಿಕಾರರು ಮತ್ತು ಕೃತಿಗಳಿಗೆ ಬೆಲೆಕಟ್ಟುವ ಸ್ತುತ್ಯ ಪ್ರಯತ್ನವನ್ನು ಶ್ರದ್ಧೆಯಿಂದ ಮಾಡಿ ಓದುಗರ ಪ್ರಜ್ಞಾವಲಯ ವಿಸ್ತರಿಸಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಸಿದ್ಧಾಶ್ರಮ ಅವರು ತಳ ಮತ್ತು ಶ್ರಮ ಸಂಸ್ಕೃತಿಯ ಬೇರಿನಿಂದ ಬಂದವರು. ಅವರ 'ನಾನಲ್ಲದ ನಾನು' ಆತ್ಮಕಥೆಯು ಹಳ್ಳಿಗಳಿಂದ ಕೂಡಿದ ಭಾರತದ ಪ್ರತಿ ಶ್ರಮಜೀವಿಗಳ ಆತ್ಮಕಥೆಯೂ ಆಗಿ ಶ್ರಮ ಸಂಸ್ಕೃತಿಯ ಬದುಕನ್ನು ಅನಾವರಣಗೊಳಿಸುತ್ತದೆ. ಆ ಮೂಲಕ ಕನ್ನಡದ ಅತ್ಯುತ್ತಮ ಆತ್ಮಕಥನವೂ ಇದಾಗಿದೆ ಎಂದರು.

ಇದಕ್ಕೂ ಮುನ್ನ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ.ಬಿ.ವಿ.ವಸಂತ ಕುಮಾರ್ ಕೃತಿಗಳನ್ನು ಬಿಡುಗಡೆ ಮಾಡಿದರು. ಪ್ರೊ.ಸಿ.ಪಿ.ಸಿದ್ಧಾಶ್ರಮ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ಎಂ.ಜಿ. ಮಂಜುನಾಥ್, ಸಂಸ್ಥೆಯ ಜಾನಪದ ವಿಭಾಗದ ಪ್ರಾಧ್ಯಾಪಕ ಪ್ರೊ.ನಂಜಯ್ಯ ಎಂ.ಹೊಂಗನೂರು ಮತ್ತಿತರರು ಹಾಜರಿದ್ದರು.

ಮಿತ್ರನ ವರದಿ ಫಲಶ್ರುತಿ: ಸ್ವಚ್ಛಗೊಂಡ ಬೋಗಾದಿ ಉದ್ಯಾನವನ





ಮೈಸೂರು, ಏ.5(ಜಿಎ)– ಸಂಪೂರ್ಣ ಸ್ವಚ್ಛಗೊಂಡ ನಗರದ ಬೋಗಾದಿ 2ನೇ ಹಂತದ ವಾರ್ಡ್ ನಂ.44ರ (ಜನತಾ ನಗರ) ಸಿಎಫ್‌ಟಿಆರ್‌ಐ ಲೇಔಟ್ ಬಡಾವಣೆಯ ಹೈ ಟೆನ್ಷನ್ ಉದ್ಯಾನವನ.

'ಮೈಸೂರು ಮಿತ್ರ'ನಲ್ಲಿ ಬೋಗಾದಿ 2ನೇ ಹಂತ ವಾರ್ಡ್ ನಂ 44ರ (ಜನತಾ ನಗರ) ಸಿಎಫ್‌ಟಿಆರ್‌ಐ ಲೇಔಟ್ ಬಡಾವಣೆಯ ಹೈಟೆನ್ಷನ್ ಲೈನ್ ಹಾದು ಹೋಗುವ ಸ್ಥಳದಲ್ಲಿ ನಿರ್ಮಿಸಿರುವ ಉದ್ಯಾನವನದ ಕುರಿತು "ನಿರ್ವಹಣೆ ಕೊರತೆಯಿಂದ ಅಧ್ವಾನವಾಗಿರುವ ಪಾರ್ಕುಗಳು" ಶೀರ್ಷಿಕೆಯಡಿ ಮಾ.30 ರಂದು ವರದಿ ಪ್ರಕಟವಾದ ನಂತರ ಪಾಲಿಕೆ ಸದಸ್ಯೆ ಸವಿತಾ ಸುರೇಶ್ ಸಂಪೂರ್ಣ ಉದ್ಯಾನವನವನ್ನು ಸ್ವಚ್ಛಗೊಳಿಸಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಅವರು, ನಮ್ಮ ವಾರ್ಡ್ ವ್ಯಾಪ್ತಿಯಲ್ಲಿ 10 ಪಾರ್ಕ್‌ಗಳು ಬರಲಿದ್ದು, ಅದರಲ್ಲಿ ಒಂಬತ್ತು ಪಾರ್ಕ್‌ಗಳು ಸುಸಜ್ಜಿತವಾಗಿವೆ. ಆದರೆ ಸಿಎಫ್‌ಟಿಆರ್‌ಐ ಲೇಔಟ್ ಬಡಾವಣೆಯಲ್ಲಿ ಹೈಟೆನ್ಷನ್ ಲೈನ್ ಹಾದು ಹೋಗುವ ಸ್ಥಳದಲ್ಲಿ ನಿರ್ಮಿಸಿರುವ ಉದ್ಯಾನವನವನ್ನು ಅಭಿವೃದ್ಧಿ ಪಡಿಸಲು ಎರಡು ವರ್ಷಗಳ ಹಿಂದೆಯೇ ಆಲೋಚಿಸಲಾಗಿತ್ತು ಆ ಸಂಬಂಧ ಕಾಮಗಾರಿಯೂ ಆರಂಭವಾಗಿತು ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು

ಹೈಟೆನ್ಷನ್ ಲೈನ್ ಹಾದು ಹೋಗಿರುವ ಸ್ಥಳದಲ್ಲಿ ಉದ್ಯಾನವನ ನಿರ್ಮಿಸಿದರೆ ಆರೋಗ್ಯ ಸಮಸ್ಯೆಗಳು ಉಂಟಾಗುತ್ತದೆ ಎಂದು ಕೆಲ ಸ್ಥಳೀಯರು ವಿರೋಧ' ವ್ಯಕ್ತಪಡಿಸಿದರು ಈ ಹಿನ್ನೆಲೆಯಲ್ಲಿ ಅದರ ಅಭಿವೃದ್ಧಿ ಕಾರ್ಯ ಸ್ಥಗಿತವಾಗಿದೆ ಎಂದ ಅವರು, ಸಾರ್ವಜನಿಕರು ಕಟ್ಟಡದ ಡಬ್ರಿಸ್, ತ್ಯಾಜ್ಯವನ್ನು ಉದ್ಯಾನವನದ ಸುತ್ತಲೂ ತಂದು ಹಾಕಿ ಕಸದಿಂದ ತುಂಬಿದೆ. ಸ್ವಚ್ಛವಾಗಿ ಇಟ್ಟುಕೊಳ್ಳಲು ಸಾರ್ವಜನಿಕರು ಸಹಕರಿಸಬೇಕಿದೆ ಎಂದು ತಿಳಿಸಿದರು.



ಮೈಸೂರಿನ ಹುಣಸೂರು ಮುಖ್ಯರಸ್ತೆಯಲ್ಲಿರುವ ಜಲದರ್ಶಿನಿ ಅತಿಥಿ ಗೃಹದಲ್ಲಿ ಶಾಸಕ ಎಲ್.ನಾಗೇಂದ್ರ ಸ್ನೇಹ ಬಳಗದ ವತಿಯಿಂದ ಸಾಹಿತಿ ಪೂರ್ಣಚಂದ್ರ ತೇಜಸ್ವಿಯವರನ್ನು ಸ್ಮರಿಸಲಾಯಿತು. ನಗರ ಪಾಲಿಕೆ ಸದಸ್ಯ ಚಿಕ್ಕವೆಂಕಟ್, ಬಿಜೆಪಿ ಚಾಮರಾಜ ಕ್ಷೇತ್ರದ ಉಪಾಧ್ಯಕ್ಷ ಕುಮಾರ್ ಗೌಡ, ಯುವ ಮೋರ್ಚಾ ಅಧ್ಯಕ್ಷ ಸಚಿನ್, ಕಾರ್ಯದರ್ಶಿ ಅರ್ಜುನ್, ಆನಂದ ನಾಯ್ಕ, ಶ್ರೀನಿವಾಸ್, ರವಿ, ದರ್ಶನ್ ಉಪಸ್ಥಿತರಿದ್ದರು.

ದೊಡ್ಡ ನಿಂಗೇಗೌಡ ನಿಧನ



ಮೈಸೂರು, ಏ. 5– ತಾಲೂಕಿನ ದಡದಹಳ್ಳಿ ನಿವಾಸಿ ದೊಡ್ಡನಿಂಗೇಗೌಡ (ಅಣ್ಣಯ್ಯ) ಅವರು ಮಂಗಳವಾರ ನಿಧನರಾದರು. ಅವರಿಗೆ 74 ವರ್ಷ ವಯಸ್ಸಾಗಿತ್ತು. ದಿವಂಗತರು ಪತ್ನಿ, ನಾಲ್ವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮದ ಜಮೀನಿನಲ್ಲಿ ಬುಧವಾರ ಬೆಳಗ್ಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಂದಾಯ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿ ಅಕ್ರಮ

ಹೆಚ್.ಡಿ.ಕೋಟೆ ಪುರಸಭೆ ಕಂದಾಯ ನಿರೀಕ್ಷಕಿ ಅಮಾನತು

ಹುಣಸೂರು ನಗರಸಭೆಯಲ್ಲಿ ಕರ ವಸೂಲಿಗಾರರಾಗಿದ್ದ ವೇಳೆ ಅಕ್ರಮ

- **2 ವರ್ಷಗಳಾದರೂ ಕಡತಗಳ ನಾಪತ್ತೆ ಮಾಡಿದ್ದ ಆರೋಪ**
- **ಉಪವಿಭಾಗಾಧಿಕಾರಿ, ತನಿಖಾ ತಂಡದ ತನಿಖೆಯಿಂದ ಬಯಲು**

ಹುಣಸೂರು, ಏ.5(ಕೆಕೆ)– ಕಂದಾಯ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿ ನಗರಸಭೆಯಲ್ಲಿ 12 ನಕಲಿ ಖಾತೆಗಳನ್ನು ಮಾಡಿರುವ ಆರೋಪದಡಿ ಹೆಚ್.ಡಿ.ಕೋಟೆ ಪುರಸಭೆಯಲ್ಲಿ ಕಂದಾಯ ನಿರೀಕ್ಷಕರಾಗಿರುವ ವೀಣಾ ಅವರನ್ನು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.



ವೀಣಾ

ವೀಣಾ ಅವರು ಈ ಹಿಂದೆ ಹುಣಸೂರು ನಗರಸಭೆಯಲ್ಲಿ ಕರ ವಸೂಲಿಗಾರರಾಗಿದ್ದಾಗ ಹುಣಸೂರು ನಗರಸಭೆ ವ್ಯಾಪ್ತಿಯ ಸರ್ವೆ ನಂ.61ರ ಕಂದಾಯ ಭೂಮಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ನಮೂನೆ–3 ನೀಡುವ ಮೂಲಕ 12 ನಕಲಿ ಅಕ್ರಮ ಖಾತೆಗಳನ್ನು ಮಾಡಿರುವ ಆರೋಪದಡಿ ಉಪ ವಿಭಾಗಾಧಿಕಾರಿಗಳು ಮತ್ತು ತನಿಖಾ ತಂಡ ನಡೆಸಿದ ತನಿಖೆಯಲ್ಲಿ ಮೇಲ್ನೋಟಕ್ಕೆ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕಿ ಎಂ.ಎಸ್.ಅರ್ಚನಾ ಅವರು ವೀಣಾ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ತನಿಖೆಗೆ ಒಳಪಡಿಸಿದ್ದಾರೆ.

ಈ ಸಂಬಂಧ ಡಿಎಂಎ ಕಚೇರಿ ತನಿಖಾ ತಂಡ ಕಂದಾಯ ನಿರೀಕ್ಷಕಿ ವೀಣಾ ಅವರು ಹುಣಸೂರು ನಗರಸಭೆಯಲ್ಲಿ ಕರ್ತವ್ಯ ನಿರ್ವಹಿಸುವ ಸಮಯ ಸರ್ವೆ ನಂ.61ರ ಕಂದಾಯ ಭೂಮಿಗೆ ನಗರಸಭೆಯ ಕೆಎಂಎಫ್–24 ದಾಖಲಾತಿಗಳನ್ನು ಅನಧಿಕೃತವಾಗಿ ಸೃಷ್ಟಿಸಿ ಎ.ಆರ್.ವಿ ರಿತ್ಯಾ ಆಸ್ತಿ ತೆರಿಗೆ ಉದ್ದೇಶಕ್ಕಾಗಿ ದಾಖಲಾಗಿರುವುದು ಮತ್ತು ಅಕ್ರಮವಾಗಿ 12 ಖಾತೆಗಳನ್ನು ಮಾಡಿರುವುದು ಕಂಡು ಬಂದಿದ್ದು ಇದರಲ್ಲಿ ಮುನಿಸಿಪಲ್ ಕಾಯಿದೆ ಮತ್ತು ನಿಯಮಗಳನ್ನು ಉಲ್ಲಂಘಿಸಿ ನಗರಸಭೆ ದಾಖಲೆಗಳಲ್ಲಿ ದಾಖಲಿಸಿರುವುದು ತಿಳಿದು ಬಂದಿದೆ.

ಮತ್ತೊಮ್ಮೆ ಜಿಲ್ಲಾಧಿಕಾರಿಗಳು ಉಪವಿಭಾಗಾಧಿಕಾರಿಗಳನ್ನು ತನಿಖೆ ಮಾಡಲು ಸೂಚಿಸಿದಾಗ ತನಿಖೆಗಾಗಿ ಬಂದ ಉಪವಿಭಾಗಾಧಿಕಾರಿಗಳಿಗೆ ಸರ್ವೆ ನಂ.61ರ ಕಂದಾಯ ಭೂಮಿ ಭೂಪರಿವರ್ತನೆಯಾಗಿ ಅನಧಿಕೃತ ಖಾತೆಗಳನ್ನು ಮಾಡಿರುವ ಮೂಲ ಕಡತಗಳು ತನಿಖೆ ಸಮಯದಲ್ಲಿ ಹಾಜರು ಪಡಿಸಿಲ್ಲ. ಆದರೆ ಕೆಎಂಎಫ್–24ರ ನಕಲು ಪರಿಶೀಲಿಸಿದ್ದು ಅದರಲ್ಲಿ 12 ಅಕ್ರಮ ಖಾತೆಗಳು ದಾಖಲಾಗಿರುವುದು ಕಂದು ಬಂದಿದೆ. ಆದರೆ ಈ ಸಂಬಂಧ ಕಡತಗಳು ಕಚೇರಿಯಿಂದ ನಾಪತ್ತೆಯಾಗಿವೆ. ಮೊದಲ ತಂಡ ತನಿಖೆಗೆ ಬಂದಾಗ ಇದ್ದ ಕಡತಗಳು ಉಪವಿಭಾಗಾಧಿಕಾರಿಗಳ ತನಿಖಾ ಸಮಯದಲ್ಲಿ ಕಡತಗಳ ನಾಪತ್ತೆ ಸಾರ್ವಜನಿಕ ದಾಖಲೆಗಳ ಸಂರಕ್ಷಣೆ ಕಾರ್ಯ ಮಾಡಬೇಕಾದ ವೀಣಾ ಅವರು ನಿಯಮ ಉಲ್ಲಂಘಿಸಿ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ.

ಸರ್ಕಾರಿ ದಾಖಲೆ ಮತ್ತು ಸಾರ್ವಜನಿಕ ದಾಖಲೆಗಳ ಕಡತಗಳ ಸಂರಕ್ಷಣೆ ಮಾಡದೆ ಕಡತಗಳು ನಾಪತ್ತೆಯಾಗಿ 2 ವರ್ಷಗಳೇ ಕಳೆದರೂ, ಈ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ, ನಿರ್ದೇಶನಾಲಯಕ್ಕೆ ಹಾಗೂ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡದೆ ಬೇಜಾವಾಬ್ದಾರಿತನದಿಂದ ವರ್ತಿಸಿ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದ್ದು, ಪೌರಾಡಳಿತ ನಿರ್ದೇಶನಾಲಯ ಇವರನ್ನು ಅಮಾನತುಗೊಳಿಸಿ ತನಿಖೆಗೆ ಒಳಪಡಿಸಿದೆ. ಅಲ್ಲದೇ ಇವರನ್ನು ಹೆಚ್.ಡಿ.ಕೋಟೆ ಪುರಸಭೆಯಿಂದ ಅಂಕೋಲ ಪುರಸಭೆಯಲ್ಲಿ ಖಾಲಿ ಇರುವ ಕಂದಾಯ ನೀರಿಕ್ಷಕಿ ಹುದ್ದೆಗೆ ಬದಲಾಯಿಸಿ ಸದರಿಯವರು ಕೆ.ಸಿ.ಎಸ್.ಅರ್ ನಿಯಮ 98ರನ್ವಯ ಸಕ್ಷಮ ಪ್ರಾಧಿಕಾರ ಅನುಮತಿ ಇಲ್ಲದೆ ಕೇಂದ್ರಸ್ಥಾನ ಬಿಡುವಂತಿಲ್ಲ ಎಂದು ಆದೇಶಿಸಿದ್ದಾರೆ.

ರಾಜಸ್ಥಾನ್ ವಿರುದ್ಧ ಆರ್‌ಸಿಬಿಗೆ ರಾಯಲ್ ಗೆಲುವು



ಮುಂಬೈ, ಏ.5– ದಿನೇಶ್ ಕಾರ್ತಿಕ್ ಹಾಗೂ ಶಹಬಾಜ್ ಅಹಮದ್ ಅವರ ಬಿರುಸಿನ ಬ್ಯಾಟಿಂಗ್ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ರಾಜಸ್ಥಾನ್ ರಾಯಲ್ಸ್ ವಿರುದ್ಧ 4 ವಿಕೆಟ್‌ಗಳ ಗೆಲುವು ದಾಖಲಿಸಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ರಾಯಲ್ಸ್ ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಯಶಸ್ವಿ ಜೈಸ್ವಾಲ್ 4 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ನಂತರ 2ನೇ ವಿಕೆಟ್‌ಗೆ ಜೊತೆಯಾದ ಜೋಸ್ ಬಟ್ಲರ್ ಹಾಗೂ ದೇವದತ್ ಪಡಿಕ್ಕಲ್ 70 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಪಡಿಕ್ಕಲ್ 37 ರನ್ ಗಳಿಸಿ ಔಟಾದರು. ಬಳಿಕ ಕ್ರೀಸ್‌ಗೆ ಆಗಮಿಸಿದ ನಾಯಕ ಸಂಜು ಸ್ಯಾಮ್ಸನ್ ಕೇವಲ 8 ರನ್ ಗಳಿಗೆ ಔಟಾಗುವ ಮೂಲಕ ನಿರಾಸೆ ಮೂಡಿಸಿದರು. ಮತ್ತೊಂದೆಡೆ ತಾಳ್ಮೆಯ ಆಟವಾಡಿದ ಬಟ್ಲರ್ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಅಲ್ಲದೇ 4ನೇ ವಿಕೆಟ್‌ಗೆ ಶಿಮ್ರಾನ್ ಹೆಟ್ಮೆಯರ್ ಜೊತೆಗೂಡಿ 83 ಕಾಣಿಕೆ ನೀಡಿದರು. ಅಂತಿಮವಾಗಿ ಬಟ್ಲರ್ 6 ಸಿಕ್ಸರ್ ಒಳಗೊಂಡ 70, ಹೆಟ್ಮೆಯರ್ 42 ರನ್ ಗಳಿಸಿ ಅಜೇಯರಾಗಿ ಉಳಿದರು. ಆರ್‌ಸಿಬಿ ಪರ ಡೇವಿಡ್ ವಿಲ್ಲಿ, ವನಿಂದು ಹಸರಂಗ ಹಾಗೂ ಹರ್ಷಲ್ ಪಟೇಲ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

170 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು 19.1 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 173ರನ್ ಗಳಿಸಿ ಗೆಲುವಿನ ನಗೆ ಬೀರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಅನುಜ್ ರಾವತ್ ಫಾಫ್ ಡುಪ್ಲೆಸಿಸ್ ಮೊದಲ ವಿಕೆಟ್‌ಗೆ 55 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ ಈ ವೇಳೆ 29 ರನ್ ಗಳಿಸಿದ್ದ ಡುಪ್ಲೆಸಿಸ್ ಔಟಾಗುತ್ತಿದ್ದಂತೆ ಆರ್‌ಸಿಬಿ ಮಧ್ಯಮ ಕ್ರಮಾಂಕ ದಿಢೀರ್ ಕುಸಿತಕ್ಕೆ ಒಳಗಾಯಿತು. ಈ ವೇಳೆ ಜೊತೆಯಾದ ಶಹಬಾಜ್ ಅಹಮ್ಮದ್ ಹಾಗೂ ದಿನೇಶ್ ಕಾರ್ತಿಕ್ 67 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಜಯ ತಂದುಕೊಟ್ಟರು. ಈ ವೇಳೆ 45 ರನ್ ಗಳಿಸಿದ್ದ ಶಹಬಾಜ್ ಅಹಮದ್ ಔಟಾದರು. ದಿನೇಶ್ ಕಾರ್ತಿಕ್ 44, ಹರ್ಷಲ್ ಪಟೇಲ್ 9 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಅನುಜ್ ರಾವತ್ 26 ರನ್ ಗಳಿಸಿದರು. ರಾಜಸ್ಥಾನ್ ಪರ ಯಜುವೇಂದ್ರ ಚಹಲ್, ಟ್ರೆಂಟ್ ಬೋಲ್ಟ್ ತಲಾ 2, ನವದೀಪ್ ಸೈನಿ 1 ವಿಕೆಟ್ ಪಡೆದರು. ದಿನೇಶ್ ಕಾರ್ತಿಕ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಹೆಚ್.ಡಿ.ಕೋಟೆಯಲ್ಲಿ ಶಿವಕುಮಾರಶ್ರೀಗಳ ಸ್ಮರಣೆ

ಹೆಚ್.ಡಿ.ಕೋಟೆ, ಏ.5(ಮಂಜು)– ಸಿದ್ಧಗಂಗಾ ಶ್ರೀಶಿವಕುಮಾರ ಸ್ವಾಮೀಜಿಗಳು ದೀನ ದಲಿತರು, ಬಡವರು, ಗ್ರಾಮೀಣ ವಿದ್ಯಾರ್ಥಿಗಳಿಗೆ ಆಶ್ರಯದ ಜೊತೆಗೆ ಅನ್ನ ದಾಸೋಹ, ಅಕ್ಷರ ದಾಸೋಹ ನೀಡುವ ಮೂಲಕ ತಮ್ಮ ಜೀವಿತಾವಧಿಯನ್ನು ಸಮಾಜ ಸೇವೆಯಲ್ಲಿ ಕಳೆದವರು ಎಂದು ಬಿಡುಗಲು ಪಡುವಲು ಮಠದ ಮಹದೇವ ಸ್ವಾಮೀಜಿ ನುಡಿದರು.

ಪಟ್ಟಣದ ಬಸ್ ನಿಲ್ದಾಣ ಸಮೀಪದ ಹಳೇ ಆಸ್ಪತ್ರೆ ಆವರಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದಿಂದ ನಡೆದ ಶ್ರೀಶಿವ ಕುಮಾರ ಸ್ವಾಮೀಜಿಯವರ 115ನೇ ಜಯಂತ್ಯುತ್ಸವದಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಸಿದ್ಧಗಂಗಾಶ್ರೀಗಳು ನಿತ್ಯ 10 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಅನ್ನ ದಾಸೋಹ, ಅಕ್ಷರ ದಾಸೋಹ ನೀಡಿದವರು. ತಮ್ಮ ಮಾನವೀಯ ಮೌಲ್ಯ ಮತ್ತು ಸಮಾಜಮುಖಿ ಕೆಲಸಗಳಿಂದ ಎಲ್ಲ ಸಮುದಾಯಕ್ಕೂ ಹತ್ತಿರವಾಗಿದ್ದರು. ಇಂತಹ ಮಹನೀಯರನ್ನು ಪ್ರತಿಯೊಂದು ಸಮುದಾಯವೂ ಸ್ಮರಿಸುತ್ತಿದೆ. ಪ್ರತಿ ಗ್ರಾಮ, ಪ್ರತಿ ಮನೆಯಲ್ಲಿಯೂ ಸಹ ಸಿದ್ಧಗಂಗಾ ಶ್ರೀಗಳನ್ನು ಪೂಜಿಸುತ್ತಿದ್ದಾರೆ ಎಂದರು.



ಶಿವಕುಮಾರ ಸ್ವಾಮೀಜಿಗಳು ಬಸವಾದಿ ಶರಣರ ಆದರ್ಶದಲ್ಲಿ ಬದುಕಿದವರು. ಪ್ರತಿಯೊಂದು ಸಮುದಾಯವನ್ನು ಗೌರವಿಸುತ್ತಾ ಸಮಾಜದ ಪ್ರತಿಯೊಬ್ಬರನ್ನು ನಮ್ಮವರು ಎಂದು ಭಾವಿಸಿ ಎಲ್ಲಾ ಸಮುದಾಯದ ಮಕ್ಕಳಿಗೂ ವಿದ್ಯಾದಾನ ನೀಡಿದವರು. ಅವರ ಜೀವಿಸಿದ ಈ ಕಾಲಘಟ್ಟದಲ್ಲಿ ನಾವು ಜನ್ಮತಾಳಿ, ಅವರ ದರ್ಶನ ಪಡೆದದ್ದು ನಮ್ಮ ಭಾಗ್ಯ. ಆದ್ದರಿಂದ ನಾವು ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪಾಲಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಪುರ ಮಠದ ಚಂದ್ರಶೇಖರ ಸ್ವಾಮೀಜಿ, ಬೀಚನಹಳ್ಳಿ ಮಠದ ನಾಗೇಂದ್ರ ಸ್ವಾಮೀಜಿ, ಜಕ್ಕಹಳ್ಳಿ ಮಠದ ನಂದೀಶ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಜಿಲ್ಲಾಧ್ಯಕ್ಷ ಶಿವಮೂರ್ತಿ, ಜಿಲ್ಲಾ ಯುವ ಘಟಕದ ಅಧ್ಯಕ್ಷ ಮೂರ್ತಿ, ತಾಲೂಕು ಅಧ್ಯಕ್ಷ ಬಸವರಾಜಪ್ಪ, ಯುವ ಘಟಕದ ಅಧ್ಯಕ್ಷ ಅಭಿ, ಮಹಿಳಾ ಘಟಕದ ಅಧ್ಯಕ್ಷೆ ಸುಧಾಮಣಿ, ಬಸವ ಬಳಗದ ಅಧ್ಯಕ್ಷ ಎ.ಕೆ.ಕೆಂಡಗಣ್ಣಸ್ವಾಮಿ, ಶರಣು ಸಾಹಿತ್ಯ ಪರಿಷತ್ ಅಧ್ಯಕ್ಷ ಪಿ.ಕೆ.ಶಿವರಾಜು, ಪ್ರಧಾನ ಕಾರ್ಯದರ್ಶಿಗಳಾದ ಮಹದೇವಪ್ಪ, ಸತೀಶ್, ಸಮುದಾಯದ ಮುಖಂಡರಾದ ಜೆ.ಪಿ.ಚಂದ್ರಶೇಖರ್, ಬಸವರಾಜಪ್ಪ, ರುದ್ರಪ್ಪ, ಯೋಗೇಶ್, ಶಿವರಾಜಪ್ಪ, ಬಸವಣ್ಣ, ಕೆಂಡಗಣ್ಣಸ್ವಾಮಿ, ಗಿರೀಶ್‌ಮೂರ್ತಿ, ಮಹದೇವ, ಗಿರೀಶ್, ಗಣಪತಿ, ಗುರುಸ್ವಾಮಿ, ಪರಶಿವ, ಮಂಜು, ಬಸವರಾಜು, ದಯಾನಂದ್ ಸೇರಿದಂತೆ ಮಹಾಸಭಾ ಮತ್ತು ಬಸವ ಬಳಗಗಳ ಒಕ್ಕೂಟಗಳ ಪದಾಧಿಕಾರಿಗಳು, ಗ್ರಾಮಸ್ಥರಿದ್ದರು.


ರೈತ ಸಂಘ, ಹಸಿರು ಸೇನೆಯನ್ನು ತಳಮಟ್ಟದಿಂದ ಬಲಪಡಿಸಿ

ನೂತನ ಪದಾಧಿಕಾರಿಗಳಿಗೆ ರೈತ ಸಂಘದ ಜಿಲ್ಲಾ ಮಾಧ್ಯಮ ಕಾರ್ಯದರ್ಶಿ ಮಂಜು ಕಿರಣ್ ಸಲಹೆ

ತಿ.ನರಸೀಪುರ, ಏ.5(ಎಸ್‌ಕೆ)– ರಾಜ್ಯ ರೈತ ಸಂಘ ಹಾಗೂ ತಾಲೂಕು ಘಟಕದ ಹಸಿರು ಸೇನೆಯನ್ನು ತಳಮಟ್ಟದಿಂದ ಬಲಪಡಿಸಲು ತಾಲೂಕು ಮಟ್ಟದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ರಾಜ್ಯ ರೈತ ಸಂಘದ ಜಿಲ್ಲಾ ಮಾಧ್ಯಮ ಕಾರ್ಯದರ್ಶಿ ಮಂಜು ಕಿರಣ್ ತಿಳಿಸಿದರು.

ಪಟ್ಟಣದ ಸಂಘದ ಕಚೇರಿಯಲ್ಲಿ ನೂತನ ಪದಾಧಿಕಾರಿಗಳಿಗೆ ಆದೇಶ ಪತ್ರ ವಿತರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಮೂಹಿಕ ನಾಯಕತ್ವ ಬಲಪಡಿಸಿ ತಳಮಟ್ಟದಿಂದ ಯುವಕರನ್ನು ವಿಚಾರವಂತರನ್ನಾಗಿ ಮಾಡುವ ಮೂಲಕ ಸಂಘದ ಸದಸ್ಯರನ್ನು ಆರ್ಥಿಕವಾಗಿ ಬಲಪಡಿಸಲಾಗುತ್ತದೆ. ಯುವ ರೈತ ಪದಾಧಿಕಾರಿಗಳಿಗೆ ರೈತ ಸಂಘದ ಬಗ್ಗೆ ಜಾಗೃತಿ ಮೂಡಿಸಲು ಗ್ರಾಮೀಣ ಮಟ್ಟದಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗುತ್ತದೆ. ತಿ.ನರಸೀಪುರ ತಾಲೂಕು ಪ್ರೊ.ನಂಜುಂಡಸ್ವಾಮಿ ಯವರ ಹುಟ್ಟೂರಾಗಿದ್ದು, ಮತ್ತಷ್ಟು ಹೋರಾಟಗಾರರನ್ನು ಹುಟ್ಟುಹಾಕಲು ಆದ್ಯತೆ ನೀಡಲಾಗುತ್ತದೆ. ರೈತ ಜಾಗೃತಿ ಸಭೆ ಏರ್ಪಡಿಸುವ ಮೂಲಕ ಪದಾಧಿಕಾರಿಗಳಿಗೆ ರೈತರ ಧ್ಯೇಯೋದ್ದೇಶಗಳ ಬಗ್ಗೆ ಅರಿವು ಮೂಡಿಸಲಾಗುವುದು. ಯುವಕರನ್ನು ಆರ್ಥಿಕವಾಗಿ ಬಲಪಡಿಸಿ ಸಂಘಟಿತರನ್ನಾಗಿಸಲು ಮುಂದಿನ ದಿನಗಳಲ್ಲಿ ಹೋಬಳಿ ಮಟ್ಟದಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗುತ್ತದೆ ಎಂದರು.

ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ಮಾತನಾಡಿ, ಪ್ರೊ.ನಂಜುಂಡಸ್ವಾಮಿ ಹುಟ್ಟೂರಾದ ಇಲ್ಲಿ ಸಂಘವು ವ್ಯವಸ್ಥಿತ ಹೋರಾಟ ಕಟ್ಟಲು ವಿಫಲವಾಗುತ್ತಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಹೋರಾಟಕ್ಕೆ ಶಕ್ತಿ ತುಂಬುವ ಸಲುವಾಗಿ ತಾಲೂಕು ಮಟ್ಟದ ಪ್ರಮುಖ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ನಮ್ಮ ಸಂಘಟನೆ ಸಮರ್ಥವಾಗಿ ಕೆಲಸ ಮಾಡದಿದ್ದಲ್ಲಿ ರೈತ ಸಂಘದ ಶಾಲು ಹಾಕಿಕೊಂಡು ಬೇರೆ ಕೆಲಸ ಮಾಡುವ ಹೋರಾಟಗಾರರು ಹುಟ್ಟಿಕೊಳ್ಳುತ್ತಾರೆ. ಹಾಗಾಗಿ ಇಲ್ಲಿ ಸಂಘದ ಸದಸ್ಯರು ಸಂಘಟಿತರಾಗಿ ಕೆಲಸ ಮಾಡುವ ಅಗತ್ಯವಿದೆ ಎಂದರು.



ಸಂಘದ ಜಿಲ್ಲಾ ಗೌರವಾಧ್ಯಕ್ಷ ಕೆ.ಜಿ.ಶಿವಪ್ರಸಾದ್ ಮಾತನಾಡಿದರು. ಇದೇ ವೇಳೆ 40ಕ್ಕೂ ಹೆಚ್ಚು ಮಂದಿ ರೈತ ಸಂಘಕ್ಕೆ ಸೇರ್ಪಡೆಗೊಂಡರು. ಕಾರ್ಯಕ್ರಮದಲ್ಲಿ ಜಿಲ್ಲಾ ಗೌರವಾಧ್ಯಕ್ಷ ಕೆಜಿ.ಶಿವಪ್ರಸಾದ್, ಜಿಲ್ಲಾ ಸಂಚಾಲಕ ಕಳ್ಳಿಪುರ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಇಮ್ಮಾವು ರಘು ಮತ್ತಿತರರಿದ್ದರು.

ನೂತನ ಪದಾಧಿಕಾರಿಗಳು: ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಗೌರವಾಧ್ಯಕ್ಷರಾಗಿ ಅತ್ತಹಳ್ಳಿ ಗೋಪಿ, ಪ್ರದೀಪ್(ಅಧ್ಯಕ್ಷ), ಅತ್ತಹಳ್ಳಿ ಸ್ವಾಮಿರಾಜು (ಉಪಾಧ್ಯಕ್ಷರು), ಕುರುಬೂರು ಕೆ.ಎಂ.ಶಾಂತರಾಜು (ಟೌನ್ ಅಧ್ಯಕ್ಷ), ಚಿದರವಳ್ಳಿ ಎನ್.ಸಂಪತ್ತು(ಪ್ರಧಾನ ಕಾರ್ಯದರ್ಶಿ), ಡಿ.ಕೆ.ಗೋಪಿನಾಥ್ (ಬನ್ನೂರು ಹೋಬಳಿ ಅಧ್ಯಕ್ಷ), ಹಲವಾರ ಗುರುಸ್ವಾಮಿ(ಸೋಸಲೆ ಹೋಬಳಿ ಅಧ್ಯಕ್ಷ), ಹುನಗನಹಳ್ಳಿ ಗುಡ್ಡಪ್ಪ (ಕಸಬಾ ಹೋಬಳಿ ಅಧ್ಯಕ್ಷ), ಶಿವಕುಮಾರ ಆರಾಧ್ಯ (ತಲಕಾಡು ಹೋಬಳಿ ಅಧ್ಯಕ್ಷ) ಹಾಗೂ ಕರೋಹಟ್ಟಿ ದಿನೇಶ್ ಕುಮಾರ್ (ಮೂಗೂರು ಹೋಬಳಿ ಅಧ್ಯಕ್ಷ) ಅವರನ್ನು ಆಯ್ಕೆ ಮಾಡಲಾಯಿತು.

ವಿವಿಧೆಡೆ ಹಸಿರು ಕ್ರಾಂತಿ ಹರಿಕಾರ ಬಾಬೂಜಿ ಜಯಂತಿ ಆಚರಣೆ

ದೇಶಕ್ಕೆ ಬಾಬು ಜಗಜೀವನ್ ರಾಂ ಕೊಡುಗೆ ಅಪಾರ

ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಶ್ಲಾಘನೆ





ತಿ.ನರಸೀಪುರ, ಏ.5(ಎಸ್‌ಕೆ)– ದೇಶಕ್ಕೆ ಹಸಿರು ಕ್ರಾಂತಿ ಹರಿಕಾರ ಬಾಬೂಜಿ ಕೊಡುಗೆ ಅಪಾರ. ಇಂತಹ ಮಹಾನ್ ನಾಯಕರ ಆದರ್ಶ, ಚಿಂತನೆಗಳು ಇಂದಿಗೂ ದಾರಿ ದೀಪವಾಗಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಶ್ಲಾಘಿಸಿದರು.

ಪಟ್ಟಣದ ತಾಲೂಕು ಕಚೇರಿ ಎದುರು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ನಡೆದ ಹಸಿರು ಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನರಾಂ ಜಯಂತಿಯಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ ರಾಂ ದಲಿತರ ಕ್ಷೇಮಾಭಿವೃದ್ಧಿಗೆ ಹೋರಾಡಿದರು. ದಲಿತರ ಸಾಮಾಜಿಕ ನ್ಯಾಯಕ್ಕಾಗಿ ಪ್ರತಿಪಾದಿಸುತ್ತಿದ್ದರು. ಅಂತಹವರ ಆದರ್ಶ ಪಾಲನೆ ನಮ್ಮೆಲ್ಲರಿಂದ ಆಗಬೇಕು. ಶೋಷಿತರ, ದಮನಿತರ ಪರ ಹೋರಾಟ ನಡೆಸಿದ ಬಾಬು ಜಗಜೀವನ ರಾಂ ಅವರಿಗೆ ನನ್ನ ನಮನ. ಕೃಷಿ, ರಕ್ಷಣಾ ಸಚಿವರಾಗಿ ಅವರು ಸಲ್ಲಿಸಿದ ಸೇವೆ ಸ್ಮರಣೀಯ ಎಂದರು.

ಪಟ್ಟಣದ ಮಿನಿ ವಿಧಾನಸೌಧ ಮುಂಭಾಗ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಪಕ್ಕ ಬಾಬು ಜಗಜೀವನರಾಂ ಪುತ್ಥಳಿ ನಿರ್ಮಿಸಿದಾಗ ಮಾತ್ರ ಸಮಾನತೆ ಕಾಣಲು ಸಾಧ್ಯ. ಅಂಬೇಡ್ಕರ್ ಹಾಗೂ ಬಾಬು ಜಗಜೀವನ ರಾಂ ಎಂಬ ಭೇದಭಾವ ಬೇಡ. ಬಾಬೂಜಿಯವರ ಪ್ರತಿಮೆ ನಿರ್ಮಾಣಕ್ಕೆ ತಾಲೂಕು ಆಡಳಿತ ಮುಂದಾಗಬೇಕು ಎಂದರು.

ಪಟ್ಟಣದ ಗೋಪಾಲಪುರ ಪಾರ್ಕ್ ಪಕ್ಕ ಬಾಬೂಜಿ ಹೆಸರಲ್ಲಿ ಹೈಟೆಕ್ ಗ್ರಂಥಾಲಯ ನಿರ್ಮಿಸಲು ಶಾಸಕರು ಆದ್ಯತೆ ನೀಡುವಂತೆ ಮನವಿ ಮಾಡಿದ ಅವರು, ಅಧಿಕಾರಿಗಳು ಎಷ್ಟು ದಿನ ಕರ್ತವ್ಯ ನಿರ್ವಹಿಸಿದ್ದೀರಿ ಎನ್ನುವುದಕ್ಕಿಂತ ತಮ್ಮ ಅವಧಿಯಲ್ಲಿ ಜನತೆಗೆ ಹೇಗೆ ನ್ಯಾಯ ಕಲ್ಪಿಸಿದ್ದೇವೆ ಎಂಬ ಮನೋಭಾವನೆ ಬರಬೇಕು. ನಿಮ್ಮ ಹೆಸರು ಉಳಿಯುವಂತಹ ಕೆಲಸ ಮಾಡಬೇಕೆಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಎಂ.ಅಶ್ವಿನ್ ಕುಮಾರ್, ಹಸಿರು ಕ್ರಾಂತಿ ಹರಿಕಾರ ಬಾಬು ಜಗಜೀವನ ರಾಂ ದೇಶಕಂಡ ಅಪ್ರತಿಮ ನಾಯಕ. ಬಾಬು ಜಗಜೀವನ ರಾಂ ಮತ್ತು ಅಂಬೇಡ್ಕರ್ ಅವರು ದೇಶಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರ ಆದರ್ಶ ಅರ್ಥೈಸಿಕೊಳ್ಳಲು ದೇಶದ ನಾಗರಿಕರು ವಿಫಲವಾದ ಹಿನ್ನೆಲೆಯಲ್ಲಿ ಸಂವಿಧಾನದ ಜಾರಿ ವಿಳಂಬವಾಗಿದೆ. ಹೀಗಾಗಿ ಎಲ್ಲರೂ ಸಂವಿಧಾನದ ಆಶಯ ಮನನ ಮಾಡಿಕೊಂಡು ಸಂವಿಧಾನದ ಸಂಪೂರ್ಣ ಜಾರಿಗೆ ಒಕ್ಕೊರಲಿನ ಧ್ವನಿ ಎತ್ತಬೇಕು ಎಂದರು.

> **ನಾವು ಜಾತಿಯನ್ನು ಅಸ್ತ್ರವನ್ನಾಗಿಸಿಕೊಂಡು ಮಾತನಾಡುವುದನ್ನು ಬಿಡಬೇಕು. ಅಟ್ರಾಸಿಟಿ ಕೇಸುಗಳ ಬಗ್ಗೆ ಮಾತನಾಡದೇ ಎಲ್ಲಾ ಜನಾಂಗದ ವರೊಂದಿಗೆ ಪ್ರೀತಿ ವಿಶ್ವಾಸದಿಂದ ಇದ್ದಾಗ ಮಾತ್ರ ನಾವು ಎಲ್ಲರಂತೆ ಸಮಾಜದಲ್ಲಿ ಬದುಕಲು ಸಾಧ್ಯ. ನಾವು ಕೇವಲ ಮಾತಿನಲ್ಲಿ ತಾಲೂಕಿನಲ್ಲಿ 15 ಸಾವಿರದಷ್ಟು ಜನಸಂಖ್ಯೆ ಇದ್ದೇವೆ ಎನ್ನುತ್ತೇವೆ. ಆದರೆ ಕಾರ್ಯಕ್ರಮದಲ್ಲಿ 500 ಮಂದಿಯೂ ಉಪಸ್ಥಿತರಿಲ್ಲ. ಎಲ್ಲಿಯವರೆಗೆ ನಾವು ಸಂಘಟಿತರಾಗುವುದಿಲ್ಲವೋ ಅಲ್ಲಿಯ ತನಕ ನಮಗೆ ಮುಖ್ಯಮಂತ್ರಿಯಂತಹ ಉನ್ನತ ರಾಜಕೀಯ ಸ್ಥಾನಮಾನ ದೊರಕಲು ಸಾಧ್ಯವಿಲ್ಲ.**
> – **ಅರ್ಜುನ್, ಪುರಸಭಾ ಸದಸ್ಯ.**

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಅಧ್ಯಕ್ಷ ಸಿದ್ದಾರ್ಥ, ಮಾಜಿ ಸದಸ್ಯ ಜೈಪಾಲ್ ಭರಣಿ, ಪುರಸಭೆ ಉಪಾಧ್ಯಕ್ಷೆ ಪ್ರೇಮ, ಡಾ.ಬಾಬು ಜಗಜೀವನ ರಾಂ ಸಂಘದ ಅಧ್ಯಕ್ಷ ಮಲಿಯೂರು ಶಂಕರ್, ಮಾಜಿ ಅಧ್ಯಕ್ಷ ಮೂಗೂರು ಸಿದ್ದರಾಜು, ಕೆ.ಎನ್.ಪ್ರಭುಸ್ವಾಮಿ, ಡಾ.ಬಿ.ಆರ್. ಅಂಬೇಡ್ಕರ್ ಸಂಘದ ಕರೋಹಟ್ಟಿ ಮಹದೇವಯ್ಯ, ಉಪನ್ಯಾಸಕ ಕುಮಾರಸ್ವಾಮಿ, ಮಾಜಿ ತಾಪಂ ಸದಸ್ಯ ಜವರಯ್ಯ, ಪುರಸಭೆ ಸದಸ್ಯರಾದ ಟಿ.ಎಂ.ನಂಜುಂಡಸ್ವಾಮಿ, ಮಂಜುನಾಥ್, ಕುರುಬ ಸಂಘದ ಬಸವರಾಜು, ವಿಚಾರವಾದಿ ಪ್ರಭುಸ್ವಾಮಿ, ಸಿದ್ದಪ್ಪ, ತಹಸೀಲ್ದಾರ್ ಬಿ.ಗಿರಿಜಾ, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ಇಓ ಕೃಷ್ಣ, ಶಿರಸ್ತೇದಾರ್ ಪ್ರಭುರಾಜ್, ಗ್ರಾಪಂ ಸದಸ್ಯ ವಿಜಾಪುರ ಶಿವಶಂಕರ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ, ಎಸ್‌ಐ ಸಿದ್ದಯ್ಯ ಮತ್ತಿತರರಿದ್ದರು.

ಕೆ.ಆರ್.ನಗರದಲ್ಲಿ ಹಸಿರು ಕ್ರಾಂತಿ ಹರಿಕಾರ ಬಾಬೂಜಿ ಸ್ಮರಣೆ



ಕೆ.ಆರ್.ನಗರ, ಏ.5– ರಾಜಕಾರಣಿಗಳು ಮಹಾತ್ಮರ ಗುಣಗಳನ್ನು ಅಳವಡಿಸಿಕೊಂಡಾಗ ಮಾತ್ರ ಜಯಂತಿ ಆಚರಣೆಗೆ ಅರ್ಥ ಬರುತ್ತದೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಪುರಸಭೆ ವೃತ್ತದಲ್ಲಿ ತಾಲೂಕು ಆಡಳಿತ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ಡಾ.ಬಾಬು ಜಗಜೀವನ್‌ರಾಂ 115ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಬಿಜೆಪಿ ಸರ್ಕಾರ ಮಾಡುವ ವ್ಯಾಪಾರ, ತಿನ್ನುವ ಅನ್ನಕ್ಕೂ, ಹಾಕುವ ಬಟ್ಟೆಗೂ ರಾಜಕೀಯ ಮಾಡಿ ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ ಎಂದರು. ನೆರೆಯ ರಾಷ್ಟ್ರಗಳಲ್ಲಿ ಪ್ರಸ್ತುತ ತೀವ್ರ ಆರ್ಥಿಕ ಬಿಕ್ಕಟ್ಟು ಎದುರಾಗಿದ್ದು, ಅನ್ನಕ್ಕಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಆದರೆ ನಮ್ಮ ದೇಶದಲ್ಲಿ ಬಾಬು ಜಗಜೀವನ ರಾಂ ಅವರ ದೂರದೃಷ್ಟಿ ಫಲವಾಗಿ ಜಾರಿಗೆ ತಂದ ಆಹಾರ ಭದ್ರತೆ ಕಾಯ್ದೆಯಿಂದಾಗಿ ಇಂದಿನ ಜನತೆ ನೆಮ್ಮದಿಯಿಂದ ಆಹಾರ ಸೇವಿಸುವಂತಾಗಿದೆ ಎಂದು ತಿಳಿಸಿದರು.

ಆದರ್ಶ ಪುರುಷರ ಜಯಂತಿಗಳನ್ನು ಅದ್ದೂರಿಯಾಗಿ ಆಚರಿಸುವ ಮೂಲಕ ಜನ ಮೆಚ್ಚಿಸುವ ಕೆಲಸ ಮಾಡುವುದನ್ನು ಬಿಟ್ಟು ಅವರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಮಹನೀಯರ ಜಯಂತಿಗಳಿಗೆ ಅರ್ಥ ಬರುತ್ತದೆ. ಅಧಿಕಾರಿಗಳು ಇಂತಹ ಮಹನೀಯರ ಜಯಂತಿ ದಿನಗಳಲ್ಲಿ ಹೆಚ್ಚು ಸಮಯ ಕೆಲಸ ಮಾಡುವುದರ ಜೊತೆಗೆ ಸಮಾಜದ ಕಟ್ಟಕಡೆಯ ವ್ಯಕ್ತಿಗಳನ್ನು ಅಲೆದಾಡಿಸದೆ ಸಕಾಲದಲ್ಲಿ ಕೆಲಸ ಮಾಡಿ ಕೊಡಿ ಎಂದು ಸಲಹೆ ನೀಡಿದರು.

ಸಮಾಜದ ಸಮುದಾಯ ಭವನಕ್ಕೆ ಈಗಾಗಲೇ 1.50 ಕೋಟಿ ರೂ.ಗಳನ್ನು ಸರ್ಕಾರದಿಂದ ಮಂಜೂರು ಮಾಡಿಸಲಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನಕ್ಕೆ ಮೈಸೂರು–ಹಾಸನ ಮುಖ್ಯರಸ್ತೆಯಲ್ಲಿ 1 ಎಕರೆ ಜಮೀನು ನೀಡಲಾಗಿದೆ ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ಎಸ್‌ಸಿ, ಎಸ್‌ಟಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಅಂತರ್ಜಾತಿ ವಿವಾಹವಾದವರಿಗೆ ಸರ್ಕಾರದಿಂದ ನೀಡುವ 3 ಲಕ್ಷ ರೂ.ಗಳ ಚೆಕ್ ವಿತರಿಸಲಾಯಿತು. ಇದಕ್ಕೂ ಮುನ್ನ ಡಾ.ಬಾಬು ಜಗಜೀವನ್ ರಾಂ ಭಾವಚಿತ್ರವನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಮುಖ್ಯ ಭಾಷಣಕಾರರಾಗಿ ನಿಂಗರಾಜು, ತಾಲೂಕು ಆದಿಜಾಂಬವ ಸಂಘದ ಅಧ್ಯಕ್ಷ ಲೋಕೇಶ್, ದಲಿತ ಮುಖಂಡ ನಾಗರಾಜು, ತಾಪಂ ಮಾಜಿ ಸದಸ್ಯ ಶ್ರೀನಿವಾಸ್ ಪ್ರಸಾದ್, ಸಮಾಜ ಕಲ್ಯಾಣಾಧಿಕಾರಿ ಅಶೋಕ್ ಮಾತನಾಡಿದರು.

ವೇದಿಕೆಯಲ್ಲಿ ಪುರಸಭಾಧ್ಯಕ್ಷೆ ಸೌಮ್ಯ, ಸದಸ್ಯರಾದ ಸಂತೋಷ್ ಗೌಡ, ಮಂಜುಳಾ, ಕೆ.ಎಲ್.ಜಗದೀಶ್, ಕೆ.ಪಿ.ಪ್ರಭುಶಂಕರ್, ಸರೋಜ, ಮಾಜಿ ಅಧ್ಯಕ್ಷ ಕಾಂತರಾಜು, ತಹಸೀಲ್ದಾರ್ ಸಂತೋಷ್, ತಾಪಂ ಇಓ ಸತೀಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜೆ. ಅರುಣ್ ಕುಮಾರ್, ಎಇಇಗಳಾದ ಬಸವರಾಜ್, ಅರ್ಕೇಶ್, ತೋಟಗಾರಿಕೆ ಸಹಾಯಕ ನಿರ್ದೇಶಕ ಪ್ರಸನ್ನ, ಖಜಾನಾಧಿಕಾರಿ ಶಿವಲಿಂಗೇಗೌಡ, ಕೃಷಿ ಸಹಾಯಕ ನಿರ್ದೇಶಕ ಗುರುಪ್ರಸಾದ್, ಬಿಸಿಎಂ ಅಧಿಕಾರಿ ಮಹೇಶ್, ಸಿಪಿಐ ಲವ ಸೇರಿದಂತೆ ಇನ್ನಿತರರಿದ್ದರು.

ದೇಶದ ಅಪ್ರತಿಮ ನಾಯಕ ಬಾಬೂಜಿ



ಭೇರ್ಯ, ಏ.5– ದೇಶದ ಸಮಗ್ರ ಅಭಿವೃದ್ಧಿಗಾಗಿ ದುಡಿದ ಅಪ್ರತಿಮ ನಾಯಕ ಬಾಬೂ ಜಗಜೀವನರಾಂ. ಅವರ ದೂರದೃಷ್ಟಿ ಫಲವಾಗಿ ದೇಶದಲ್ಲಿ ಹಸಿರು ಕ್ರಾಂತಿಯಾಗಿ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ ಎಂದು ಗ್ರಾಪಂ ಅಧ್ಯಕ್ಷೆ ತಾಯಮ್ಮ ತಿಳಿಸಿದರು.

ಇಲ್ಲಿನ ಗ್ರಾಪಂನಲ್ಲಿ ಹಸಿರು ಕ್ರಾಂತಿ ಹರಿಕಾರ ಬಾಬೂ ಜಗಜೀವನರಾಂ ಅವರ 115ನೇ ಜನ್ಮ ದಿನಾಚರಣೆ ಅಂಗವಾಗಿ ಬಾಬು ಜಗಜೀವನರಾಂ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ತುಳಿತಕ್ಕೊಳಗಾದ ಜನರ ಶಕ್ತಿಯಾದ ಬಾಬೂಜಿ ಅವರ ಆದರ್ಶ ಹಾಗೂ ಸಾಧನೆಗಳನ್ನು ಯುವಜನರು ಕಡ್ಡಾಯವಾಗಿ ಪಾಲಿಸುವ ಮೂಲಕ ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

ಪಿಡಿಓ ಕೆ.ಎ.ಮಂಜುನಾಥ್ ಮಾತನಾಡಿ, ಬಾಬೂಜಿ ಹಸಿರು ಕ್ರಾಂತಿ ಹರಿಕಾರ. ಬಡ್ತಿ ಮೀಸಲಾತಿ ಮತ್ತು ಕಾರ್ಮಿಕರ ಕಾಯ್ದೆಗಳ ಜನಕ ಹಾಗೂ ಅತ್ಯುತ್ತಮ ಸಂಸದೀಯ ಪಟುವಾಗಿ 50 ವರ್ಷಗಳ ಕಾಲ ದೇಶದ ರಾಜಕಾರಣಿಯಾಗಿದ್ದರು. ಶೋಷಿತರ ಧ್ವನಿಯಾಗಿದ್ದ ಇವರು ದೇಶದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಅಸ್ಪೃಶ್ಯತೆ ನಿವಾರಣೆಯಲ್ಲೂ ಇವರ ಕೊಡುಗೆ ಅಪಾರ. ಅದೃಷ್ಟ ನಂಬಬೇಡ ನಿನ್ನ ಪ್ರಯತ್ನ ನಂಬು ಎಂದು ಅಂಬೇಡ್ಕರ್ ಹೇಳಿದರೇ, ಇವರು ಕಷ್ಟಪಟ್ಟು ದುಡಿಯಬೇಕು ಎನ್ನುವುದು ನಿನ್ನ ಜೀವನದ ಮಂತ್ರವಾದರೇ ಅದೃಷ್ಟ ನಿನ್ನ ಮನೆ ಬಾಗಿಲಿಗೆ ಬರುತ್ತದೆ ಎಂದು ಹೇಳಿದ ಮಾತು ಸತ್ಯವಾಗಿವೆ. ಈ ಇಬ್ಬರು ಮಹಾನ್ ನಾಯಕರ ದೃಷ್ಟಿಕೋನ ಒಂದೇ ಆಗಿದ್ದರೂ ಚಿಂತನೆ ಮಾತ್ರ ಬೇರೆಯಾಗಿತ್ತು ಎಂದರು. ಗ್ರಾಪಂ ಉಪಾಧ್ಯಕ್ಷ ಬಿ.ಕೆ.ಶಿವಕುಮಾರ್, ಸದಸ್ಯರ ಹಾಗೂ ಪೌರ ಕಾರ್ಮಿಕರು, ಸಿಬ್ಬಂದಿ ಇದ್ದರು.

ಬಾಬೂಜಿ ಸಮುದಾಯ ಭವನ ನಿರ್ಮಾಣಕ್ಕೆ 2 ಕೋಟಿ ಮಂಜೂರು

ಭವನಕ್ಕೆ ಶೀಘ್ರ ಚಾಲನೆ: ಶಾಸಕ ಬಿ.ಹರ್ಷವರ್ಧನ್

ನಂಜನಗೂಡು, ಏ.5– ತಾಲೂಕಿನಲ್ಲಿ ಡಾ.ಬಾಬು ಜಗಜೀವನರಾಂ ಸಮುದಾಯ ಭವನ ನಿರ್ಮಾಣಕ್ಕೆ 2 ಕೋಟಿ ಅನುದಾನ ಮಂಜೂರಾಗಿದ್ದು, ಶೀಘ್ರ ಭೂಮಿ ಪೂಜೆ ನೆರವೇರಿಸಲಾಗುವುದು ಎಂದು ಶಾಸಕ ಬಿ.ಹರ್ಷರ್ಧನ್ ತಿಳಿಸಿದರು.

ನಗರದ ಶ್ರೀಕಂಠೇಶ್ವರ ಕಲಾ ಮಂದಿರದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಏರ್ಪಡಿಸಿದ್ದ ಡಾ.ಬಾಬು ಜಗಜೀವನರಾಂ ಅವರ 115ನೇ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಬಾಬು ಜಗಜೀವನರಾಂ ಅವರು ಹಸಿರು ಕ್ರಾಂತಿ ಮೂಲಕ ದೇಶ ಆಹಾರ ಸ್ವಾವಲಂಬನೆ ಗಳಿಸುವಂತೆ ಮಾಡಿದರು. ಅವರ ಶ್ರಮದಿಂದಾಗಿ ಬಡವರಿಗೆ ಆಹಾರ ಭದ್ರತೆಯಡಿ ಆಹಾರ ಧಾನ್ಯಗಳ ಪೂರೈಕೆ ಮಾಡಲಾಗುತ್ತಿದೆ ಎಂದರು. ತಾಲೂಕಿನಲ್ಲಿ ಸುಸಜ್ಜಿತ ಬಾಬೂಜಿ ಸಮುದಾಯ ಭವನ ನಿರ್ಮಾಣಕ್ಕೆ ಸರ್ಕಾರದ ಮತ್ತೆ 1 ಕೋಟಿ ಅನುದಾನ ತಂದಿದ್ದೇನೆ. ಒಟ್ಟು 2 ಕೋಟಿ ಅನುದಾನ ಮಂಜೂರಾಗಿದ್ದು, ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ದೆಹಲಿಯಿಂದ ಬಂದ ನಂತರ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು.



ನುಗು ಏತ ನೀರಾವರಿ ಯೋಜನೆಗೆ ಆರ್ಥಿಕ ಅನುಮೋದನೆ: ಮಂಡ್ಯ ಜಿಲ್ಲೆಯಂತೆ ನಂಜನಗೂಡನ್ನು ಹಸಿರೀಕರಣ ಮಾಡುವ ಅಭಿಲಾಷೆ ಇದ್ದು, ಬಾಬು ಜಗಜೀವನರಾಂ ಜಯಂತಿಯಂದೆ ಮುಖ್ಯಮಂತ್ರಿಗಳು ನುಗು ಏತ ನಿರಾವರಿ ಯೋಜನೆಗೆ ಆರ್ಥಿಕ ಅನುಮೋದನೆ ನೀಡಿರುವುದು ನನಗೆ ಸಂತೋಷ ತಂದಿದೆ. ಮೇ ತಿಂಗಳಿನಲ್ಲಿ ಯೋಜನೆಗೆ ಚಾಲನೆ ನೀಡಿ 11 ತಿಂಗಳಲ್ಲಿ ಕೆಲಸ ಪೂರ್ಣಗೊಳ್ಳಲಿದೆ ಎಂದರು.

ಶಾಸಕ ಡಾ.ಯತೀಂದ್ರ ಮಾತನಾಡಿ, ಡಾ.ಬಾಬು ಜಗಜೀವನರಾಂ ದೇಶ ಕಂಡ ಧೀಮಂತ ನಾಯಕ. ಅವರು ವಿದ್ಯಾರ್ಥಿ ದೆಸೆಯಿಂದಲೇ ರಾಜಕೀಯ ಪ್ರವೇಶಿಸಿ ದಲಿತರ ಹಕ್ಕಿಗಾಗಿ, ಸಮಾನತೆಗಾಗಿ ಹೋರಾಡಿದವರು. ಅವರ ಹಸಿರು ಕ್ರಾಂತಿ ಫಲವಾಗಿ ದೇಶ ಆಹಾರ ಸ್ವಾವಲಂಬನೆ ಗಳಿಸಿದೆ. ಸುದೀರ್ಘ ಕಾಲ ಸಂಸದರಾಗಿ, ಸಚಿವರಾಗಿ ದೇಶದ ಭದ್ರತೆಗಾಗಿ ನೀಡಿದ ಕೊಡುಗೆ ಅನನ್ಯ ಎಂದರು. ಡಾ.ಮೈಲಹಳ್ಳಿ ರೇವಣ್ಣ ಮಾತನಾಡಿ, ಜಗಜೀವನರಾಂ ಸಮಾಜ ಸುಧಾರಕರಾಗಿ ದಲಿತರ ಸಸಕ್ತ ಧ್ವನಿಯಾಗಿ ನಾಡಿಗೆ ಸಲ್ಲಿಸಿದ ಸೇವೆ ಅನುಪಮ. ಅಲ್ಲದೆ ದೇಶದ ರಾಜಕೀಯ ಭವಿಷ್ಯ ರೂಪಿಸಿದ ಅದಮ್ಯ ಚೇತನ ಎಂದರು.

ಇದಕ್ಕೂ ಮುನ್ನ ಡಾ.ಬಾಬುಜಗಜೀವನರಾಂ ಅವರ ಭಾವಚಿತ್ರ ಮೆರವಣಿಗೆಗೆ ನಗರದ ಜೂನಿಯರ್ ಕಾಲೇಜು ಆವರಣದಲ್ಲಿ ಚಾಲನೆ ನೀಡಲಾಯಿತು. ನಾದಸ್ವರ, ಡೊಳ್ಳು ಕುಣಿತ, ನಗಾರಿ, ಗಾರುಡಿ ಗೊಂಬೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳ ಜೊತೆ ಅದ್ದೂರಿಯಾಗಿ ಮೆರವಣಿಗೆ ಮಾಡಲಾಯಿತು.

ಸಮಾರಂಭದಲ್ಲಿ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ನಗರಸಭಾಧ್ಯಕ್ಷ ಹೆಚ್.ಎಸ್. ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಸದಸ್ಯರಾದ ವಿಜಯಲಕ್ಷ್ಮಿ, ಮಹದೇವಮ್ಮ, ಗಾಯತ್ರಿ, ಎನ್.ಎಸ್.ಯೋಗೀಶ್, ತಹಸೀಲ್ದಾರ್ ಶಿವಮೂರ್ತಿ, ತಾಪಂ ಇಓ ಹೆಚ್.ಜಿ. ಶ್ರೀನಿವಾಸ್, ನಗರಸಭಾ ಆಯುಕ್ತ ರಾಜಣ್ಣ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಜಿ.ಶ್ರೀನಿವಾಸ ಪ್ರಸಾದ್, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ತಾಪಂ ಮಾಜಿ ಸದಸ್ಯ ಶಿವಣ್ಣ ಮುಖಂಡರಾದ ಶಿವರುದ್ರ, ಸ್ವಾಮಿ, ದೇವರಾಜು, ಮಧುರಾಜ್ ಇದ್ದರು.

ಶೋಷಿತರ, ಹಿಂದುಳಿದವರ ಧ್ವನಿಯಾಗಿದ್ದ ಬಾಬೂಜಿ ಅಜರಾಮರ



ಪಿರಿಯಾಪಟ್ಟಣ, ಏ.5(ವೀರೇಶ್)– ಸಮಾಜದ ಅಸಮಾನತೆ ವಿರುದ್ಧ ಹೋರಾಡಿದ ಅಪ್ರತಿಮ ನಾಯಕ ಡಾ.ಬಾಬು ಜಗಜೀವನ ರಾಂ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ಡಾ.ಬಾಬು ಜಗಜೀವನ ರಾಂ ಅವರ 115ನೇ ಜಯಂತಿಯಲ್ಲಿ ಮಾತನಾಡಿದ ಅವರು, ಜಾತಿ ಹೆಸರಿನಲ್ಲಿ ನಮ್ಮ ಹಕ್ಕುಗಳನ್ನು ಪ್ರತಿಪಾದಿಸುವುದು ಸರಿಯಲ್ಲ. ನಾವೆಲ್ಲ ಒಂದೇ ಎಂಬ ಮನೋಭಾವನೆ ಬೆಳೆಸಿಕೊಳ್ಳದಿದ್ದರೆ ಜೀವನದಲ್ಲಿ ತಪ್ಪು ಹೆಜ್ಜೆ ಇಡಬೇಕಾಗುತ್ತದೆ. ಡಾ.ಬಾಬು ಜಗಜೀವನ ರಾಂ ಅವರು ಕೇಂದ್ರ ಸಚಿವರಾಗಿ ಹಲವು ಖಾತೆಗಳನ್ನು ನಿಭಾಯಿಸುವ ಮೂಲಕ ಶೋಷಿತರ, ಹಿಂದುಳಿದವರ ಧ್ವನಿಯಾಗಿ ಅಜರಾಮರರಾಗಿದ್ದಾರೆ ಎಂದರು.

ಬಿಇಓ ವೈ.ಕೆ.ತಿಮ್ಮೇಗೌಡ ಮಾತನಾಡಿ, ಸಮಾಜದ ಜಾತಿ ವ್ಯವಸ್ಥೆ ವಿರುದ್ಧ ಹೋರಾಡಲು ಹಿಂದುಳಿದವರನ್ನು ಸಂಘಟಿಸುವ ಮೂಲಕ ಸರ್ವ ಜನಾಂಗದ ಹಿತ ಕಾಪಾಡಿ ಹೆಚ್ಚುತ್ತಿರುವ ಜನಸಂಖ್ಯೆಯಿಂದ ಆಹಾರಕ್ಕೆ ಹಾಹಾಕಾರ ಉಂಟಾಗುವುದನ್ನು ತಪ್ಪಿಸಲು ಹಸಿರು ಕ್ರಾಂತಿಯ ಮೂಲಕ ದಕ್ಷ ಆಡಳಿತ ನೀಡಿದವರು ಡಾ.ಜಗಜೀವನ ರಾಂ ಎಂದರು.

ತಹಸೀಲ್ದಾರ್ ಕೆ.ಚಂದ್ರಮೌಳಿ, ತಾಪಂ ಮಾಜಿ ಸದಸ್ಯರಾದ ಟಿ.ಈರಯ್ಯ, ಎಸ್.ರಾಮು, ಗ್ರಾಪಂ ಸದಸ್ಯ ನರಸಿಂಹಮೂರ್ತಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದೇಗೌಡ, ಸರ್ವೇಯರ್ ಎಂ.ಕೆ ಪ್ರಕಾಶ್ ಮಾತನಾಡಿದರು. ಇದೇ ವೇಳೆ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರ ಪತ್ನಿ ನಿಧನಕ್ಕೆ ಸಂತಾಪ ಸೂಚಿಸಿ ಮೌನಾಚರಣೆ ಮಾಡಲಾಯಿತು.

ಈ ವೇಳೆ ಪುರಸಭೆ ಪ್ರಭಾರ ಅಧ್ಯಕ್ಷೆ ನಾಗರತ್ನ, ಮಾಜಿ ಅಧ್ಯಕ್ಷ ಮಂಜುನಾಥ್ ಸಿಂಗ್, ಸದಸ್ಯರಾದ ನಿರಂಜನ್, ಪ್ರಕಾಶ್ ಸಿಂಗ್, ನಳಿನಿ, ಪುಷ್ಪಲತಾ, ಟಿಎಪಿಸಿಎಂಎಸ್ ಅಧ್ಯಕ್ಷ ತಿಮ್ಮೇಗೌಡ, ನಿರ್ದೇಶಕರಾದ ನಾಗೇಂದ್ರ, ತಿಮ್ಮನಾಯಕ, ತಾಪಂ ಮಾಜಿ ಸದಸ್ಯರಾದ ರಂಗಸ್ವಾಮಿ, ಮಲ್ಲಿಕಾರ್ಜುನ್, ಆರ್.ಎಸ್.ಮಹದೇವ್, ತಾಲೂಕು ಆರೋಗ್ಯಾಧಿಕಾರಿ ಡಾ.ಶರತ್ ಬಾಬು, ಜಿಪಂ ಎಇಇ ಮಂಜುನಾಥ್, ಪಿಡಬ್ಲ್ಯುಡಿ ಎಇಇ ಜಯಂತ್, ಆರ್ ಡಬ್ಲ್ಯುಎಸ್ ಎಇಇ ಪ್ರಭು, ಭೂಮಾಪನ ಇಲಾಖೆ ಸಹಾಯಕ ನಿರ್ದೇಶಕ ಚಿಕ್ಕಣ್ಣ, ಇನ್‌ಸ್ಪೆಕ್ಟರ್ ಜಗದೀಶ್, ಕೃಷಿ ಇಲಾಖೆ ಸಹಾಯಕ ಪ್ರಸಾದ್, ಶಿರಸ್ತೇದಾರ್‌ಗಳಾದ ನಂದಕುಮಾರ್, ಟ್ರಿಜಾ, ಉಪ ತಹಸೀಲ್ದಾರ್ ಶಶಿಧರ್, ಮುಖಂಡರಾದ ತಮ್ಮಣ್ಣಯ್ಯ, ದೇವೇಂದ್ರ, ಸಿ.ಎಸ್.ಜಗದೀಶ್, ಗಿರೀಶ್, ಕುಮಾರ್, ಪುಟ್ಟನಾಯಕ, ರಾಮಚಂದ್ರ ಮತ್ತಿತರಿದ್ದರು.

ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ್ ರಾಂ ಜಯಂತಿಯನ್ನು ಆಚರಿಸಲಾಯಿತು. ಈ ವೇಳೆ ಇನ್‌ಸ್ಪೆಕ್ಟರ್ ಶ್ರೀಕಾಂತ್, ಎಸ್‌ಐ ದೊಡ್ಡೇಗೌಡ, ಎಎಸ್‌ಐ ಸೋಮಣ್ಣ, ಜಯರಾಮೇಗೌಡ, ಕುಮಾರ್, ಮಹಿಳಾ ಮುಖ್ಯ ಪೇದೆ ನಾಗರತ್ನಮ್ಮ, ಪೇದೆಗಳಾದ ಮಹದೇವಮ್ಮ, ವಿಜಯ ರಾಘವನ್, ಚೇತನ್, ದಿನೇಶ್, ಮಹದೇವ್, ಚೇತನ್, ಶ್ರೀನಿವಾಸ್, ಮಲ್ಲೇಶ್, ಮಧು, ಮಂಜುನಾಥ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಂಠಿಕುಮಾರ್, ಡಿಎಸ್‌ಎಸ್ ಅಧ್ಯಕ್ಷ ಚಂದ್ರು, ದೇವರಾಜ್, ಬ್ರಿಜೇಶ್ ಸೇರಿದಂತೆ ಇನ್ನಿತರರಿದ್ದರು.



ಸಮ ಸಮಾಜಕ್ಕಾಗಿ ಹಂಬಲಿಸಿದ ಕನಸುಗಾರ ಬಾಬೂಜಿ



ಹುಣಸೂರು, ಏ.5(ಕೆಕೆ)– ತಮ್ಮ ರಾಜಕೀಯ ಜೀವನವನ್ನು ಹಿಂದುಳಿದ ವರ್ಗದ ಶೋಷಿತರು, ದಲಿತರಿಗಾಗಿ ಮುಡಿಪಾಗಿಟ್ಟ ಬಾಬು ಜಗಜೀವನ ರಾಂ ಸಮ ಸಮಾಜಕ್ಕಾಗಿ ಹಂಬಲಿಸಿದ ಕನಸುಗಾರ ಎಂದು ಮುಖ್ಯ ಭಾಷಣಕಾರ ಕಲ್ಕುಣಿಕೆ ಜೆ.ಮಹದೇವ್ ಬಣ್ಣಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಬಾಬು ಜಗಜೀವನ್ ರಾಂ ಅವರ 115ನೇ ಜಯಂತಿಯಲ್ಲಿ ಮಾತನಾಡಿದ ಅವರು, ಅಸಹಾಯಕ ಜನರ ಹಸಿವು ನೀಗಿಸುವ ಮೂಲಕ ದೀನ ದಲಿತರು, ಶೋಷಿತರು ಸೇರಿದಂತೆ ಲಕ್ಷಾಂತರ ಮಂದಿಯ ಉನ್ನತಿಗಾಗಿ ಅವರ ಶ್ರೇಯೋಭಿವೃದ್ಧಿಗಾಗಿ ಜನಪರ ಕಾಯ್ದೆಗಳ ಮೂಲಕ ಶ್ರಮಿಸಿದ ಕರ್ಮಯೋಗಿ ಬಾಬೂಜಿ ಎಂದರು.

ಜೀತಗಾರರ ಮುಕ್ತಿಗಾಗಿ ಭೂರಹಿತರ ಕಲ್ಯಾಣಕ್ಕಾಗಿ ಹಲವು ಕ್ರಾಂತಿಕಾರಕ ಯೋಜನೆಗಳನ್ನು, ಕಾಯ್ದೆಗಳನ್ನು ಅಸ್ತ್ರವಾಗಿ ಬಳಸಿಕೊಂಡ ಬಾಬು ಜಗಜೀವನ್ ರಾಂ ಕೃಷಿ ಮಂತ್ರಿಯಾಗಿದ್ದ ಅವಧಿಯಲ್ಲಿ ತಲೆದೋರಿದ ಕ್ಷಾಮ ಹಾಗೂ ತೀವ್ರ ಆಹಾರ ಸಮಸ್ಯೆ ನಿವಾರಣೆಗೆ ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳುವ ಮೂಲಕ ಕೃಷಿ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದರು ಎಂದರು.

ದೇಶದ ಪ್ರಧಾನಿಯಾಗುವ ಅವಕಾಶ ವಿದ್ದರೂ, ನೇಪಥ್ಯಕ್ಕೆ ಸರಿದು ಚರಣ್ ಸಿಂಗ್ ಪ್ರಧಾನಿಯಾಗಲು ಸಮ್ಮತಿಸಿ ತ್ಯಾಗ ಮೆರೆದ ದೇಶಪ್ರೇಮಿ ಬಾಬು ಜಗಜೀವನ ರಾಂ ಇಂದಿರಾ ಗಾಂಧಿ ಘೋಷಿಸಿದ ತುರ್ತು ಪರಿಸ್ಥಿತಿಯ ಅತಿರೇಕಗಳಿಗೆ ವಿಷಾದಿಸಿ ಕಾಂಗ್ರೆಸ್ ತೊರೆದು ಸ್ವಾಭಿಮಾನ ರಾಜಕೀಯ ನಡೆಗೆ ಮಾದರಿಯಾದರು ಎಂದರು.

ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮಾತನಾಡಿ, ದಲಿತರಿಗೆ ಡಾ. ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನ್ ರಾಂ ಎರಡು ಕಣ್ಣುಗಳಿದ್ದಂತೆ. ಒಬ್ಬರು ಸಂವಿಧಾನಕ್ಕೆ ಶಕ್ತಿ ತುಂಬಿದರೇ, ಮತ್ತೊಬ್ಬರು ಸಂವಿಧಾನದ ಕಾಯ್ದೆಗಳನ್ನು ಜನಸಾಮಾನ್ಯರ ಪ್ರಗತಿಗೆ ಬಳಸಿಕೊಂಡು ಹಸಿದವರಿಗೆ ಅನ್ನವನ್ನಿಕ್ಕಿದ ಮಹಾ ಪುರುಷ ಎಂದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಅಂಬೇಡ್ಕರ್ ಮತ್ತು ಬಾಬು ಜಗಜೀವನ ರಾಂ ಅವರುಗಳ ಆದರ್ಶ ಮತ್ತು ಚಿಂತನೆಗಳನ್ನು ಯುವ ಜನಾಂಗಕ್ಕೆ ತಲುಪಿಸುವ ಕೆಲಸವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಎಸಿ ವರ್ಣಿತ್ ನೇಗಿ, ತಹಸೀಲ್ದಾರ್ ಡಾ.ಅಶೋಕ್, ತಾಪಂ ಇಓ ಗಿರೀಶ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ರೇಷ್ಮ, ಬಿಇಓ ನಾಗರಾಜು, ಕ್ಷೇತ್ರ ಸಮನ್ವಯಧಿಕಾರಿ ಸಂತೋಷ್, ಟ್ಯಾಲೆಂಟ್ ವಿದ್ಯಾಸಂಸ್ಥೆ ನವೀನ್ ರೈ, ನಗರಸಭಾ ಅಧ್ಯಕ್ಷೆ ಸಮೀನಾ ಪರ್ವೀನ್, ಉಪಾಧ್ಯಕ್ಷ ದೇವನಾಯ್ಕ, ಆಯುಕ್ತ ರವಿಕುಮಾರ್, ಮಾಜಿ ಅಧ್ಯಕ್ಷರಾದ ಅನುಷಾ, ಸೌರಭ, ಲಕ್ಷ್ಮಣ್, ಹುಡಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಅನಂದಸ್ವಾಮಿ, ನಿಂಗರಾಜ್ ಮಲ್ಲಾಡಿ, ರಾಮಕೃಷ್ಣ, ರಾಮೇಗೌಡ, ಗ್ರಾಪಂ ಸದಸ್ಯ ಮಲ್ಲೇಶ್, ಬಸವರಾಜು, ರಾಜು, ಸ್ವಾಮಿ, ಮಹದೇವ್.ಜೆ, ಕೆಂಪೇಗೌಡ, ನಗರಸಭಾ ಸದಸ್ಯರಾದ ಹೆಚ್.ಪಿ.ಸತೀಶ್, ರಾಣಿ ಪೆರುಮಾಳ್ ಇತರರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಮಾರ್ಬಿಯಸ್ (ಇಂ): ಬೆ.10.45ಕ್ಕೆ, ರಾ.9.50ಕ್ಕೆ, ಜೇಮ್ಸ್ (ಕ): ಮ.1ಕ್ಕೆ, ಅಟ್ಯಾಕ್ (ಹಿಂ): ಮ.3.55ಕ್ಕೆ, ಆರ್‌ಆರ್‌ಆರ್ (3ಡಿ)(ತೆ): ಸಂ.6.20ಕ್ಕೆ.
ಸ್ಕ್ರೀನ್ 2	ಬಾಡಿಗಾಡ್ (ಕ): ಬೆ.10.45ಕ್ಕೆ, ತಲೆದಂಡ (ಕ): ಮ.1.20ಕ್ಕೆ, ಜೇಮ್ಸ್ (ಕ): ಸಂ.4ಕ್ಕೆ, ರಾ.7ಕ್ಕೆ, ಅಟ್ಯಾಕ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 3	ಹೋಂ ಮಿನಿಸ್ಟರ್ (ಕ): ಬೆ.10.35ಕ್ಕೆ, ಸಂ.4.15ಕ್ಕೆ, ಲೋಕಲ್ ಟ್ರೈನ್ (ಕ): ಮ.1.30ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಸಂ.6.45ಕ್ಕೆ, ಆರ್‌ಆರ್‌ಆರ್ (2ಡಿ)(ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಆರ್‌ಆರ್‌ಆರ್ (2ಡಿ)(ಕ): ಬೆ.10.55ಕ್ಕೆ, ಆರ್‌ಆರ್‌ಆರ್ (2ಡಿ)(ತೆ): ಮ.2.30ಕ್ಕೆ, ಸಂ.6.15ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಆರ್‌ಆರ್‌ಆರ್ (ಹಿಂ): ಬೆ.9.30ಕ್ಕೆ, ಅಟ್ಯಾಕ್ (ಹಿಂ): ಮ.1.10ಕ್ಕೆ, ಆರ್‌ಆರ್‌ಆರ್ (3ಡಿ)(ತೆ): ಮ.3.55ಕ್ಕೆ, ಮಾರ್ಬಿಯಸ್ (ಇಂ): ರಾ.7.35ಕ್ಕೆ, ಆರ್‌ಆರ್‌ಆರ್ (3ಡಿ)(ಹಿಂ): ರಾ.10ಕ್ಕೆ.
ಸ್ಕ್ರೀನ್ 2	ಮಾರ್ಬಿಯಸ್ (ಇಂ): ಬೆ.9.35ಕ್ಕೆ, ಆರ್‌ಆರ್‌ಆರ್ (ತೆ): ಬೆ.11.55ಕ್ಕೆ, ಸಂ.6.10ಕ್ಕೆ, ಬಾಡಿಗಾಡ್ (ಕ): ಮ.3.35ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಜೇಮ್ಸ್ (ಕ): ಬೆ.9.50ಕ್ಕೆ, ಮ.3.45ಕ್ಕೆ, ರಾ.9.40ಕ್ಕೆ, ಮಾರ್ಬಿಯಸ್ (ಇಂ): ಮ.1ಕ್ಕೆ, ಅಟ್ಯಾಕ್ (ಹಿಂ): ಸಂ.6.55ಕ್ಕೆ.
ಸ್ಕ್ರೀನ್ 4	ಹೋಂ ಮಿನಿಸ್ಟರ್ (ಕ): ಬೆ.10.10ಕ್ಕೆ, ಸಂ.6.45ಕ್ಕೆ, ತಲೆದಂಡ (ಕ): ಮ.3.55ಕ್ಕೆ, ಲೋಕಲ್ ಟ್ರೈನ್ (ಕ): ಮ.12.55ಕ್ಕೆ, ಆರ್‌ಆರ್‌ಆರ್ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಲೋಕಲ್ ಟ್ರೈನ್ (ಕ): ಬೆ.10.30ಕ್ಕೆ, ಸಂ.4.15ಕ್ಕೆ, ಜೇಮ್ಸ್ (ಕ): ಮ.1.15ಕ್ಕೆ, ಅಟ್ಯಾಕ್ (ಹಿಂ): ರಾ.7ಕ್ಕೆ, ಆರ್‌ಆರ್‌ಆರ್ (2ಡಿ) (ತೆ): ರಾ.9.30ಕ್ಕೆ.
ಸ್ಕ್ರೀನ್ 2	ಬಾಡಿಗಾಡ್ (ಕ): ಬೆ.10.30ಕ್ಕೆ, ಆರ್‌ಆರ್‌ಆರ್ (ತೆ): ಮ.12.40ಕ್ಕೆ, ಹೋಂ ಮಿನಿಸ್ಟರ್ (ಕ): ಸಂ.4.05ಕ್ಕೆ, ಜೇಮ್ಸ್ (ಕ): ಸಂ.6.35ಕ್ಕೆ, ಅಟ್ಯಾಕ್ (ಹಿಂ): ರಾ.9.30ಕ್ಕೆ
ಸ್ಕ್ರೀನ್ 3	ಆರ್‌ಆರ್‌ಆರ್ (2ಡಿ)(ಕ): ಬೆ.10.30ಕ್ಕೆ, ಹೋಂ ಮಿನಿಸ್ಟರ್ (ಕ): ಮ.2ಕ್ಕೆ, ಮಾರ್ಬಿಯಸ್ (ಇಂ): ಸಂ.4.30ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ಸಂ.6.35ಕ್ಕೆ,
ಸ್ಕ್ರೀನ್ 4	ಹೋಂ ಮಿನಿಸ್ಟರ್ (ಕ): ಬೆ.10.30ಕ್ಕೆ, ತಲೆದಂಡ (ಕ): ಮ.1ಕ್ಕೆ, ಮನ್ಮಥ ಲೀಲೈ(ತ): ಮ.3.45ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಸಂ.6ಕ್ಕೆ, ಜೇಮ್ಸ್ (ಕ): ರಾ.9.15ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲವ್ ಮಾಕ್ಟೇಲ್ 2 (ಕ): ಸಂ.6ಕ್ಕೆ, ಡಿಯರ್ ಸತ್ಯ (ಕ): ಮ.12.35ಕ್ಕೆ, ರಾಧೆಶ್ಯಾಮ್ (ತೆ): ಬೆ.10.05ಕ್ಕೆ, ಬೆ.11.30ಕ್ಕೆ, ಮ.12.10ಕ್ಕೆ, ಮ.1ಕ್ಕೆ, ಮ.2.25ಕ್ಕೆ, ಮ.3.05ಕ್ಕೆ, ಮ.3.55ಕ್ಕೆ, ಸಂ.5.20ಕ್ಕೆ, ಸಂ.6.50ಕ್ಕೆ, ರಾ.8.15ಕ್ಕೆ, ರಾ.9.45ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಮ.2.50ಕ್ಕೆ, ರಾ.9.45ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.15ಕ್ಕೆ, ರಾ.9.45ಕ್ಕೆ, ಭೀಷ್ಮಪರ್ವಂ (ಮ): ರಾ.9ಕ್ಕೆ, ಪಡ (ಮ): ಸಂ.6.40ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆರ್‌ಆರ್‌ಆರ್ (ಕ)	1 ಪ್ರದರ್ಶನಗಳು
ಆರ್‌ಆರ್‌ಆರ್ (ತೆ)	3 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಆರ್‌ಆರ್‌ಆರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಅಟ್ಯಾಕ್ (ಹಿ)	4 ಪ್ರದರ್ಶನಗಳು
ಸಂಗಂ	
ಜೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು

ಇವಿಎಂ ನಿಷೇಧಿಸಿ, ಬ್ಯಾಲೆಟ್ ಪೇಪರ್ ಬಳಸಿ

ಚುನಾವಣಾ ಆಯೋಗಕ್ಕೆ ಪತ್ರ ಬರೆದು ಆಗ್ರಹ



ಮೈಸೂರು,ಏ.5(ಎಂಟಿವೈ)– ಪ್ರಜಾಪ್ರಭುತ್ವ ಉಳಿವಿಗಾಗಿ ಇವಿಎಂ ನಿಷೇಧಿಸಿ, ಬ್ಯಾಲೆಟ್ ಪೇಪರ್ ಮತಪತ್ರ ಬಳಸುವಂತೆ ರಾಜ್ಯ ಚುನಾವಣಾ ಆಯೋಗವನ್ನು ಒತ್ತಾಯಿಸಿ ಅಂಚೆಪತ್ರ ಚಳವಳಿ ನಡೆಸಲಾಯಿತು. ಮೈಸೂರಿನ ನಗರ ಪಾಲಿಕೆ ಕಚೇರಿ ಮುಂದೆ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಸದಸ್ಯರು ಅಂಚೆ ಚಳವಳಿ ನಡೆಸಿ, ಪೋಸ್ಟ್ ಬಾಕ್ಸ್‌ಗೆ ಅಂಚೆ ಪತ್ರಗಳನ್ನು ಪೋಸ್ಟ್ ಮಾಡಿ ಪ್ರತಿಭಟಿಸಿದರು.

ಇತ್ತೀಚೆಗೆ ಇವಿಎಂ ಕಾಣೆಯಾಗಿರುವುದು ವರದಿಯಾಗಿದೆ. ಸಾಫ್ಟ್‌ವೇರ್ ದುರ್ಬಳಕೆ ಮಾಡಿಕೊಂಡು ಅಕ್ರಮವೆಸಗಲಾಗುತ್ತಿದೆ. ಹಾಗಾಗಿ ರಾಜ್ಯ ಚುನಾವಣಾ ಆಯೋಗ ಇವಿಎಂ ನಿಷೇಧಿಸಿ ಮತಪತ್ರ ಜಾರಿಗೊಳಿಸಬೇಕೆಂದು ಆಗ್ರಹಿಸಿದರು. ಮುಂದಿನ ಚುನಾವಣೆಗಳಲ್ಲಿ ಬ್ಯಾಲೆಟ್ ಮತಪತ್ರ ಜಾರಿಗೆ ತರದಿದ್ದಲ್ಲಿ ಚುನಾವಣೆ ಬಹಿಷ್ಕರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಎನ್.ಭಾಸ್ಕರ್, ಸಮಿತಿ ಕಾರ್ಯದರ್ಶಿ ಎಂ.ಮಹದೇವಸ್ವಾಮಿ, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಪ್ರಗತಿಪರ, ದಲಿತ ಸಂಘಟನೆಗಳ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸತತ 15ನೇ ದಿನವೂ ಪೆಟ್ರೋಲ್, ಡೀಸೆಲ್ ಬೆಲೆ ಭಾರೀ ಏರಿಕೆ

ನವದೆಹಲಿ,ಏ.5–ಸತತ 15ನೇ ದಿನವೂ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ದುಬಾರಿಯಾಗಿದೆ. ಇಂದು ಲೀಟರ್ ಪೆಟ್ರೋಲ್ ಬೆಲೆ 82 ಪೈಸೆ ಏರಿಕೆಯಾದರೆ ಡೀಸೆಲ್ ಬೆಲೆ 77



ಪೈಸೆ ಏರಿಕೆಯಾಗಿದೆ. ಸೋಮವಾರ ಬೆಂಗಳೂರಿನಲ್ಲಿ 1 ಲೀ. ಪೆಟ್ರೋಲ್ ಬೆಲೆ 109.43 ರೂ. ಇದ್ದರೆ ಡೀಸೆಲ್ 93.24 ರೂ. ಇತ್ತು. ಇಂದು 1 ಲೀ. ಪೆಟ್ರೋಲ್ ದರ 110.25 ರೂ., ಡೀಸೆಲ್ 94.01 ರೂ.ಗೆ ಏರಿಕೆಯಾಗಿದೆ. ಕಳೆದ 15 ದಿನದಲ್ಲಿ ಪೆಟ್ರೋಲ್ ದರ 9.67 ರೂ. ಡೀಸೆಲ್ 9 ರೂ. ಏರಿಕೆಯಾಗಿದೆ. ಮಾ.22ರಂದು 1 ಲೀ. ಪೆಟ್ರೋಲ್‌ಗೆ 100.58 ಇತ್ತು. ಆದರೆ ಈಗ 110 ರೂ.ಗೆ ಏರಿಕೆಯಾಗಿದೆ. 85.01 ರೂ. ಇದ್ದ ಡೀಸೆಲ್ ದರ ಈಗ 94.01 ರೂ.ಗೆ ಏರಿಕೆಯಾಗಿದೆ.

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ

MysoreSilk heritage weaves

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

3ನೇ ಮತ್ತು 4ನೇ ಮಹಡಿ, ಜನೋಪಯೋಗಿ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು–560001.
ದೂರವಾಣಿ: 080–25586550/25586399, ಫ್ಯಾಕ್ಸ್: 080–25587020 ಇ–ಮೇಲ್: info@ksicsilk.com

ಸಂಖ್ಯೆ:ಕೆಎಸ್‌ಐಸಿ/ಪಿಡಿ/ಎಸ್‌ಡಬ್ಲ್ಯೂಎಫ್/ಮರುಟೆಂಡರ್/ಕ್ಯಾಂಟೀನ್/21/2022–23 ದಿನಾಂಕ: 04–04–2022

ಕೆಎಸ್‌ಐಸಿ ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರು ಘಟಕದ ಕ್ಯಾಂಟೀನ್‌ಗೆ 1 ಮೇ 2022 ರಿಂದ 31 ಜುಲೈ 2022 ರವರೆಗೆ ತ್ರೈಮಾಸಿಕ ಅವಧಿಗೆ ಉಪಹಾರ ಮಂದಿರಕ್ಕೆ ಕಿರಾಣಿ/ದಿನಸಿ ಸಾಮಗ್ರಿಗಳ ಖರೀದಿಗಾಗಿ ಮರು ಟೆಂಡರ್ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಪ್ರತಿಷ್ಠಿತ ವ್ಯಕ್ತಿಗಳು / ಸಂಸ್ಥೆಗಳಿಂದ ಕೆಎಸ್‌ಐಸಿ ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರು ಘಟಕದ ಕ್ಯಾಂಟೀನ್‌ಗೆ **1 ಮೇ 2022 ರಿಂದ 31 ಜುಲೈ 2022** ರವರೆಗೆ ತ್ರೈಮಾಸಿಕ ಅವಧಿಗೆ ಕಿರಾಣಿ / ದಿನಸಿ ಸಾಮಗ್ರಿಗಳ ಖರೀದಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಕಡತ, ವೇಳಾಪಟ್ಟಿ ನಿಯಮಗಳು ಮತ್ತು ಷರತ್ತುಗಳನ್ನು, ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **www.eproc.karnataka.gov.in** ಇಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. **ಇ.ಎಂ.ಡಿ ರೂ. 20,000/– ದೊಂದಿಗೆ** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **16–04–2022ರಂದು ಅಪರಾಹ್ನ 3.00 ಗಂಟೆಯವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **18–04–2022ರಂದು ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ಈ ಮೇಲಿನ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಸಹಾಯವಾಣಿ ಕೇಂದ್ರ ಸಂಖ್ಯೆ: **080–46010000 / 22631200** ಮೂಲಕ ಪಡೆದುಕೊಳ್ಳಬಹುದಾಗಿದೆ.

ವಾಸಾಸಂಇ/ವಾ.ಪ್ರ/49/ಅಡ್ವರ್ಟೋರ್/2022–23 ಸಹಿ/– ಪ್ರಧಾನ ವ್ಯವಸ್ಥಾಪಕರು (ಸಂ)

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ




ಪ್ರಥಮ ವರ್ಷದ ಸವಿನೆನಪು

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷವಾಯಿತು ಭಗವಂತ ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ.

ದುಃಖತಪ್ತರು: ತಂದೆ ಎಂ.ಆರ್. ರಾಚಯ್ಯ, ತಾಯಿ. ಎಂ.ರಾಚಮ್ಮ ಹಾಗೂ ಕುಟುಂಬವರ್ಗದವರು, ಆನಂದ ಜ್ಯೋತಿ ಕಾಲೋನಿ ಕೊಳ್ಳೇಗಾಲ.

ಎಂ.ಆರ್.ಸತೀಶ್
ಜನನ : 28.01.1977
ಮರಣ: 07.04.2021




2ನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ದುಃಖತಪ್ತರು: ಪತ್ನಿ: ದೇವೀರಮ್ಮ ಚಿಕ್ಕಣ್ಣ, ಮಾಜಿ ಅಧ್ಯಕ್ಷರು ವರುಣ ಗ್ರಾಮ ಪಂಚಾಯ್ತಿ, ಮಕ್ಕಳು: ಶಿಲ್ಪ ಪುಟ್ಟಮಾದಪ್ಪ ಮತ್ತು ಕುಟುಂಬವರ್ಗ

ಅಂಗಡಿ ಚಿಕ್ಕಣ್ಣ
ಮಾಜಿ ಅಧ್ಯಕ್ಷರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಚಿಕ್ಕಹಳ್ಳಿ

ಶಿವಗಣಾರಾಧನಾ ಆಹ್ವಾನ ಪತ್ರಿಕೆ



ಶ್ರೀ ಕೆ.ಪಿ. ದಯಾನಂದ

ಇವರು ದಿ.28.03.2022 ಸೋಮವಾರದಂದು ಶಿವೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಶಿವಗಣಾರಾಧನೆಯನ್ನು ದಿ.07.04.2022 ಗುರುವಾರ ಬೆಳಿಗ್ಗೆ 10.30 ಗಂಟೆಗೆ ಮೃತರ ಸ್ವಗೃಹ (ನಂ.403/ಎ, ಅಹಿಂಸಾ ಮಾರ್ಗ, ಸಿದ್ಧಾರ್ಥನಗರ) ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದಿದ್ದವರು ಇದ್ದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ತಂದೆ: ಕೆ.ಎಸ್.ಪರಶಿವಮೂರ್ತಿ, ತಾಯಿ: ಕೆ.ವಿ.ಮೀನಾಕ್ಷಮ್ಮ ಹಾಗೂ ಕುಟುಂಬವರ್ಗದವರು

ನಗರಸಭಾ ಕಾರ್ಯಾಲಯ, ಚಾಮರಾಜನಗರ

ಸಂಖ್ಯೆ : ನಸಚಾ/ತಾಂ.ವಿ/ಕಿ.ಅ/ಟಿ.ಎನ್–01/2022–23, ದಿನಾಂಕ : 04.04.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರ್ಮೆಂಟ್ ಪೋರ್ಟಾಲ್ ಮುಖಾಂತರ)

ಚಾಮರಾಜನಗರ ನಗರಸಭೆಯ ಅನುದಾನದಡಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ನೋಂದಾಯಿತ ಆರ್ಹ ಗುತ್ತಿಗೆದಾರರಿಂದ ಕೆ.ಡ.ಬ್ಲ್ಯೂ–1, ನಿಯಮಗಳಿಗನುಸಾರ ಏಕ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್ಮೆಂಟ್ ಪೋರ್ಟಾಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಟೆಂಡರ್ ವಿವರಗಳನ್ನು **www.eproc.karnakataka.gov.in** ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರನ್ನು ಇ–ಪ್ರೋಕ್ಯೂರ್ಮೆಂಟ್ ಮುಖಾಂತರ ಸಲ್ಲಿಸತಕ್ಕದ್ದು. ಇ–ಪ್ರೋಕ್ಯೂರ್ಮೆಂಟ್ ಮೂಲಕ ಆನ್‌ಲೈನ್ ಗುತ್ತಿಗೆದಾರರು ಭರ್ತಿ ಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ.12.04.2022 ಸಂಜೆ 5.30 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ.13.04.2022 ಸಂಜೆ 4.00 ಗಂಟೆ; ಈ ಕಾಮಗಾರಿಗಳ ಪೂರ್ಣಗೊಳಿಸುವ ಅವಧಿ : 30 ದಿನಗಳು (ಅಂದಾಜು ಮೊತ್ತ ಒಟ್ಟು ರೂ.ಲಕ್ಷಗಳಲ್ಲಿ) **1.Indent No :130397 ;** ಅಂದಾಜು ಮೊತ್ತ ರೂ.8.60 ಲಕ್ಷ : **EMD Rs : 21500;** ಕಾಮಗಾರಿಯ ವಿವರವನ್ನು ಕಛೇರಿಯ ಪ್ರಕಟಣೆ ಫಲಕದಲ್ಲಿ ಪ್ರಕಟಿಸಲಾಗುವುದು. ಇತರೆ ಷರತ್ತುಗಳ ಬಗ್ಗೆ ಸಂಬಂಧಪಟ್ಟ ತಾಂತ್ರಿಕ ಶಾಖೆಯಲ್ಲಿ ಹಾಗೂ www.eproc.karnakataka.gov.in ವೆಬ್‌ಸೈಟನಲ್ಲಿ ತಿಳಿದುಕೊಳ್ಳಬಹುದು.

ಸಹಿ/–(ಸಿ.ಎಂ.ಆಶಾ)	ಸಹಿ/– (ಪಿ.ಸುಧಾ)	ಸಹಿ/– (ಕರಿಬಸವಯ್ಯ)
ಅಧ್ಯಕ್ಷರು, ನಗರಸಭೆ, ಚಾಮರಾಜನಗರ	ಉಪಾಧ್ಯಕ್ಷರು, ನಗರಸಭೆ, ಚಾಮರಾಜನಗರ	ಪೌರಾಯುಕ್ತರು, ನಗರಸಭೆ, ಚಾಮರಾಜನಗರ

ವಾಸಾಸಂಇಹಿಸನಿಚಾ.ನಗರ:07:2022–23

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸಂ: ಮೈನಪಾ/ಹೆ.ಆ/ಟಿ.ಎನ್–01/2021–22/ ದಿನಾಂಕ: 05–04–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್–2000 ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆ.ಡಬ್ಲ್ಯೂ ನಿಯಮದನ್ವಯ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **"E-procurement" Portal** ಮುಖಾಂತರ ವಿವಿಧ ಅನುದಾನಗಳಡಿ ಟೆಂಡರ್ ಆಹ್ವಾನಿಸಲಾಗಿದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಹಾಗೂ ಇ–ಪೋರ್ಟಲ್ ಮುಖಾಂತರ ಪಡೆಯಬಹುದಾಗಿರುತ್ತದೆ.

ಕ್ರ. ಸಂ	ವಿವರ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಪ್ರಕಟಣೆ/ಇಂಡೆಂಟ್ ಸಂಖ್ಯೆ	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	ಡೇ–ನಲ್ಮ್ ಅಭಿಯಾನದ ಎಸ್.ಯು.ಹೆಚ್ ಉಪ ಘಟಕದಡಿ ಆಶ್ರಯ ಕೇಂದ್ರಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆ ಮಾಡುವುದು	62,88,162/-	NULM2, NULM3, NULM4	30-03-2022	07-04-2022	08-04-2022
2	ಡೇ–ನಲ್ಮ್ ಅಭಿಯಾನದ ಎಸ್.ಯು.ಹೆಚ್ ಉಪ ಘಟಕದಡಿ ಆಶ್ರಯ ಕೇಂದ್ರಗಳಿಗೆ ಮೂಲಭೂತ ಸೌಕರ್ಯ ಮತ್ತು ಸಲಕರಣೆ ಸಾಮಾಗ್ರಿಗಳನ್ನು ಸರಬರಾಜು ಮಾಡುವುದು.	45,91,950/-	DMA/2021-22/IND13753 DMA/2021-22/IND13740 DMA/2021-22/IND13750 DMA/2021-22/IND13751 DMA/2021-22/IND13752 DMA/2021-22/IND13837 DMA/2021-22/IND13840	30-03-2022	07-04-2022	08-04-2022
3	ಡೇ–ನಲ್ಮ್ ಅಭಿಯಾನದ ಎಸ್.ಯು.ಎಸ್.ವಿ ಉಪಘಟಕದಡಿ ಆಹಾರ ಪದಾರ್ಥ ಮಾರಾಟ ಮಾಡುವ ಬೀದಿ ಬದಿ ವ್ಯಾಪಾರಿಗಳಿಗೆ ಎಫ್.ಎಸ್.ಎಸ್.ಎ.ಐ ಪ್ರಮಾಣ ಪತ್ರವನ್ನು ನೀಡುವ ಸಂಬಂಧ ತರಬೇತಿ ಆಯೋಜಿಸಲು ವಿವಿಧ ಸಾಮಾಗ್ರಿ ಮತ್ತು ಸೇವೆಗಳನ್ನು ಒದಗಿಸುವುದು	51,37,600/-	FSSAI1, FSSAI2, FSSAI3	05-04-2022	12-04-2022	12-04-2022
4	ಡೇ–ನಲ್ಮ್ ಅಭಿಯಾನದ ಎಸ್.ಎಂ.ಐ.ಡಿ ಉಪಘಟಕದಡಿ ಸ್ವ–ಸಹಾಯ ಸಂಘ ಮತ್ತು ಪ್ರದೇಶ ಮಟ್ಟದ ಒಕ್ಕೂಟಗಳಿಗೆ 2 ದಿನದ ವಿವಿಧ ಸಾಮಾಗ್ರಿ ಮತ್ತು ಸೇವೆಗಳನ್ನು ಒದಗಿಸುವುದು	16,57,600/-	SHG/ALF1	30-03-2022	07-04-2022	08-04-2022
5	ಪಿ.ಎಂ ಸ್ವಾ–ನಿಧಿ ಯೋಜನೆಯಡಿ ಗುರುತಿಸಲ್ಪಟ್ಟ ಬೀದಿ ಬದಿ ವ್ಯಾಪಾರಿಗಳ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ಕೈಗೊಳ್ಳುವುದು.	8,70,300/-	PMS SURVEY	30-03-2022	07-04-2022	08-04-2022

ಸಹಿ/– ಹೆಚ್ಚುವರಿ ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು